# ಅನುದಿನದ ಆಹಾರ

## Anudinada Ahara - June 2014

ಜೂನ್ - 2014

ಮರ 15 ಹಣ್ಣು 6 TREE 15 FRUIT 6

## ಮಾರ್ಗ ತಪ್ಪಿದವರನ್ನು ಮಾರ್ಪಡಿಸುವದು ಹೇಗೆ?

"ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು ಹೇಳುವೆನು ಅಂದುಕೊಂಡು ಎದ್ದು ತನ್ನ ತಂದೆಯ ಹತ್ತಿರ ಬಂದನು" ಅವನು ಇನ್ನೂ ದೂರದಲ್ಲಿರುವಾಗಲೇ ಅವನ ತಂದೆಯು ಅವನನ್ನು ಕಂಡು ಕನಿಕರಪಟ್ಟು ಓಡಿ ಬಂದು ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಬಹಳವಾಗಿ ಮುದ್ದಿಟ್ಟನು" (ಲೂಕ. 15:18–20).

ಕೆಟ್ಟಮಗನ ಸಾಮ್ಯ ಎಲ್ಲರಿಗೂ ತಿಳಿದದ್ದೇ. ಕೆಟ್ಟುಹೋದ ಮಗನ ಬಳಿ ತಂದೆಯು ಯಾವ ರೀತಿಯಲ್ಲಿ ನಡೆದುಕೊಂಡನು ಎಂಬುದನ್ನು ಸ್ವಲ್ಪ ಆಲೋಚಿಸಿರಿ. ಅದರಿಂದ ನಾವು ಕಲಿತುಕೊಳ್ಳಬೇಕಾದ ಪಾಠಗಳೂ ಇರುವದು. ದೇವರ ಆತ್ಮನು ನಿಮ್ಮನ್ನು ಸಕಲ ಸತ್ಯದೊಳಗೆ ನಡೆಸಲಿ.

ಲೂಕನ ಸುವಾರ್ತೆ 15ನೇ ಅಧ್ಯಾಯದಲ್ಲಿ ಮೂರು ಸಾಮ್ಯಗಳನ್ನು ಕರ್ತನು ಹೇಳುತ್ತಾನೆ. ಮೊದಲನೆಯದು, ನೂರು ಕುರಿಗಳಲ್ಲಿ ತಪ್ಪಿಸಿಕೊಂಡ ಒಂದು ಕುರಿಯ ಸಾಮ್ಯ (ಲೂಕ. 15:4–7). ಎರಡನೆಯದು, ಹತ್ತು ಬೆಳ್ಳಿ ಕಾಸುಗಳ (ಪಾವಲಿಗಳು)ಲ್ಲಿ ಒಂದು ಬೆಳ್ಳಿ ಕಾಸು ಕಾಣದೇ ಹೋದ ಸಾಮ್ಯ (ಲೂಕ. 15:8–10). ಮೂರನೆಯದು ತಂದೆಯಿಂದ ದೂರಹೋದ ಕೆಟ್ಟ ಮಗನ ಸಾಮ್ಯ.

ಮೊದಲನೆಯದರಲ್ಲಿ ಕುರಿ ತಪ್ಪಿಸಿಕೊಂಡು ಹೋದಾಗ, ಕುರುಬನು ಅದನ್ನು ಹುಡುಕಿ, ತನ್ನ ತೋಳಿನಲ್ಲಿ ಅದನ್ನು ಹೊತ್ತುಕೊಂಡು ಮನೆಗೆ ಬಂದನು. ಹಾಗೆಯೇ ಹತ್ತು ಕಾಸುಗಳಲ್ಲಿ ಒಂದು ಕಾಸು ಕಾಣದೇ ಹೋದಾಗ ಆ ಮನೆಯ ಸ್ತ್ರೀ ದೀಪಹಚ್ಚಿ ಮನೆಯನ್ನು ಗುಡಿಸಿ, ಎಚ್ಚರದಿಂದ ಹುಡುಕಿದಳು. ಮೂರನೆಯ ಸಾಮ್ಯದಲ್ಲಿ ನೂರರಲ್ಲಿ ಒಂದಲ್ಲ, ಹತ್ತರಲ್ಲಿ ಒಂದಲ್ಲ, ಇಬ್ಬರಲ್ಲಿ ಒಬ್ಬ ಮಗನು ತನ್ನ ಭಾಗದ ಆಸ್ತಿಯನ್ನು

ತಂದೆಯಿಂದ ಪಡೆದುಕೊಂಡು ದೂರದೇಶಕ್ಕೆ ಹೊರಟುಹೋದನು. ಅಲ್ಲಿ ಸ್ನೇಹಿತರೊಂದಿಗೆ ದುಷ್ಟಜೀವನವನ್ನು ನಡೆಸಿ ಇದ್ದ ಆಸ್ತಿಯನ್ನೆಲ್ಲಾ ಕಳೆದುಕೊಂಡು ನಿರ್ಗತಿಕನಾದನು. ತಂದೆಯು ಅವನನ್ನು ಹುಡುಕಿಕೊಂಡು ಹೋಗಲಿಲ್ಲ. ತನ್ನ ಕೆಲಸಗಾರರನ್ನೂ ಕಳುಹಿಸಿ ತನ್ನ ಮಗನನ್ನು ಹುಡುಕಿ ಮನೆಗೆ ಕರೆತರಲಿಲ್ಲ.

ಕುರಿಗಿಂತಲೂ, ಬೆಳ್ಳಿ ಕಾಸಿಗಿಂತಲೂ, ಮಗನು ಸಾವಿರ ಪಾಲು ಹೆಚ್ಚಿನವನಲ್ಲವಾ? ಎರಡು ಮಕ್ಕಳಲ್ಲಿ ಒಬ್ಬ ಮಗನನ್ನು ಕಳೆದುಕೊಳ್ಳುವದು ಎಷ್ಟೊಂದು ವೇದನೆಯಾದ ಸಂಗತಿ. ನೂರು ಕುರಿಗಳಲ್ಲಿ ಒಂದು ಕುರಿ ತಪ್ಪಿಸಿಕೊಂಡು ಕಾಣದೆ ಹೋದರೆ ಒಂದು ಹೋದರೇನು ಇನ್ನೂ ತೊಂಬತ್ತೊಂಬತ್ತು ಕುರಿಗಳಿರುವವಲ್ಲಾ. ಎಂದು ಕುರುಬನು ಆದರಣೆ ಹೊಂದಲು ಸಾಧ್ಯ. ಹತ್ತು ಕಾಸುಗಳಲ್ಲಿ ಒಂದು ಕಾಸು ಕಳೆದು ಹೋದರೆ ಇನ್ನು ಒಂಬತ್ತು ಕಾಸುಗಳಿವೆಯಲ್ಲಾ ಎಂದು ಆ ಸ್ತ್ರೀ ಸಮಾಧಾನ ಹೊಂದಲು ಸಾಧ್ಯ. ಆದರೆ ಇದ್ದ ಇಬ್ಬರಲ್ಲಿ ಒಬ್ಬನನ್ನು ಕಳೆದುಕೊಂಡ ಆ ತಂದೆ ಮಗನನ್ನು ಹುಡುಕದೇ ಹೋದದ್ದಕ್ಕೆ ಕಾರಣವೇನು? ಯೋಚಿಸಿನೋಡಿರಿ.

ಒಮ್ಮೆ ಅಮೇರಿಕಾದಿಂದ ಒಬ್ಬ ತಂದೆ ಬಹಳವಾದ ದುಃಖದಿಂದ ದೂರವಾಣಿಯ ಮೂಲಕ ನನ್ನೊಂದಿಗೆ ಮಾತನಾಡಿ "ಸಹೋದರನೇ, ನನಗೆ ಒಬ್ಬನೇ ಮಗನು ಬಹಳ ಮುದ್ದಿನಿಂದ ಬೆಳೆಸಿದೆನು. ಯೌವನ ಪ್ರಾಯದಲ್ಲಿ ಅವನನ್ನು ಸಂತೋಷಪಡಿಸಲು ಸ್ಪೋರ್ಟ್ಸ್ ಮಾಡಲ್ ಕಾರ್ ಕೊಂಡುಕೊಟ್ಟೆನು. ಈಗ ಅವನು ನನ್ನ ಮಾತು ಕೇಳುವದಿಲ್ಲ. ಕೆಟ್ಟ ಸ್ನೇಹಿತರೊಂದಿಗೆ ಸೇರಿ ಗಾಂಜಾ ಮೊದಲಾದ ಮಾದಕ ವಸ್ತುಗಳನ್ನು ಸೇವಿಸಲಾರಂಭಿಸಿರುವನು. ಅವನಿಂದ ನಾನು ದಿನವೂ ಕಣ್ಣೀರು ಸುರಿಸುವಂತಾಗಿದೆ" ಎಂದು ಹೇಳಿದರು. ಆಗ ನಾನು ಅವರಿಗೆ "ನೀವು ಚಿಂತಿಸಬೇಡಿ. ಮಗನನ್ನು ಕರ್ತನ ಹಸ್ತಗಳಲ್ಲಿ ಒಪ್ಪಿಸಿರಿ. ಕರ್ತನು ಅವನನ್ನು ಮಾರ್ಪಡಿಸಿ ಹಿಂದಕ್ಕೆ ಬರಮಾಡುವನು ಎಂದು ನಂಬಿರಿ" 2 ತಿಮೊ. 1:12ರಂತೆ "ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿಟ್ಟಿರುವದನ್ನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿದ್ದಾನೆ" ಎಂಬ ನಿಶ್ಚಯತ್ವದಿಂದ ನಿಮ್ಮ ಮಗನ ಜೀವಿತದಲ್ಲಿ ಕರ್ತನು ಪ್ರವೇಶಿಸುವಂತೆ "ದೇವರ ಬಳಿ ಪೂರ್ಣವಾಗಿ ಸಮರ್ಪಿಸಿರಿ" ಎಂದು ಹೇಳಿದೆನು.

ಕೆಟ್ಟ ಮಗನನ್ನು ತಂದೆ ಹುಡುಕಿಕೊಂಡು ಹೋಗಿದ್ದಿದ್ದರೆ; ಆ ಮಗನು ಮಾನಸಾಂತರ ಪಟ್ಟು ಹಿಂದಿರುಗಿ ಬರುತ್ತಿರಲಿಲ್ಲ. ಪುನಃ ಪುನಃ ಪಾಪ ಜೀವಿತಕ್ಕೆ ಹಿಂದಿರುಗುತ್ತಿದ್ದ ಅವನನ್ನು ಸೃಷ್ಟಿಸಿದಾತನು ಆ ಕುಟುಂಬಕ್ಕೆ ಮಗನನ್ನಾಗಿ ಕೊಟ್ಟವನು. ಅವನಿಗಾಗಿ ರಕ್ತ ಚೆಲ್ಲಿದವನು, ಎಲ್ಲವೂ ಕರ್ತನೇ ಆಗಿದ್ದಾನೆ. ಅಪೊ. ಪೌಲನು ಹೇಳುತ್ತಾನೆ "ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ



ಕೃತಜ್ಞತಾಸ್ತುತಿಯನ್ನು ಪ್ರಾರ್ಥನೆ ವಿಜ್ಞಾಪನೆಗಳನ್ನು ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಿಮ್ಮ ಹೃದಯಗಳನ್ನು ಯೋಚನೆಗಳನ್ನು ಕ್ರಿಸ್ತಯೇಸುವಿನಲ್ಲಿ ಕಾಯುವದು" ಎಂದು (ಫಿಲಿ.4:6,7) ಅಪೊ. ಪೇತ್ರನು ಹೇಳುತ್ತಾನೆ. "ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ" ಎಂದು (1 ಪೇತ್ರ. 5:7).

ಇಂದಿನ ಪ್ರಪಂಚದಲ್ಲಿ ಅನೇಕ ತಂದೆ ತಾಯಿಗಳ ಸಮಸ್ಯೆ ಚಿಂತೆ ಎಲ್ಲವೂ ತಮ್ಮ ಮಕ್ಕಳ ಕುರಿತಾಗಿಯೇ. ಬಾಲ್ಯದಲ್ಲಿ ಮಕ್ಕಳನ್ನು ಅತಿಯಾದ ಮುದ್ದಿನಿಂದ ಬೆಳೆಸುವದು. ಅಗತ್ಯತೆಗೆ ಮೀರಿ ಸೌಕರ್ಯ ಸವಲತ್ತುಗಳನ್ನು ಒದಗಿಸುವದು. ಎಲ್ಲಕ್ಕೂ ಮಿಗಿಲಾಗಿ ತಮ್ಮಕ್ಕಳ ಆತ್ಮೀಕ ಬೆಳವಣಿಗೆಯ ಕುರಿತು ಚಿಂತಿಸದೇ ಇರುವದು. ಬೆಳೆದು ದೊಡ್ಡವರಾದಾಗ ನವನಾಗರೀಕತೆಗೆ ದಾಸರಾಗಿ ಜೀವಿತವನ್ನು ಹಾಳುಮಾಡಿಕೊಳ್ಳುವಾಗ ತಂದೆ ತಾಯಿಗಳ ದುಃಖ, ವ್ಯಾಕುಲ ಅವರ ಮನಸ್ಸಿನ ನೆಮ್ಮದಿಯನ್ನೇ ಹಾಳು ಮಾಡಿಬಿಡುವದು. ಆದ್ದರಿಂದ ನಿಮ್ಮ ಜೀವಿತದಲ್ಲಿ ಯಾರಿಂದ ಸಮಸ್ಯೆಗಳು ಉಂಟಾದರೂ, ಯಾವ ಸಮಸ್ಯೆಗಳೇ ಉದ್ಭವಿಸಿದರೂ ಅಥವಾ ಇತರರು ನಿಮ್ಮ ಬಳಿ ತಮ್ಮ ಸಮಸ್ಯೆಗಳನ್ನು ಹಂಚಿಕೊಂಡರೂ ಕರ್ತನ ಹಸ್ತಗಳಿಗೆ ಒಪ್ಪಿಸಿಕೊಟ್ಟು ಆತನನ್ನು ಸ್ತುತಿಸಿರಿ. ಆಗ ಕರ್ತನು ನಿಮಗಾಗಿ ಎಲ್ಲವನ್ನೂ ಮಾಡಿಮುಗಿಸುವನು.

## ನಾನು (I)

ರೆಮಿಂಗ್‌ಟನ್ ಎಂಬ ಸುಪ್ರಸಿದ್ಧ ಟೈಪ್‌ರೈಟರ್ ಕಂಪೆನಿಗೆ ಒಮ್ಮೆ ಭಕ್ತರೊಬ್ಬರು ಹೋಗಿದ್ದರು. ಅವರು ಆ ಕಂಪನಿಯ ಅಧಿಕಾರಿಯನ್ನು ಸಂಧಿಸಿ ಈ ಪ್ರಶ್ನೆಯನ್ನು ಕೇಳಿದರು, ನಿಮ್ಮ ಟೈಪ್‌ರೈಟರಿನ ಅಕ್ಷರಗಳಲ್ಲಿ ಯಾವ ಅಕ್ಷರವು ಶೀಘ್ರವಾಗಿ ಸವೆದುಹೋಗುತ್ತದೆ ಎಂದು. ಆ ಅಧಿಕಾರಿಯು ತಡಮಾಡದೆ I (ಐ) ಎಂಬ ಅಕ್ಷರವೇ ಎಂದು ಉತ್ತರಿಸಿದರು. ಹೌದು ಇಂಗ್ಲೀಷ್ ಅಕ್ಷರ I ನಾನು ಎಂಬ ಅರ್ಥವನ್ನು ಕೊಡುತ್ತದೆ. ನಾವು ಈ ನಾನತ್ವ ಇಲ್ಲವೇ ಸ್ವಾರ್ಥಕ್ಕೆ ನಮ್ಮ ಜೀವಿತದಲ್ಲಿ ಹೆಚ್ಚಿನ ಮಹತ್ವ ಕೊಡುತ್ತೇವೆ. ಶಿಲುಬೆಯ ಅನುಭವ ಮಾತ್ರ ಇದಕ್ಕೆ ಸೂಕ್ತ ಪರಿಹಾರ.

**ವಾಗ್ದಾನ ವಚನ – ವಿಮೋ. 23:25**

"ಆತನು ನಿಮ್ಮ ಅನ್ನಪಾನಗಳನ್ನು ಆಶೀರ್ವದಿಸುವನು.
ನಿಮ್ಮೊಳಗೆ ಯಾವ ವ್ಯಾಧಿಯೂ ಉಂಟಾಗದಂತೆ ಮಾಡುವನು"

## ನಿಮ್ಮ ವೈರಿಗಳನ್ನು ಪ್ರೀತಿಸಿರಿ

ಒಂದು ಸಾರಿ ಭಕ್ತರಾದ ಸಾಧುಸುಂದರ್ ಸಿಂಗ್‌ರವರು ಇಂಗ್ಲೆಂಡಿಗೆ ಹೋಗಿದ್ದರು. ಆಗ ಅಲ್ಲಿನ ಒಬ್ಬ ಅನ್ವೇಷಕರು, ಅಯ್ಯಾ ವೈರಿಗಳನ್ನು ಪ್ರೀತಿಸಿರಿ ಎಂದು ಯೇಸುಸ್ವಾಮಿ ಹೇಳಿದ ಮಾತಿನ ಅರ್ಥವೇನು? ಎಂದು ಕೇಳಲು ಸುಂದರ್‌ಸಿಂಗ್‌ರವರು, ನಮ್ಮ ಭಾರತ ದೇಶದಲ್ಲಿ ಮಾವಿನ ಮರಗಳಿವೆ ಹಣ್ಣಿನ ಕಾಲದಲ್ಲಿ ಯಾರಾದರೂ ಅವುಗಳ ಮೇಲೆ ಕಲ್ಲೆಸೆದರೆ ಮರವು ಕಲ್ಲಿಗೆ ಬದಲಾಗಿ ಮಾವಿನ ಹಣ್ಣನ್ನು ಕೊಡುವದು. ಇದೇ ವೈರಿಗಳನ್ನು ಪ್ರೀತಿಸಬೇಕೆಂಬುದರ ಅರ್ಥ ಎಂದು ಉತ್ತರ ಕೊಟ್ಟರು.

## ನಾಯಿ ಕಲಿಸಿದ ಪಾಠ

ಹೃದಯವನ್ನು ಕಠಿಣಪಡಿಸಿಕೊಂಡು ಯಾವುದಕ್ಕೂ ಪಶ್ಚಾತ್ತಾಪ ಪಡದೆ ಪ್ರೀತಿಯಿಲ್ಲದೆ ಜೀವಿಸುತ್ತಿದ್ದ ಒಬ್ಬ ಕ್ರೈಸ್ತ ಸಹೋದರನು ಒಮ್ಮೆ ದಾರಿಯಲ್ಲಿ ಹಾದು ಹೋಗುತ್ತಿದ್ದಾಗ ಒಂದು ಸಾವಿನ ಮೆರವಣಿಗೆಯನ್ನು ಕಂಡು ಬಹಳ ಆಶ್ಚರ್ಯಗೊಂಡನು. ಏಕೆಂದರೆ ಅದು ಬಹು ದೂರ ಸಾಲುಗಟ್ಟಿ ಸಾಗುತ್ತಿದ್ದ ಜನರಿಂದ ಕೂಡಿತ್ತು. ಇನ್ನೂ ಅಧಿಕ ಆಶ್ಚರ್ಯವೆಂದರೆ ಒಂದು ನಾಯಿ ಆ ಗುಂಪನ್ನು ಮುನ್ನಡೆಸುತ್ತಾ ಸಾಗಿತ್ತು. ಬಹಳ ಕುತೂಹಲಗೊಂಡ ಈತನು ಪೆಟ್ಟಿಗೆ ಹೊರುತ್ತಿದ್ದವರ ಬಳಿಗೆ ಹೋಗಿ ಅದರ ಕುರಿತು ವಿಚಾರಿಸಿದಾಗ ತಿಳಿಯಿತು, ತೀರಿಹೋದ ವ್ಯಕ್ತಿಯು ಆ ನಾಯಿಯಿಂದ ಕಚ್ಚಿಸಿಕೊಂಡದ್ದರ ಪರಿಣಾಮ ಸಾವನ್ನಪ್ಪಿದ್ದರು ಎಂದು. ಅದಕ್ಕೆ ದುಃಖಗೊಂಡು ಪಶ್ಚಾತ್ತಾಪ ಪಡುತ್ತಾ ಆ ನಾಯಿಯೇ ಮುಂದೆ ಮುಂದೆ ಸಾಗುತ್ತಾ ಸಮಾಧಿಯ ಕಡೆಗೆ ಹೋಗುತ್ತಿದೆ ಎಂದು.

ಒಂದು ನಾಯಿಗಿರುವ ಮನಸ್ಸಾಕ್ಷಿ ಸಹ ನನ್ನೊಳಗೆ ಇಲ್ಲವಲ್ಲಾ. ಪ್ರೀತಿ ಕನಿಕರ ಕರುಣೆ ನನ್ನೊಳಗೆ ಇಲ್ಲವಲ್ಲಾ ಎಂದು ಆ ಸಹೋದರನು ಆಗ ಪಶ್ಚಾತ್ತಾಪ ಪಡುತ್ತಾ ತನ್ನನ್ನು ಕರ್ತನಿಗೆ ಒಪ್ಪಿಸಿಕೊಟ್ಟು ಅವರ ಬಳಿಯಲ್ಲಿ ಆ ನಾಯಿಯನ್ನು ನನಗೆ ಒಂದು ವಾರದ ಮಟ್ಟಿಗೆ ಕೊಡುವದಾದರೆ ಅದರಿಂದ ನಾನು ಬಹಳಷ್ಟು ಕಲಿಯಲು ಸಾಧ್ಯವಾಗುವದು ಎಂದು ಬೇಡಿಕೊಂಡನು. ಅದಕ್ಕೆ ಅವರು ಉತ್ತರಿಸುತ್ತಾ ಹೀಗೆ ಹೇಳಿದರು, ಅದಕ್ಕೆ ನೀನು ಬಹಳಷ್ಟು ಸಮಯ ಕಾಯಬೇಕಾಗುತ್ತದೆ. ಏಕೆಂದರೆ ಹಿಂದೆ ಹಿಂಬಾಲಿಸಿಕೊಂಡು ಬರುತ್ತಿರುವ ಜನರೆಲ್ಲರೂ ಈ ನಾಯಿಯ ಸಲುವಾಗಿಯೇ ಹಿಂದೆ ಬರುತ್ತಿದ್ದಾರೆ. ನಿಮ್ಮ ಸರದಿ ಬಂದಾಗ ನೀವು ಕರೆದುಕೊಂಡು ಹೋಗಬಹುದು ಎಂದರಂತೆ.



## ನೀತಿವಂತರ ಕೊರತೆ

ಒಮ್ಮೆ ಒಬ್ಬ ದೇವಭಕ್ತನು ಹೊರದೇಶಕ್ಕೆ ಹೋಗಿ ಭಾರತಕ್ಕೆ ಹಿಂದಿರುಗುತ್ತಿದ್ದರು. ಆಗ ಅವರು ಸುಂಕದವರನ್ನು ಹಾದುಬರುವಾಗ ಸುಮ್ಮನೆ ತೊಂದರೆ ಕೊಡಬಹುದು ಎಂದು ಒಂದೆರಡು ವಸ್ತುಗಳನ್ನು ಅವರಿಂದ ಮರೆಮಾಚಲು ಪ್ರಯತ್ನಿಸಿದರು. ಆಗ ದೇವರಾತ್ಮನು ಅವರೊಂದಿಗೆ "ಮರೆಮಾಡಬೇಡ.... ನನಗೆ ಹಣದ ಕೊರತೆಯಿಲ್ಲ, ನನಗಿರುವದು ನೀತಿವಂತರ ಕೊರತೆಯೇ" ಎಂದು ಹೇಳಿದ ಹಾಗಾಯಿತು. ಕೂಡಲೆ ಅವರು ಯಾವದನ್ನೂ ಮರೆಮಾಡದೆ ಮುಂದೆ ಸಾಗಿದರು.

## ದೇವರ ಕಾಣಿಕೆ

ಒಬ್ಬ ವ್ಯಾಪಾರಿಯು ದೇವರ ಸೇವಕನ ಬಳಿ ಬಂದು ಅಯ್ಯಾ ನಾನು ಇನ್ನು ಮುಂದೆ ನನ್ನ ವಾರದ ಸಂಬಳದಲ್ಲಿ ದಶಮಭಾಗವನ್ನು ಕೊಡಲು ಬಯಸುತ್ತೇನೆ ಎಂದು ಹೇಳಿ 100/– ರೂಪಾಯಿಂದ 10/– ರೂಗಳನ್ನು ಕಾಣಿಕೆಯಾಗಿ ಕೊಟ್ಟನು. ಕೆಲವು ವರ್ಷಗಳ ತರುವಾಯ ಅವನ ಸಂಬಳ 750/– ರೂಗಳಾಗಿದ್ದರಿಂದ ವಾರಕ್ಕೆ 75/– ಕೊಟ್ಟನು. ತನ್ನ ವಾಗ್ದಾನದ ಪ್ರಕಾರ ಆ ಸೇವಕರಿಗೆ ದಶಮಭಾಗವನ್ನು ತಂದು ಕೊಡುತ್ತಿದ್ದನು. ಆತನು ಇನ್ನೂ ಒಳ್ಳೆ ಕೆಲಸವನ್ನು ಕಂಡುಕೊಂಡು ವಾರಕ್ಕೆ 1000/–, ತರುವಾಯ 2000/– ಕೊನೆಗೆ ಬಹು ಅಭಿವೃದ್ಧಿಯಾಗಿ ವಾರಕ್ಕೆ 5000/– ಸಂಬಳ ಬರುತ್ತಿತ್ತು. ಒಂದು ದಿನ ಅವನು ಸೇವಕರ ಬಳಿ ಬಂದು, ಅಯ್ಯಾ, ಅನೇಕ ವರ್ಷಗಳ ಹಿಂದೆ ನಾನು ದೇವರಿಗೆ ದಶಮಭಾಗ ಕೊಡುವದಾಗಿ ವಾಗ್ದಾನ ಮಾಡಿದೆ. ನನಗೆ 100/– ಇದ್ದಾಗ 10/– ಕಾಣಿಕೆ ಕೊಡುತ್ತಿದ್ದೆ. ಆದರೆ ಈಗ ನನಗೆ 5000/– ಸಂಬಳವಿರುವದರಿಂದ ವಾರಕ್ಕೆ ಕಾಣಿಕೆಯೇ 500/– ಕೊಡುತ್ತಿದ್ದೇನೆ. ಆದರೆ ಇಷ್ಟೊಂದು ಹಣ ನನಗೆ ಕೊಡುವದಕ್ಕೆ ಆಗುವದಿಲ್ಲ. ಆದ್ದರಿಂದ ನಾನು ಮಾಡಿದ ವಾಗ್ದಾನದಿಂದ ಬಿಡುಗಡೆ ಹೊಂದುವದು ಹೇಗೆ? ಎಂದು ಆಲೋಚನೆ ಕೇಳಿದನು.

ದೇವರ ಸೇವಕರು ಅವನನ್ನು ದೃಷ್ಟಿಸಿ ನೋಡಿ ಹೀಗಂದರು "ನೀನು ಆ ವಾಗ್ದಾನದಿಂದ ಬಿಡುಗಡೆಯಾಗಲು ಯಾವ ಮಾರ್ಗವೂ ಇಲ್ಲ. ಆದರೆ ಒಂದು ಉಪಾಯವಿದೆ. ಅದೇನೆಂದರೆ, ನಾವು ಈಗ ಮೊಣಕಾಲೂರಿ ದೇವರಿಗೆ ನಿನ್ನ ಸಂಬಳವನ್ನು ಮೊದಲಿನಂತೆ ಕಡಿಮೆ ಮಾಡಿಬಿಡುವಂತೆ ಪ್ರಾರ್ಥನೆ ಮಾಡೋಣ. ಆಗ ನೀನು ಪುನಃ ವಾರಕ್ಕೆ 10/– ಮಾತ್ರ ಕಾಣಿಕೆ ಕೊಡಬಹುದು" ಎಂದರಂತೆ. "ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ, ದುಃಖದಿಂದಾಗಲಿ, ಬಲಾತ್ಕಾರದಿಂದಾಗಲಿ ಯಾರೂ ಕೊಡಬಾರದು" (2 ಕೊರಿಂ.9:7).

## ಚಕ್ರವರ್ತಿಯೂ ಭಿಕ್ಷುಕನೂ

ಒಂದು ಸಾರಿ ಚಕ್ರವರ್ತಿಯಾದ ಅಲೆಗ್ಸಾಂಡರನು ತನ್ನ ಆಸ್ಥಾನಿಕನೊಂದಿಗೆ ಹೋಗುತ್ತಿದ್ದಾಗ, ದಾರಿಯಲ್ಲಿ ಒಬ್ಬ ಭಿಕ್ಷುಕನು ಆತನನ್ನು ಕಂಡು ಬೇಡಿಕೊಂಡನು. ಭಿಕ್ಷುಕನು ಚಕ್ರವರ್ತಿಯಿಂದ ಭಿಕ್ಷೆ ಬೇಡುವದಕ್ಕೂ, ಕೈಚಾಚಿ ಕೇಳುವದಕ್ಕೂ ಹಕ್ಕಿರಲಿಲ್ಲ. ಆದರೆ ಚಕ್ರವರ್ತಿಯು ಕೆಲವು ಚಿನ್ನದ ನಾಣ್ಯಗಳನ್ನು ಎಸೆದನು. ಆಶ್ಚರ್ಯಗೊಂಡ ಆಸ್ಥಾನಿಕನು ಪ್ರಭುವೇ ಕೆಲವು ತಾಮ್ರದ ನಾಣ್ಯಗಳು ಭಿಕ್ಷುಕನ ಅವಶ್ಯಕತೆಯನ್ನು ಪೂರೈಸಲು ಸಾಕಾಗುತ್ತಿತ್ತು. ಚಿನ್ನದ ನಾಣ್ಯಗಳನ್ನು ಏಕೆ ಕೊಟ್ಟಿರಿ ಎಂದು ಕೇಳಿದನು.

ಅದಕ್ಕೆ ಚಕ್ರವರ್ತಿಯಾದ ಅಲೆಗ್ಸಾಂಡರನು ತಾಮ್ರದ ನಾಣ್ಯಗಳು ಭಿಕ್ಷುಕನ ಅವಶ್ಯಕತೆ ಪೂರೈಸಲು ಸಾಕಾದದ್ದು ನಿಜ. ಆದರೆ ಚಿನ್ನದ ನಾಣ್ಯಗಳು ಅಲೆಗ್ಸಾಂಡರನ ಕೊಡುವಿಕೆಯನ್ನು ಪೂರೈಸಲು ಯೋಗ್ಯವಾಗಿರುವದು ಎಂದು ಉತ್ತರಕೊಟ್ಟನು. ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ನಮ್ಮ ಕರ್ತನು ನಮ್ಮ ವಿಷಯದಲ್ಲಿ ಶಕ್ತನಾದಾತನು.

## ವಿಲ್ಲಿಯಂ ಬೂತ್

ವಿಲ್ಲಿಯಂ ಬೂತ್‌ರವರು ರಕ್ಷಣಾ ಸೈನ್ಯವೆಂಬ ಸಂಸ್ಥೆಯ ಸಂಸ್ಥಾಪಕರು ಒಮ್ಮೆ ಇವರು ಬಹಳ ಅಸ್ವಸ್ಥರಾದರು. ವೈದ್ಯರು ನಿರೀಕ್ಷೆಯನ್ನು ಬಿಟ್ಟರು. ಮರಣದ ಹಾಸಿಗೆಯಲ್ಲಿದ್ದಾಗ ಬಿಳಿ ವಸ್ತ್ರ ಧರಿಸಿದವರಾಗಿ ವಿಚಿತ್ರ ಲೋಕವನ್ನು ಕಂಡರು. ಅಲ್ಲಿ ಬಿಳಿ ವಸ್ತ್ರಧಾರಿಗಳಾದ ಇತರರನ್ನು ಕಂಡರು. ಅವರು ಕ್ರಿಸ್ತನ ನಿಮಿತ್ತವಾಗಿ ರಕ್ತಸಾಕ್ಷಿಗಳಾಗಿ ಸತ್ತ ಭಕ್ತರಾಗಿದ್ದರು. ಆಗ ವಿಲ್ಲಿಯಂ ಭೂಲೋಕದಲ್ಲಿದ್ದಾಗ ತಾನು ಎಷ್ಟು ಸ್ವಾರ್ಥನಾಗಿದ್ದು ಸಮಯವನ್ನು ವ್ಯರ್ಥವಾಗಿ ಕಳೆದುಕೊಂಡ ದೃಶ್ಯಗಳು ಒಂದೊಂದಾಗಿ ಬರಲಾರಂಭಿಸಿದಾಗ ವಿಲ್ಲಿಯಂರವರು ಓ ದೇವರೇ, ಇದು ಸ್ವರ್ಗವೇ, ನನ್ನ ಭೂಲೋಕದ ಸ್ವಾರ್ಥ ಜೀವಿತವು ನಿತ್ಯನಿತ್ಯವಾಗಿ ಬೆನ್ನಟ್ಟುವದೇ ನಾನು ಇನ್ನೊಂದು ಸಾರಿ ಜೀವಿಸುವದಾದರೆ.... ಎಂದು ನಾಚಿಕೆಯಿಂದ ಪ್ರಲಾಪಿಸಿದರು. ಆಗ ಕರ್ತನು ಅವರಿಗೆ "ಭೂಮಿಗೆ ಹಿಂತಿರುಗು ನನ್ನ ನಾಮಕ್ಕೆ ಯೋಗ್ಯನಾಗಿ ನಿದರ್ಶಿಸಿ ಜೀವಿಸಲು ನಾನು ನಿನಗೆ ಇನ್ನೊಂದು ಅವಕಾಶವನ್ನು ಕೊಡುತ್ತೇನೆ" ಎಂದು ಹೇಳಿದರು. ವಿಲ್ಲಿಯಂ ಬೂತಿಗೆ ಎಚ್ಚರವಾದಾಗ ಅದು ಕೇವಲ ಒಂದು ಕನಸಾಗಿತ್ತು. ಹೌದು, ಕರ್ತನು ನಮಗೆ ನೀಡಿರುವ ರಕ್ಷಣೆ ನಮಗೆ ಕೊಟ್ಟಿರುವ ಸಮಯವನ್ನು ನಾವು ವ್ಯರ್ಥಮಾಡಿಕೊಳ್ಳದೆ ಆತನಿಗಾಗಿ ಮಾಡಿ ಮುಗಿಸಬೇಕಾದವುಗಳನ್ನು ಬೇಗನೆ ಮಾಡಿ ಮುಗಿಸಬೇಕು.



## ಹೊಸ ಪಾತ್ರೆ

ಒಂದು ದಿನ ಸುಪ್ರಸಿದ್ಧ ರಸಾಯನ ವಿಜ್ಞಾನಿ ಮೈಕಲ್ ಫೆರಾಡೆಯವರ ಸಹಾಯಕನು ಆಕಸ್ಮಿಕವಾಗಿ ಬೆಳ್ಳಿ ಪಾತ್ರೆಯೊಂದನ್ನು ಬಲವಾದ ಆಮ್ಲ (ಆಸಿಡ್)ನಲ್ಲಿ ಕೆಡವಿಬಿಟ್ಟನು. ಕೂಡಲೇ ಆ ಪಾತ್ರೆಯು ಕರಗಿಹೋಯಿತು. ಆಗ ಫೆರಾಡೆಯವರು ಬಂದು ಆ ಆಮ್ಲಕ್ಕೆ ಕೆಲವು ರಾಸಾಯನಿಕ ವಸ್ತುಗಳನ್ನು ಹಾಕಿದರು. ಕರಗಿದ್ದ ಬೆಳ್ಳಿಯನ್ನು ಬೇರ್ಪಡಿಸಿ ಅದನ್ನು ಒಬ್ಬ ಅಕ್ಕಸಾಲಿಗನಿಗೆ ಕೊಟ್ಟು ಪುನಃ ಹೊಳೆಯುವ ಬೆಳ್ಳಿ ಪಾತ್ರೆಯನ್ನು ಮಾಡಿಸಿದರು. ನಾವೂ ಸಹ ಪಾಪದ ಕೆಸರಿನಲ್ಲಿ ಮುಳುಗಿ ಪಾಪದ ನಿಮಿತ್ತ ಕರಗಿಹೋದ ಪಾತ್ರೆಗಳಾಗಿದ್ದಾಗ ಯೇಸುಕ್ರಿಸ್ತನು ತನ್ನ ರಕ್ತದಿಂದ ನಮ್ಮನ್ನು ತೊಳೆದು ಕೊಳೆಯನ್ನು ಬೇರ್ಪಡಿಸಿ ನಮ್ಮನ್ನು ಹೊಸ ಪಾತ್ರೆಯನ್ನಾಗಿ ಮಾಡಿರುವನು. ಇನ್ನೆಂದಿಗೂ ಈ ಪಾತ್ರೆಯು ಕೆಸರಿನಲ್ಲಿ ಬಿದ್ದು ಕೆಟ್ಟು ಹೋಗದಂತೆ ನಮ್ಮನ್ನು ನಾವು ಕಾಪಾಡಿಕೊಳ್ಳೋಣ.

## ಅಳಿಯದ ವಾಕ್ಯ

ಬಾಂಗ್ಲಾ ದೇಶದಲ್ಲಿ ಕೆಲವು ವರ್ಷಗಳ ಹಿಂದೆ ಯುದ್ಧ ನಡೆದಿತ್ತು. ಅದರ ನಿಮಿತ್ತವಾಗಿ ಅನೇಕ ಜನರು ನಾಶವಾದರು. ದೊಡ್ಡ ಕಟ್ಟಡಗಳು ಕುಸಿದು ಬಿದ್ದಿದ್ದವು. ಆಗ ಅಲ್ಲಿನ ಸತ್ಯವೇದ ಸಂಘದಲ್ಲಿ ಸೇವೆ ಮಾಡುತ್ತಿದ್ದ ಸ॥ ಟೋನಿ ಎಂಬ ವಿಶ್ವಾಸಿಯು ಹೇಳಿದ ಮಾತಿದು "ನಮ್ಮ ಸಂಘದ ಕಟ್ಟಡದ ಮೇಲೆ ಸಹ ಅಣುಗುಂಡುಗಳು ಬಿದ್ದವು. ಆದರೆ ಆಗ ನಾವು ಯಾರೂ ಅದರೊಳಗೆ ಇರಲಿಲ್ಲ. ಕಟ್ಟಡಗಳೆಲ್ಲವು ಕುಸಿದು ಬಿದ್ದು ಹಾಳಾದವು. ಆದರೆ ದೇವರ ವಾಕ್ಯ ಬರೆದಿದ್ದ ಒಂದು ಗೋಡೆ ಮಾತ್ರ ಬೀಳದೆ ನಿಂತಿತ್ತು. ಅದರ ಮೇಲೆ ಮತ್ತಾಯ 24:35ನೇ ವಚನವು ಬರೆದಿತ್ತು". "ಭೂಮ್ಯಾಕಾಶಗಳು ಅಳಿದು ಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ".

## ಪ್ರಿಯ ವಾಚಕರಲ್ಲಿ ಒಂದು ಮನವಿ

ಪ್ರಿಯವಾಚಕರೆ, ಅನುದಿನ ಆಹಾರ ಧ್ಯಾನ ಪುಸ್ತಕವು ನಿಮ್ಮನ್ನು ವರ್ಷಾಂತರಗಳಿಂದ ಆತ್ಮೀಕವಾಗಿ ಬಲಪಡಿಸಿ ಉಜ್ಜೀವಿಸಿದೆ. ನಿಮ್ಮಂತೆ ಇತರ ಅನೇಕರು ಇದರ ಪ್ರಯೋಜನ ಹೊಂದಿಕೊಳ್ಳಬೇಕಾಗಿದೆ. ಇದಕ್ಕಾಗಿ ನೀವು ಆಸಕ್ತಿ ವಹಿಸಿ ಒಬ್ಬ ವ್ಯಕ್ತಿಗಾದರೂ ಈ ಪತ್ರಿಕೆಯನ್ನು ಪರಿಚಯಿಸಿ ಅವರ ವಿಳಾಸವನ್ನು ನಮಗೆ ತಿಳಿಸಿರಿ. ಕರ್ತನು ನಿಮಗೆ ಕೃಪೆಯಾಗಿ ನೀಡಿರುವ ಹಗಲು ಕಾಲವನ್ನು ಉಪಯೋಗಿಸಿಕೊಂಡು ಕರ್ನಾಟಕದ ಉಜ್ಜೀವನಕ್ಕಾಗಿ ಶ್ರಮಿಸುತ್ತಿರುವ ಈ ಸೇವೆಯನ್ನು ಬಲಪಡಿಸಿರಿ. ಈ ಮೂಲಕವಾಗಿ ನಿಮ್ಮ ನಿಮಿತ್ತ ಅನೇಕರು ಆಶೀರ್ವದಿಸಲ್ಪಡುವರು.

# ನಮ್ಮ ದೇಶದ ಸುದ್ದಿಗಳು

## (INDIAN NEWS)

**1. ಚೀನಾ ಸಹಕಾರ ಕೋರಿದ ಭಾರತ :**

ಭಾರತ–ಚೀನಾ ನಡುವಿನ ವ್ಯಾಪಾರ ವಹಿವಾಟು ಕೊರತೆ ಕಳೆದ ಮೂರು ವರ್ಷಗಳಲ್ಲಿ 3500 ಕೋಟಿ ಡಾಲರ್‌ಗಳಷ್ಟು ಏರಿಕೆ ಕಂಡಿದೆ. ಈ ಅಂತರ ತಗ್ಗಿಸಲು ಮತ್ತು ದೇಶದ ರೈಲ್ವೆ ವಲಯದಲ್ಲಿ ಹೂಡಿಕೆ ಮಾಡುವಂತೆ ಚೀನಾವನ್ನು ಭಾರತ ಕೋರಿದೆ.

**2. 11 ಸಾವಿರ ಕೋಟಿ ವಿದೇಶಿ ದೇಣಿಗೆ :**

ದೇಶದ ಸ್ವಯಂ ಸೇವಾ ಸಂಸ್ಥೆಗಳು 2011–12ನೇ ಸಾಲಿನಲ್ಲಿ ವಿದೇಶಗಳಿಂದ 11,546,29 ಕೋಟಿಗಳಷ್ಟು ಮೊತ್ತದ ದೇಣಿಗೆ ಸಂಗ್ರಹಿಸಿವೆ. ನಿಧಿ ಸಂಗ್ರಹ ಪಟ್ಟಿಯಲ್ಲಿ ದೆಹಲಿ ಮೊದಲ ಸ್ಥಾನದಲ್ಲಿದ್ದರೆ ಕರ್ನಾಟಕವು 5ನೇ ಕ್ರಮಾಂಕದಲ್ಲಿದೆ ಎಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ವರದಿಯೊಂದು ಹೇಳಿದೆ.

**3. ಶಿಖರ್ ಧವನ್‌ಗೆ ವಿಸ್ಡನ್ ಗೌರವ :**

ವಿಸ್ಡನ್ ನೀಡುವ ವರ್ಷದ ಕ್ರಿಕೆಟಿಗ ಗೌರವಕ್ಕೆ ಪಾತ್ರರಾದ ಐವರು ಆಟಗಾರರಲ್ಲಿ ಭಾರತದ ಶಿಖರ್ ಧವನ್ ಸಹ ಆಯ್ಕೆಯಾಗಿದ್ದಾರೆ. ದೆಹಲಿಯ ಈ ಬ್ಯಾಟ್ಸ್‌ಮನ್ 2013ರಲ್ಲಿ ತೋರಿದ ಶ್ರೇಷ್ಠ ಪ್ರದರ್ಶನಕ್ಕಾಗಿ ಅವರಿಗೆ ಈ ಗೌರವ ಲಭಿಸಿದೆ.

**4. ಸೌರಶಕ್ತಿ ಉದ್ಯಮಕ್ಕೆ ಹೆಚ್ಚಿದ ಹೂಡಿಕೆ :**

ಸೌರಶಕ್ತಿ ಉದ್ಯಮ ಕ್ಷೇತ್ರದತ್ತ ಈಗ ಹೂಡಿಕೆದಾರರ ಗಮನ ಹೆಚ್ಚು ಕೇಂದ್ರೀಕೃತವಾಗುತ್ತಿದೆ. 2014ನೇ ಸಾಲಿನ ಮೊದಲ ತ್ರೈಮಾಸಿಕದಲ್ಲಿ ಜಾಗತಿಕ ಸೌರಶಕ್ತಿ ಉದ್ಯಮ ಕ್ಷೇತ್ರ ಒಟ್ಟಾರೆಯಾಗಿ 700 ಕೋಟಿ ಅಮೆರಿಕನ್ ಡಾಲರಷ್ಟು ಬಂಡವಾಳವನ್ನು ಆಕರ್ಷಿಸಿರುವದೇ ಇದಕ್ಕೆ ಸಾಕ್ಷಿ.

**5. ಕೌಟುಂಬಿಕ ದೌರ್ಜನ್ಯಕ್ಕೆ ಪುರುಷರೇ ಹೆಚ್ಚು ಬಲಿ :**

ಕಳೆದ 10 ವರ್ಷಗಳಲ್ಲಿ ಪುರುಷರ ಮೇಲಿನ ಕೌಟುಂಬಿಕ ದೌರ್ಜನ್ಯ ಹೆಚ್ಚಾಗಿದೆ ಎಂದು ಸೇವ್ ಇಂಡಿಯನ್ ಫ್ಯಾಮಿಲಿ ಫೌಂಡೇಶನ್ ಸಂಸ್ಥೆಯು ತಿಳಿಸಿದೆ. ಕೇಂದ್ರ ಗೃಹ ಸಚಿವಾಲಯದ ಪ್ರಕಾರ 2012ರಲ್ಲಿ ಕೌಟುಂಬಿಕ ಸಮಸ್ಯೆಯಿಂದಾಗಿ 20,000 ಪುರುಷರು ಮತ್ತು 12,000 ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವರದಿಯಲ್ಲಿ ತಿಳಿದುಬಂದಿದೆ.





# ಹೊರ ದೇಶದ ಸುದ್ದಿಗಳು

## (FOREIGN NEWS)

**1. ಚಂದ್ರನನ್ನು ಕಂಡ ಕ್ಯಾಮೆರಾಗೆ ರೂ. 4.77 ಕೋಟಿ :**

1971ರಲ್ಲಿ ಚಂದ್ರಯಾನ ಕೈಗೊಂಡಿದ್ದ ಅಪೊಲೊ ಗಗನ ನೌಕೆಯಲ್ಲಿದ್ದ ಕ್ಯಾಮೆರಾ ರೂ. 4.77 ಕೋಟಿ ದಾಖಲೆ ಬೆಲೆಗೆ ಹರಾಜಿನಲ್ಲಿ ಮಾರಾಟವಾಗಿದೆ. ಚಂದ್ರನಿಂದ ಮರಳಿ ಬಂದ ಒಂದೇ ಕ್ಯಾಮೆರಾ ಎಂಬ ಹೆಗ್ಗಳಿಕೆ ಇದರದ್ದು. ಜಪಾನಿನ ಉದ್ಯಮಿ ಟೆರುಕಾಜು ಫುಜಿಸವಾ ಈ ಕ್ಯಾಮೆರಾವನ್ನು ದಾಖಲೆ ಮೊತ್ತವನ್ನು ತೆತ್ತು ಕೊಂಡುಕೊಂಡಿದ್ದಾರೆ.

**2. ಸ್ಮಾರ್ಟ್‌ಫೋನ್ ಬಳಕೆ - ಮಕ್ಕಳಿಗೆ ನಿಷೇಧ :**

ಜಪಾನ್ ಮಕ್ಕಳು ಇತ್ತೀಚೆಗೆ ಸ್ಮಾರ್ಟ್‌ಫೋನ್ ಗೀಳಿಗೆ ಅಂಟಿಕೊಂಡಿರುವದು ಪೋಷಕರು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಹೊಸ ಸಮಸ್ಯೆಯನ್ನು ತಂದೊಡ್ಡಿದೆ. ಈ ವ್ಯಸನವನ್ನು ತಡೆಗಟ್ಟಲು ರಾತ್ರಿ 9ರ ನಂತರ ಮಕ್ಕಳು ಮೊಬೈಲ್ ಬಳಸುವದನ್ನು ಅಲ್ಲಿನ ಸರ್ಕಾರ ನಿಷೇಧಿಸಿದೆ.

**3. ಜಾಗತಿಕ ತಾಪಮಾನ ಹೆಚ್ಚಳ : ಬರ ಸಾಧ್ಯತೆ :**

ದಿನೇ ದಿನೇ ಏರುತ್ತಿರುವ ಜಾಗತಿಕ ತಾಪಮಾನದಿಂದ 2100 ಇಸ್ವಿಯ ಹೊತ್ತಿಗೆ ವಿಶ್ವದ ಮೂರನೇ ಒಂದು ಭಾಗದಲ್ಲಿ ಬರ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಅಧ್ಯಯನವೊಂದು ಹೇಳಿದೆ.

**4. ಅಮೆರಿಕ ಉದ್ದಿಮೆಗಳಲ್ಲಿ ಭಾರತೀಯರ ಆಧಿಪತ್ಯ :**

ಅಮೆರಿಕ ಉದ್ದಿಮೆಗಳಲ್ಲಿ ಭಾರತ ಮೂಲದವರು ಆಧಿಪತ್ಯ ಸ್ಥಾಪಿಸುತ್ತಿರುವದು ಚೀನಾಕ್ಕೆ ತಲ್ಲಣ ಉಂಟುಮಾಡಿದೆ ಎಂದು ಪತ್ರಿಕೆಯೊಂದು ವರದಿಮಾಡಿದೆ. ಭಾರತೀಯ ಮೂಲದವರು ಇಂಗ್ಲೀಷ್ ಭಾಷೆಯಲ್ಲಿ ಸಾಧಿಸಿರುವ ಪ್ರಭುತ್ವ ಮತ್ತು ಉದ್ಯೋಗ ಅರಸಿ ವಲಸೆ ಹೋಗುವ ಪ್ರವೃತ್ತಿಯಿಂದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಈ ನಿಟ್ಟಿನಲ್ಲಿ ಚೀನಾ ಮೂಲದವರು ತುಸು ಹಿಂದುಳಿದಿದ್ದಾರೆ ಎಂದು ಹೇಳಿದೆ.

**5. ಆಫ್ಘನ್ ಚುನಾವಣೆ : ವಿಶ್ವ ಸಂಸ್ಥೆ ಶ್ಲಾಘನೆ :**

ಈಚೆಗೆ ನಡೆದ ಆಫ್ಘಾನಿಸ್ತಾನ ರಾಷ್ಟ್ರಾಧ್ಯಕ್ಷರ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿರುವದನ್ನು ಅವಿಸ್ಮರಣೀಯ ಸಾಧನೆ ಎಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಬಾನ್‌ಕೀ ಮೂನ್ ಶ್ಲಾಘಿಸಿದ್ದಾರೆ.

## ಆಶ್ರಯಿಸಿರಿ!

1937ನೇ ಇಸವಿಯಲ್ಲಿ ಅಮೆರಿಕಾ ಸರ್ಕಾರ ನೂತನ ವಿಮಾನ ಒಂದನ್ನು ಹಾರಿಸಲು ಸಿದ್ಧತೆ ಮಾಡಿಕೊಂಡಿತು. ಅದು ನಿಧಾನವಾಗಿ ಮೇಲಕ್ಕೆ ಏರಬೇಕೆಂಬುದಕ್ಕಾಗಿ ಅದನ್ನು ಅನೇಕ ಹಗ್ಗಗಳಿಂದ ಕಟ್ಟಿ ಹಗ್ಗದ ಇನ್ನೊಂದು ತುದಿಗಳನ್ನು ಸುಮಾರು 200 ಮಂದಿ ಸೈನಿಕರು ಹಿಡಿದುಕೊಂಡಿದ್ದರು. ಆದರೆ ಆ ವಿಮಾನ ಇದ್ದಕ್ಕಿದ್ದಂತೆ ವೇಗವಾಗಿ ಆಕಾಶದ ಕಡೆಗೆ ಹಾರಿತು. ಸೈನಿಕರಲ್ಲಿ ಅನೇಕರು ಬುದ್ಧಿವಂತಿಕೆಯಿಂದ ತಮ್ಮ ಕೈಗಳನ್ನು ಬಿಟ್ಟು ಹಾರಿದರು. ಆದರೆ ಮೂವತ್ತು ಮಂದಿ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊಂಡದ್ದರಿಂದ ವಿಮಾನದೊಂದಿಗೆ ಹಗ್ಗದಲ್ಲಿ ತೂಗಾಡುತ್ತಾ ಮೇಲಕ್ಕೆ ಸಾಗಿದರು. ಸ್ವಲ್ಪ ಸಮಯದಲ್ಲೇ ಕೈಗಳು ಸೋತುಹೋದದ್ದರಿಂದಲೂ ಭಯದಿಂದಲೂ ಹಿಡಿತವನ್ನು ಸಡಿಲಿಸಿದ್ದರಿಂದ ಕೆಳಗೆ ಬಿದ್ದು ಸತ್ತುಹೋದರು. ಆದರೆ ಅವರಲ್ಲಿ ಒಬ್ಬನು ಮಾತ್ರ ಹಲವು ಗಂಟೆಗಳು ಆಕಾಶದಲ್ಲಿ ಸಂಚರಿಸಿ ಯಾವ ಆಪತ್ತೂ ಇಲ್ಲದೆ ಕೆಳಗೆ ಬಂದನು. ಅಷ್ಟು ಹೊತ್ತು ಹಗ್ಗದಲ್ಲಿ ತೂಗಲು ನಿನಗೆ ಹೇಗೆ ಸಾಧ್ಯವಾಯಿತು? ಎಂದು ಕೇಳಿದಾಗ ಅವನು ಹೇಳಿದನು– "ನಾನು ತೂಗಾಡಲಿಲ್ಲ; ಹಗ್ಗವನ್ನು ನನ್ನ ಸುತ್ತಲೂ ಸುತ್ತಿ ಮೇಲೆ ಕಟ್ಟಿದೆನು. ಆದ್ದರಿಂದ ಹಗ್ಗದ ಮೇಲೆ ಕುಳಿತುಕೊಳ್ಳಲು ಸಾಧ್ಯವಾಯಿತು. ನಾನು ಭಯಪಡಲಿಲ್ಲ, ದಿಗ್ಭ್ರಮೆಗೊಳ್ಳಲಿಲ್ಲ" ಅಂದನು. ಹೌದು ನಂಬುವವನು ದಿಗ್ಭ್ರಮೆಗೊಳ್ಳನು. ಶೋಧನೆಯ ಸಮಯದಲ್ಲಿ ಅಧೈರ್ಯಗೊಳ್ಳದೆ ಕ್ರಿಸ್ತನನ್ನು ಆಶ್ರಯಿಸಿರಿ, ಸಮಾಧಾನದಿಂದಿರುವದನ್ನು ಕಲಿತುಕೊಳ್ಳಿರಿ.

## ಹಗ್ಗಜಗ್ಗಾಟದ ಪಂದ್ಯ

ನಂಬಿಕೆ ಎನ್ನುವದು ಒಂದು ಶಕ್ತಿ ವಿಜ್ಞಾನದ ರೀತಿಯಲ್ಲಿ ಪ್ರತಿಯೊಂದು ಶಕ್ತಿಗೂ ವಿರೋಧವಾಗಿ ಇನ್ನೊಂದು ಶಕ್ತಿ ಇರುವದು. ಹಗ್ಗದ ಜಗ್ಗಾಟದ ಪಂದ್ಯವನ್ನು ನೋಡಿರುವಿರಾ? ಒಂದು ಗುಂಪಿನ ಆಟಗಾರರು ಹಗ್ಗದ ಒಂದು ತುದಿಯನ್ನೂ ಮತ್ತೊಂದು ಗುಂಪಿನವರು ಇನ್ನೊಂದು ತುದಿಯನ್ನೂ ಹಿಡಿದು ಹಗ್ಗವನ್ನು ತಮ್ಮ ತಮ್ಮ ಕಡೆಗೆ ಎಳೆಯುವರು. ಯಾರು ಬಲವಾಗಿರುವರೋ ಅವರಿಗೆ ಜಯ ಅದರಂತೆಯೇ ನಮ್ಮ ಜೀವಿತದಲ್ಲಿಯೂ ದೇವರ ಶಕ್ತಿಯೂ, ಸೈತಾನನ ಕ್ರಿಯೆಗಳೂ ಒಂದಕ್ಕೊಂದು ಕ್ರಿಯೆ ನಡೆಸುವವು. ಜೀವಿತದ ಹಗ್ಗದ ಒಂದು ತುದಿಯನ್ನು ನಂಬಿಕೆ ಹಿಡಿದಿರುವದು. ಅಪನಂಬಿಕೆಗೆ ಜೊತೆಯಾಗಿ ಚಿಂತೆಗಳು ಕಷ್ಟಗಳು, ಭಯ ಸಂದೇಹಗಳು ನಿಲ್ಲುವವು. ಹಾಗಾದರೆ ನಂಬಿಕೆಯ ಜೊತೆಯಾಗಿ ಯಾವದನ್ನೆಲ್ಲಾ ಸೇರಿಸಬೇಕು? ಅಪೊ. ಪೌಲನು ಹೇಳುವಂತೆ ಸದ್ಗುಣ, ಜ್ಞಾನ, ದಮೆ, ತಾಳ್ಮೆ, ಭಕ್ತಿ, ಸಹೋದರ ಸ್ನೇಹ, ಪ್ರೀತಿ ಇವುಗಳನ್ನು ಸೇರಿಸಿಕೊಳ್ಳುವಾಗ ಜಯವು ನಿಶ್ಚಯವಾಗಿ ನಿಮ್ಮದೇ (2 ಪೇತ್ರ 1:6–8).



ಜೂನ್ 1

## ನಿತ್ಯವೂ ನಡೆಸುವನು!

ಬೆಳಿಗ್ಗೆ : 2 ಪೂ.ವೃ. 15,16
ಸಂಜೆ : ಯೋಹಾ 12:37–50

"ಯೆಹೋವನು ನಿಮ್ಮನ್ನು ನಿತ್ಯವೂ ನಡಿಸುತ್ತಾ ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸಿ ನಿಮ್ಮ ಎಲುಬುಗಳನ್ನು ಸಸಾರ ಮಾಡುವನು. ನೀವು ತಂಪಾದ ತೋಟಕ್ಕೂ ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನವಾಗುವಿರಿ" (ಯೆಶಾ. 58:11).

ಈ ನೂತನ ತಿಂಗಳಿನ ಧ್ಯಾನ ಕರ್ತನು ನಿತ್ಯವೂ ನಿಮ್ಮನ್ನು ನಡೆಸುವನು ಎಂಬುದು. ಆತನು ಪ್ರತಿಯೊಬ್ಬರನ್ನೂ ವೈಯಕ್ತಿಕವಾಗಿ ಯುಗದ ಸಮಾಪ್ತಿಯವರೆಗೆ ನಡೆಸುವಾತನಾಗಿದ್ದಾನೆ. ಆ ದೇವರ ವಾಗ್ದಾನಗಳೆಲ್ಲವೂ ಕ್ರಿಸ್ತನಲ್ಲೇ ದೃಢವಾಗಿ ನೆರವೇರುವದು (2 ಕೊರಿಂ 1:20). ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರದಲ್ಲಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ (ಅ.ಕೃ.2:39).

ಅಬ್ರಹಾಮನಿಗೆ ಆಕಾಶದ ನಕ್ಷತ್ರಗಳಂತೆ, ಸಂತತಿಯನ್ನು ವಾಗ್ದಾನ ಮಾಡಿದನು (ಆದಿ.15:5). ಹಾಗೆಯೇ ನೆರವೇರಿಸಿದನು. ಇಸ್ರಾಯೇಲ್ಯರಿಗೆ ಕಾನಾನ್ ದೇಶವನ್ನು ವಾಗ್ದಾನ ಮಾಡಿದನು (ಅರಣ್ಯ. 14:40). ಅದನ್ನು ನೆರವೇರಿಸಿದನು. ದಾವೀದನಿಗೆ ತಲತಲಾಂತರಗಳಿಗೂ ನಿನ್ನ ಸಿಂಹಾಸನವನ್ನು ಸ್ಥಿರ ಪಡಿಸುವೆನು (ಕೀರ್ತ. 89:4) ಎಂದು ವಾಗ್ದಾನ ಮಾಡಿದನು. ಅದನ್ನು ನೆರವೇರಿಸಿದನು. ಅದರಂತೆಯೇ ಹೊಸ ಒಡಂಬಡಿಕೆಯಲ್ಲಿ ದೇವರ ಮಕ್ಕಳಿಗೆ ಪವಿತ್ರಾತ್ಮನನ್ನು ವಾಗ್ದಾನ ಮಾಡಿದನು (ಯೋಹಾ. 14:17). ನಿಮ್ಮನ್ನು ನಿತ್ಯವೂ ನಡೆಸುವೆನು ಎಂಬುದೂ ಕರ್ತನ ವಾಗ್ದಾನವಾಗಿರುವದು (ಯೆಶಾ. 58:11). ಆತನು ವಾಗ್ದಾನ ಮಾಡಿದ್ದನ್ನು ತಪ್ಪದೇ ನೆರವೇರಿಸುವವನಾಗಿದ್ದಾನೆ. ಯಾಕೆಂದರೆ ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ. ಮಾನವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವದಿಲ್ಲ. ತಾನು ಹೇಳಿದ ಮೇರೆಗೆ ನಡೆಯುವದಿಲ್ಲವೋ! ಮಾತುಕೊಟ್ಟನಂತರ ನೆರವೇರಿಸುವದಿಲ್ಲವೋ! (ಅರಣ್ಯ. 23:19) ಎಂದು ಸತ್ಯವೇದ ಹೇಳುತ್ತದೆ. ವರ್ಷದಲ್ಲಿ 365 ದಿನಗಳೂ ಒಂದೇ ರೀತಿಯಲ್ಲಿ ಇರುವದಿಲ್ಲ. ಜೀವಿತದಲ್ಲಿ ಹಲವು ತಗ್ಗು, ದಿಣ್ಣೆಗಳು, ಸಂತೋಷ ದುಃಖ, ಸೋಲುಗೆಲುವುಗಳು ಬರುವವು. ಕಾಲಗಳು ಹೇಗೇ ಇದ್ದರೂ ಪರಿಸ್ಥಿತಿಗಳು ಯಾವ ರೀತಿಯೇ ಇದ್ದರೂ ಕರ್ತನು ನಿಮ್ಮನ್ನು ಕೈಹಿಡಿದು ಕಡೆಯವರೆಗೂ ನಡೆಸಲು ಸತ್ಯವಂತನಾಗಿರುವನು.

ದೇವಮಕ್ಕಳೇ, ಒಮ್ಮೆ ಆತನ ಕಡೆಗೆ ಕಣ್ಣೆತ್ತಿನೋಡಿರಿ. ಆತನು ಸರ್ವಶಕ್ತನೂ, ಸರ್ವ ಸಂಪನ್ನನೂ, ರಾಜಾಧಿರಾಜನೂ ಆಗಿರುವನು. ಆತನ ಪರಲೋಕದ ಐಶ್ವರ್ಯ, ಆತನ ಪ್ರೀತಿ, ಕೃಪೆಗಳು ಎಂದಿಗೂ ಕಡಿಮೆಯಾಗದು. ನೀವು ಆತನ ಮಕ್ಕಳಾಗಿದ್ದೀರಿ. ನೀವು ಎಡವಿ ಬೀಳದಂತೆ ಕಡೆಯವರೆಗೂ ಕಾಪಾಡಿ ನಡೆಸುವನು. ನಿಮ್ಮ ಓಟ ಜಯಭರಿತವಾಗಿ ಮುಗಿಯುವದು.

*ನೆನಪಿಗೆ : ಯೆಹೋವನು ಹಗಲು ಹೊತ್ತಿನಲ್ಲಿ ದಾರಿ ತೋರಿಸುವದಕ್ಕೆ ಮೇಘಸ್ತಂಭದಲ್ಲಿಯೂ ರಾತ್ರಿವೇಳೆಯಲ್ಲಿ ಬೆಳಕು ಕೊಡುವದಕ್ಕೆ ಅಗ್ನಿಸ್ತಂಭದಲ್ಲಿಯೂ ಇದ್ದು ಅವರ ಮುಂಭಾಗದಲ್ಲಿ ಹೋದನು (ವಿಮೋ. 13:21).*

## ಜೂನ್ 2 ಮುಂದೆ ನಿಂತು ನಡೆಸುವನು!

ಬೆಳಿಗ್ಗೆ : 2 ಪೂ.ವೃ.17,18
ಸಂಜೆ : ಯೋಹಾ 13:1–20

ಹಗಲಲ್ಲಿ ಮೇಘಸ್ತಂಭವೂ ರಾತ್ರಿಯಲ್ಲಿ ಅಗ್ನಿಸ್ತಂಭವೂ ಜನರ ಮುಂದೆ ತಪ್ಪದೆ ಕಾಣಿಸಿದವು (ವಿಮೋ. 13:22).

ಸೀನಾಯ್ ಅರಣ್ಯದಲ್ಲಿ ಇಪ್ಪತ್ತು ಲಕ್ಷ ಇಸ್ರಾಯೇಲ್ಯರು, ದೊಡ್ಡ ಸೈನ್ಯದಂತೆ ಇದ್ದರು. ಒಬ್ಬ ದಳಪತಿಯಂತೆ, ಸೇನಾಧೀಶ್ವರನಂತೆ, ಅದೇ ವೇಳೆಯಲ್ಲಿ ಪ್ರೀತಿಯ ತಂದೆಯಂತೆ ಅವರನ್ನು ಕರ್ತನು ನಡೆಸಿದನು. ಅವರು ಹಗಲಿನಲ್ಲಿ ಬಿಸಿಲಿಗೆ ಬಾಡದಂತೆ ಮೇಘಸ್ತಂಭವನ್ನಿಟ್ಟನು. ಇರುಳಿನಲ್ಲಿ ಮಾರ್ಗತಪ್ಪದಂತೆ ಅಗ್ನಿಸ್ತಂಭವನ್ನಿಟ್ಟನು. ಪ್ರತಿದಿನ ಅವರ ಆಹಾರಕ್ಕಾಗಿ ಜೇನಿನಂತೆ ಸಿಹಿಯಾಗಿದ್ದ ಮನ್ನವನ್ನು ಸುರಿಸಿದನು.

ಅಂದು ಇಸ್ರಾಯೇಲ್ಯರನ್ನು ಕಾಪಾಡಿ ನಡೆಸಿದ ದೇವರು ಇಂದು ನಿಶ್ಚಯವಾಗಿ ನಿಮಗೆ ಉಣ್ಣಲು ಆಹಾರವನ್ನೂ, ಉಡಲು ವಸ್ತ್ರವನ್ನೂ ತಂಗಲು ಮನೆಯನ್ನೂ ನೀಡಿ ನಡಿಸುವನು. ಅಂದು ಇಸ್ರಾಯೇಲ್ಯರು ಮಾಂಸವನ್ನು ಬಯಸಿದಾಗ, ಲಾವಕ್ಕಿಗಳನ್ನು ಅವರ ಪಾಳೆಯದ ಸುತ್ತಲೂ ಸುರಿಯುವಂತೆ ಮಾಡಿದನು. ದಾಹಗೊಂಡಾಗ ಬಂಡೆಯೊಳಗಿಂದ ನೀರನ್ನು ಬರಮಾಡಿ ಅವರ ದಾಹವನ್ನು ತಣಿಸಿದನು. ಆ ದೇವರು ನಿಮ್ಮ ದೇವರೂ ಆಗಿರುವನು. ನಿಮ್ಮ ಅಗತ್ಯತೆಗಳನ್ನು ಪೂರೈಸುವನು. ಪ್ರವಾದಿಯಾದ ಎಲೀಯನನ್ನು ಹೇಗೆ ನಡೆಸಿ ಪೋಷಿಸಿದನೆಂಬುದನ್ನು ಧ್ಯಾನಿಸಿ ನೋಡಿರಿ. ಕಾಗೆಗಳು ಅವನಿಗೆ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ರೊಟ್ಟಿ ಮಾಂಸಗಳನ್ನು ತಂದುಕೊಡುತ್ತಿದ್ದವು. ಅವನು ಅವುಗಳನ್ನು ತಿನ್ನುತ್ತಿದ್ದನು. ಹಳ್ಳದ ನೀರು ಅವನಿಗೆ ಪಾನವಾಗಿತ್ತು (1 ಅರಸು 17:6) ಎಂದು ಸತ್ಯವೇದ ಹೇಳುತ್ತದೆ. ಆ ಎಲೀಯನ ದೇವರು ನಿಮ್ಮ ದೇವರು, ಕರ್ತನು ಅನುದಿನವೂ ನಿಮ್ಮನ್ನು ನಡೆಸುವನು. “ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು, ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ” (ಕೀರ್ತ. 34:10) ಎಂದು ದಾವೀದನು ತನ್ನ ಅನುಭವದಿಂದ ಬರೆಯುತ್ತಾನೆ. ಚಾರೆಪ್ತಾ ಊರಿನ ವಿಧವೆಯನ್ನು ಅವನ ಮಗನನ್ನೂ ಬರಗಾಲದಲ್ಲಿ ಕರ್ತನು ಎಷ್ಟು ಅದ್ಭುತವಾಗಿ ಪೋಷಿಸಿದನೆಂಬುದನ್ನು 1 ಅರಸು 17:14–16ರಲ್ಲಿ ಓದುತ್ತೇವೆ.

ದೇವಮಕ್ಕಳೇ, ಕರ್ತನನ್ನು ಸ್ತುತಿಸಿ ಆತನಲ್ಲಿ ಸಂತೋಷಪಡಿರಿ. ಆತನು ನಿಮ್ಮನ್ನು ಅನುದಿನವೂ ನಡೆಸುವನು. ಆಶೀರ್ವದಿಸುವನು. ಹೊಸ ಹೊಸ ಕೃಪೆಗಳನ್ನು ನೀಡುವನು.

*ನೆನಪಿಗೆ:ಯೆಹೋವನೊಬ್ಬನೇ ಅವರನ್ನು ನಡೆಸಿಕೊಂಡು ಬಂದದ್ದೂ; ಆತನು ಅವರನ್ನು ಭೂಮಿಯ ಎತ್ತರವಾದ ಪ್ರದೇಶಗಳ ಮೇಲೆ ಹತ್ತಿಸಿ ಅವರಿಗೆ ವ್ಯವಸಾಯ ವೃದ್ಧಿಯನ್ನುಂಟುಮಾಡಿ ಬಂಡೆಯಿಂದ ಜೇನೂ ಗಿರಿಯಿಂದ ಎಣ್ಣೆಯೂ ದೊರೆಯುವಂತೆ ಮಾಡಿದನು (ಧರ್ಮೋ. 32:12–13).*



## ಜೂನ್ 3 ಮುಂದೆ ಸಾಗಿ ದಾರಿ ತೋರಿಸುವನು!

ಬೆಳಿಗ್ಗೆ : 2 ಪೂ.ವೃ.19,20
ಸಂಜೆ : ಯೋಹಾ 13:21–38

ನಿನ್ನನ್ನು ಉಪದೇಶಿಸಿ ನಡೆಯಬೇಕಾದ ಮಾರ್ಗವನ್ನು ತಿಳಿಸುವೆನು; ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು (ಕೀರ್ತ. 32:8).

ಇಸ್ರಾಯೇಲ್ಯರನ್ನು ಐಗುಪ್ತದ ದಾಸತ್ವದಿಂದ ಬಿಡಿಸಿಕೊಂಡು ಬರುವಂತೆ ಕರ್ತನು ಮೋಶೆಯನ್ನು ನೇಮಿಸಿದಾಗ ಅವನು ಕರ್ತನ ಆಜ್ಞೆಯಂತೆ ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರಕ್ಕೆ ತಂದು ಅರಣ್ಯಮಾರ್ಗದಲ್ಲಿ ನಾಲ್ವತ್ತು ವರ್ಷಗಳು ನಡೆಸಿಕೊಂಡು ಬಂದನು. ಒಮ್ಮೆ ಮೋಶೆ ದೇವರೇ ನಿನ್ನ ಮಾರ್ಗವನ್ನು ನನಗೆ ತೋರಿಸು ಎಂದು ಕೇಳಿದಾಗ ಕರ್ತನು ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು ದಯಪಾಲಿಸುವೆನು ಎಂದು ವಾಗ್ದಾನ ಮಾಡಿದನು (ವಿಮೋ. 33:14). ತನ್ನ ವಾಗ್ದಾನದಂತೆಯೇ ಅವರ ಪ್ರಯಾಣದಲ್ಲೆಲ್ಲಾ ಅವರೊಂದಿಗೆ ಇದ್ದು ಅವರನ್ನು ಕಾನಾನ್ ದೇಶಕ್ಕೆ ಸೇರಿಸಿದನು.

ಮೋಶೆಯ ಮರಣಾನಂತರ ಯೆಹೋಶುವನು ಇಸ್ರಾಯೇಲ್ಯರ ನಾಯಕನಾದನು. ಆಗ ಕರ್ತನು ಅವನಿಗೆ ಮಾಡಿದ ವಾಗ್ದಾನವೇನು ಗೊತ್ತೇ? ನಿನ್ನ ಜೀವಮಾನದಲ್ಲೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು; ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು (ಯೆಹೋ. 1:5) ಎಂಬುದೇ. ಪ್ರವಾದಿಯಾದ ಯೆಶಾಯನ ಅನುಭವ ಏನು? “ಕರ್ತನಾದ ಯೆಹೋವನು ಶಿಕ್ಷಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ. ಬೆಳಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಿತರಂತೆ ನಾನು ಕೇಳುವ ಹಾಗೆ ನನ್ನ ಕಿವಿಯನ್ನು ಜಾಗರಗೊಳಿಸುತ್ತಾನೆ” (ಯೆಶಾ. 50:4) ಎಂಬುದೇ. ಪ್ರತಿದಿನವೂ ಕರ್ತನೇ ಹೇಳು, ಕೇಳುವೆನು. “ನಾನು ಏನು ಮಾಡಬೇಕು? ಹೇಗೆ ನಡೆದುಕೊಳ್ಳಬೇಕು? ನನಗೆ ಆಲೋಚನೆ ನೀಡು” ಎಂದು ಕೇಳಿರಿ. ಆಲೋಚನಾ ಕರ್ತನಾದ ದೇವರು ನಿಮಗೆ ಒಳ್ಳೆಯ ಆಲೋಚನೆಗಳನ್ನು ಕೊಟ್ಟು ನಡೆಸುವನು. ಕೋಳಿಯು ತನ್ನ ಮರಿಗಳನ್ನು ತನ್ನ ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವ ಹಾಗೆ ಹದ್ದು ತನ್ನ ಮರಿಗಳನ್ನು ತನ್ನ ರೆಕ್ಕೆಗಳ ಮೇಲೆ ಹೊರುವ ಹಾಗೆ ದೇವರು ತನ್ನ ಮರಿಗಳನ್ನು ಹೊತ್ತು ನಡೆಸುವನು.

ದೇವಮಕ್ಕಳೇ, ಕರ್ತನು ನಿಮ್ಮ ಕುರುಬನಾಗಿರುವದಾದರೆ, ಆತನು ನಿಮ್ಮನ್ನು ಉತ್ತಮವಾದ ರೀತಿಯಲ್ಲಿ ನಡೆಸುವನು. ನೀವು ಎಂದಿಗೂ ಕೊರತೆ ಪಡುವದಿಲ್ಲ. ಆತನು ನಿಮ್ಮನ್ನು ಹಸಿರುಗಾವಲುಗಳಲ್ಲಿ ನಡೆಸುವನು. ತಂಪಾದ ತೋಟಕ್ಕೂ, ಉಕ್ಕುವ ಒರೆತಗೂ ಸಮಾನರಾಗಿರುವಿರಿ. ದೇವಕೃಪೆಯನ್ನೂ ದೇವಸಮಾಧಾನವನ್ನೂ ಕಾಣುವಿರಿ.

*ನೆನಪಿಗೆ : ಆತನು ಯುಗಯುಗಾಂತರಗಳಲ್ಲಿಯೂ ನಮ್ಮ ದೇವರು, ನಿರಂತರವೂ ನಮ್ಮನ್ನು ನಡಿಸುವವನಾಗಿದ್ದಾನೆ (ಕೀರ್ತ. 48:14).*

ಜೂನ್ 4

## ನೀತಿಯ ಮಾರ್ಗದಲ್ಲಿ ನಡೆಸುವನು!

ಬೆಳಿಗ್ಗೆ : 2 ಪೂ.ವೃ. 21,22
ಸಂಜೆ : ಯೋಹಾ 14

ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ, ತನ್ನ ಹೆಸರಿಗೆ ತಕ್ಕಂತೆ ನೀತಿ ಮಾರ್ಗದಲ್ಲಿ ನನ್ನನ್ನು ನಡೆಸುತ್ತಾನೆ (ಕೀರ್ತ. 23:3).

ಕರ್ತನು ತನ್ನ ಮಕ್ಕಳನ್ನು ಅನುದಿನವೂ ಒಂದು ವಿಶೇಷವಾದ ಮಾರ್ಗದಲ್ಲಿ ನಡೆಸುತ್ತಾನೆ. ಅದುವೇ ನೀತಿಮಾರ್ಗ. ನೀತಿಮಾರ್ಗದಲ್ಲಿ ನಡೆಯುವಾಗ "ಸಮಾಧಾನವು ಫಲಿಸುವದು. ಶಾಂತಿ ನಿರ್ಭಯಗಳು ಧರ್ಮದ ನಿತ್ಯಪರಿಣಾಮವಾಗಿರುವವು. ನನ್ನ ಜನರು ಸಮಾಧಾನ ನಿವಾಸದಲ್ಲಿಯೂ, ನಿರ್ಭಯ ನಿಲಯಗಳಲ್ಲಿಯೂ, ನೆಮ್ಮದಿಯ ಆಶ್ರಯಗಳಲ್ಲಿಯೂ ನೆಲೆಗೊಳ್ಳುವರು" (ಯೆಶಾ.32:17–18).

ಕೆಲವರನ್ನು ಹೇಗಿದ್ದೀರಿ? ಎಂದು ಕೇಳಿದರೆ, ಬೇಸರದಿಂದ "ಏನೋ ಇದ್ದೇನೆ" ಎಂದು ಹೇಳುವರು. ಆದರೆ ದಾವೀದನ ಹೇಳಿಕೆ ಏನು ಗೊತ್ತೇ? ಕರ್ತನು ನನ್ನಾತ್ಮವನ್ನು ಚೈತನ್ಯಗೊಳಿಸಿ ನೀತಿಯ ಮಾರ್ಗದಲ್ಲಿ ನನ್ನನ್ನು ನಡೆಸುವನು ಎಂದು ಉತ್ಸಾಹದಿಂದ ಹೇಳುತ್ತಾನೆ. ಕರ್ತನನ್ನು ನಂಬುವ ಮಕ್ಕಳ ಜೀವಿತದಲ್ಲಿ ಒಂದೊಂದು ದಿನವೂ ಒಂದು ಸಂತೋಷ, ಒಂದು ಹೊಸ ಸಂದರ್ಭ, ಉತ್ಸಾಹಗಳನ್ನು ಆತನು ನೀಡುತ್ತಲೇ ಇರುತ್ತಾನೆ. ಆತನು ನೀತಿಯ ಮಾರ್ಗದಲ್ಲಿ ನಡೆಸುವದರಿಂದ ಬೇಸರ, ಕಳವಳ ಉಂಟಾಗುವದೇ ಇಲ್ಲ. ದೇವರನ್ನು ತಮ್ಮ ಕುರುಬನನ್ನಾಗಿಸಿಕೊಳ್ಳದವರು ತಂದೆಯಿಲ್ಲದೆ ಅನಾಥರಂತೆ ದಿಕ್ಕುಗಾಣದವರಾಗಿ ನಡೆಯುವರು. ಆದರೆ ಕರ್ತನೋ ತನ್ನ ಮಕ್ಕಳನ್ನು ನೀತಿಮಾರ್ಗದಲ್ಲಿ ತನ್ನ ಪರಿಶುದ್ಧವಾದ ಮಾರ್ಗದಲ್ಲಿ ನಡೆಸುವನು. ಭಯಪಡಬೇಡ, ನಿನಗೆ ಸಹಾಯ ಮಾಡುತ್ತೇನೆ ಎಂದು ನಿನಗೆ ಹೇಳುವ ನಿನ್ನ ದೇವರಾದ ಯೆಹೋವನೆಂಬ ನಾನೇ ನಿನ್ನ ಕೈಹಿಡಿಯುತ್ತೇನೆ (ಯೆಶಾ. 41:13) ಎಂಬುದು ಕರ್ತನ ವಾಗ್ದಾನವಾಗಿದೆ. ಭಕ್ತನಾದ ಯೋಬನು ದೇವರು ತನ್ನನ್ನು ನಡೆಸುವಂತೆ ಅವನ ಕೈಗಳನ್ನು ದೇವರ ಕರಗಳಿಗೆ ಒಪ್ಪಿಸಿಕೊಟ್ಟಿದ್ದನು. ಹಾಗೂ ಪೂರ್ಣವಿಶ್ವಾಸದಿಂದ "ಆತನಾದರೋ ನನ್ನ ದಾರಿಯನ್ನು ಬಲ್ಲನು, ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕಬಂಗಾರವಾಗಿ ಕಾಣಿಸುವೆನು" (ಯೋಬ.23:10) ಎಂದು ಹೇಳುತ್ತಾನೆ.

ದೇವಮಕ್ಕಳೇ, ನೀವು ನಿಮ್ಮ ಮಾರ್ಗಗಳನ್ನು ಒಪ್ಪಿಸಿಕೊಟ್ಟು, ಆತನ ಮೇಲೆ ನಂಬಿಕೆ ಇಡುವದಾದರೆ, ಆತನು ನಿಮ್ಮನ್ನು ನೀತಿಯಲ್ಲಿಯೂ, ಪರಿಶುದ್ಧತೆಯಲ್ಲಿಯೂ ನಡೆಸುವನು. ಫಲವತ್ತಾದ ತೋಟದಂತಿರುವಿರಿ. ನೀವು ಚಿಗುರಿ ಹೂಬಿಟ್ಟು ಕಾಯಾಗಿ ಫಲಕೊಡುವಿರಿ. ಇತರ ಮರಗಳಂತೆ ಒಣಗಿ ಎಲೆ ಉದುರಿದರೂ, ತಕ್ಕ ಕಾಲದಲ್ಲಿ ಫಲಭರಿತವಾದ ವೃಕ್ಷದಂತೆ ಇರುವಿರಿ. ನೀವು ಮಾಡುವ ಕಾರ್ಯಗಳೆಲ್ಲಾ ಕೈಗೂಡುವವು.

*ನೆನಪಿಗೆ : ಅದು ಪರಿಶುದ್ಧ ಮಾರ್ಗ ಎನಿಸಿಕೊಳ್ಳುವದು. ಯಾವ ಅಶುದ್ಧನೂ ಅಲ್ಲಿ ನಡೆಯನು. ಅದು ದೇವಜನರಿಗಾಗಿಯೇ ಇರುವದು. ಅಲ್ಲಿ ಹೋಗುವ ಮೂಢನೂ ದಾರಿತಪ್ಪನು (ಯೆಶಾ.35:8).*



ಜೂನ್ 5

## ಅತಿಶಯವಾಗಿ ನಡೆಸುವನು!

ಬೆಳಿಗ್ಗೆ : 2 ಪೂ.ವೃ. 23,24
ಸಂಜೆ : ಯೋಹಾ 15

ನೀವು ಹೊಟ್ಟೆ ತುಂಬಾ ಊಟ ಮಾಡಿ ತೃಪ್ತಿಗೊಂಡು ನಿಮಗಾಗಿ ಅದ್ಭುತ ಕಾರ್ಯಗಳನ್ನು ಮಾಡಿದ ನಿಮ್ಮ ದೇವರಾದ ಯೆಹೋವನ ನಾಮವನ್ನು ಕೊಂಡಾಡುವಿರಿ (ಯೋವೇ. 2:26).

ಕರ್ತನು ನಿಮ್ಮನ್ನು ಅನುದಿನವೂ ನೀತಿಮಾರ್ಗದಲ್ಲಿ ನಡೆಸುವನು. ಮಾತ್ರವಲ್ಲ ಅತಿಶಯವಾಗಿ ನಡೆಸುವನು. ನೀವು ನೆನಸದೇ ಇರುವ ಮಾರ್ಗಗಳಲ್ಲಿ ನಡೆಸಿ ಆಶೀರ್ವದಿಸುವನು.

ಪ್ರವಾದಿಯಾದ ಯೋವೇಲನ ಕಾಲದಲ್ಲಿ ಭಯಂಕರವಾದ ಕ್ಷಾಮ ಬಂದಿತು. ಹೊಲಗಳಲ್ಲಿ ಬೆಳೆದ ಬೆಳೆ, ಮಿಡತೆಗಳ ಆಹಾರವಾಯಿತು. "ಚೂರಿ ಮಿಡತೆ ತಿಂದು ಬಿಟ್ಟಿದ್ದನ್ನು ಗುಂಪು ಮಿಡತೆ ತಿಂದು ಬಿಟ್ಟಿತು. ಗುಂಪು ಮಿಡತೆ ತಿಂದು ಬಿಟ್ಟದ್ದನ್ನು ಸಣ್ಣ ಮಿಡತೆ ತಿಂದು ಬಿಟ್ಟಿತು. ಸಣ್ಣ ಮಿಡತೆ ತಿಂದು ಬಿಟ್ಟದ್ದನ್ನು ದೊಡ್ಡ ಮಿಡತೆ ತಿಂದು ಬಿಟ್ಟಿತು" (ಯೋವೇ. 1:4) ಎಂದು ಪ್ರವಾದಿಯು ವಿವರಿಸುತ್ತಾನೆ. ಶೋಧನೆಯ ಮೇಲೆ ಶೋಧನೆ, ಸಮಸ್ಯೆಯ ಮೇಲೆ ಸಮಸ್ಯೆ, ಜನರು ಬೀಜ ಬಿತ್ತಿದರು. ಆದರೆ ಫಲಕಾಣಲಿಲ್ಲ. ಆದರೆ ದೇವಜನರು ಕರ್ತನ ಕಡೆಗೆ ತಿರುಗಿದಾಗ, ಗುಂಪುಮಿಡತೆ, ಸಣ್ಣಮಿಡತೆ, ಚೂರಿ ಮಿಡತೆ ಅಂತು ನಾನು ನಿಮ್ಮ ಮೇಲೆ ಕಳುಹಿಸಿದ ನನ್ನ ದೊಡ್ಡದಂಡು ತಿಂದುಬಿಟ್ಟ ವರುಷಗಳನ್ನು ನಾನು ನಿಮಗೆ ಕಟ್ಟಿಕೊಡುವೆನು (ಯೋವೇ. 2:25) ಎಂದು ಕರ್ತನು ವಾಗ್ದಾನ ಮಾಡಿದನು. ದೇವರ ಮಕ್ಕಳು ಎಂದಿಗೂ ಅವಮಾನಕ್ಕೆ ಒಳಗಾಗುವದಿಲ್ಲ. ಕೆಲವು ವೇಳೆಗಳಲ್ಲಿ ದೇವರನ್ನು ಬಿಟ್ಟು ದೂರ ಹೋಗುವಾಗ, ಕಷ್ಟನಷ್ಟಗಳು ಉಂಟಾಗಿರಬಹುದು. ಆದರೆ ಪಶ್ಚಾತ್ತಾಪದಿಂದ ದೇವರ ಕಡೆಗೆ ತಿರುಗುವಾಗ, ಆತನು ನಿಮ್ಮ ದುಃಖವನ್ನು ಸಂತೋಷವಾಗಿ ಮಾರ್ಪಡಿಸುವನು. ದೇವರ ಕೃಪೆಯನ್ನು, ಆಶೀರ್ವಾದವನ್ನು ಅಧಿಕವಾಗಿ ಪಡೆಯುವಿರಿ. ಅತಿಶಯಗಳನ್ನೂ ಅದ್ಭುತಗಳನ್ನೂ ನಿಮ್ಮ ಜೀವಿತದಲ್ಲಿ ಕಾಣುವಿರಿ. ಒಂದು ದಿನ ಸೀಮೋನ ಪೇತ್ರನು ಕ್ರಿಸ್ತನನ್ನು ಕುರಿತು ಗುರುವೇ, ರಾತ್ರಿಯೆಲ್ಲಾ ಬಲೆ ಬೀಸಿದರೂ ಒಂದು ಮೀನಾದರೂ ಸಿಗಲಿಲ್ಲ ಎಂದು ದುಃಖದಿಂದ ಹೇಳಿದನು. ಒಂದು ವೇಳೆ ನೀವೂ ಕೆಲಸಕ್ಕಾಗಿ ಎಷ್ಟೇ ಪ್ರಯಾಸ ಪಟ್ಟರೂ ಸಿಗಲಿಲ್ಲ. ಮಗಳ ಮದುವೆ ಕೈಗೂಡಲಿಲ್ಲ ಎಂದು ಹೇಳಬಹುದು. ಪೇತ್ರನು ಕೊನೆಯಲ್ಲಿ ಏನು ಹೇಳಿದನು? "ಆದರೂ ನಿನ್ನ ಮಾತಿನಂತೆ ಬಲೆಬೀಸುವೆನು" ಎಂದು ಹೇಳಿ ಪ್ರಯತ್ನಿಸಿದಾಗ ಬಲೆ ಹರಿದುಹೋಗುವಷ್ಟು ಮೀನುಗಳು ದೊರಕಿದವು. ನೀವೂ ಅವನಂತೆ ಕರ್ತನ ಮಾತುಗಳಲ್ಲಿ, ವಾಗ್ದಾನಗಳಲ್ಲಿ ನಂಬಿಕೆ ಇಟ್ಟು ಕಾರ್ಯ ನಡೆಸುವಾಗ ನೀವು ನೆನಸುವದಕ್ಕಿಂತ ಅಧಿಕವಾದ ಫಲಗಳನ್ನು ಕಾಣುವಿರಿ.

ದೇವಮಕ್ಕಳೇ, ನಿಮ್ಮ ಪಕ್ಕದಲ್ಲೇ ಅದ್ಭುತವಿರುವದು. ನಂಬಿಕೆಯಿಂದ ಪಡೆದುಕೊಳ್ಳಿರಿ.

*ನೆನಪಿಗೆ : ನೀನು ಐಗುಪ್ತ ದೇಶದೊಳಗಿಂದ ಪಾರಾಗಿ ಬಂದ ಕಾಲದಲ್ಲಿ ನಾನು ತೋರಿಸಿದಂತೆ ಅದ್ಭುತಗಳನ್ನು ತೋರಿಸುವೆನು (ಮೀಕ. 7:15).*

ಜೂನ್ 6

## ಹೋಗುವ ಮಾರ್ಗದಲ್ಲಿ!

ಬೆಳಿಗ್ಗೆ : 2ಪೂ.ವೃ.25,26,27
ಸಂಜೆ : ಯೋಹಾ 16

ದೇವರು ನನ್ನ ಸಂಗಡ ಇದ್ದು ನಾನು ಹೋಗುವ ಈ ಮಾರ್ಗದಲ್ಲಿ ನನ್ನನ್ನು ಕಾಪಾಡಿ.... (ಆದಿ. 28:20,21).

ಯಾಕೋಬನ ಜೀವಿತವನ್ನು ನೋಡಿರಿ! ಅವನು ತನ್ನ ತಾಯಿಯ ಮಾತಿನಂತೆ ತಂದೆಯಾದ ಇಸಾಕನಿಂದ ಮೋಸವಾಗಿ ತನ್ನ ಅಣ್ಣನಿಗೆ ಸಿಗಬೇಕಾದ ಆಶೀರ್ವಾದವನ್ನು ತಾನು ಪಡೆದನು. ನಂತರ ಅಣ್ಣನಿಂದ ಒದಗಲಿರುವ ಕೇಡಿಗೆ ಹೆದರಿ ಮನೆಯನ್ನೇ ಬಿಟ್ಟು ಓಡಿಹೋದನು.

ಈಗ ತಾಯಿಯ ಪ್ರೀತಿಯೂ ಇಲ್ಲ, ತಂದೆಯ ದಯೆಯೂ ಇಲ್ಲ. ಎಲ್ಲಿ ಹೋಗಬೇಕು, ಏನು ಮಾಡಬೇಕೆಂದು ಗೊತ್ತಿಲ್ಲ. ಸೂರ್ಯನು ಅಸ್ತಮಿಸಿ ಇರುಳಾಯಿತು. ಅಯ್ಯೋ, ಎಲ್ಲರೂ ಕೈಬಿಟ್ಟರೇ ಎಂದು ದುಃಖದಿಂದ ಒಂದು ಕಲ್ಲನ್ನು ತಲೆದಿಂಬಾಗಿ ಇಟ್ಟುಕೊಂಡು ನಿದ್ರೆಹೋದನು. ಆಗ ದೇವರು ದರ್ಶನ ನೀಡಿ "ನಾನು ನಿನ್ನ ತಂದೆಯಾದ ಅಬ್ರಹಾಮ, ಇಸಾಕನ ದೇವರು ಆಗಿರುವ ಯೆಹೋವನು. ನೀನು ಮಲಗಿಕೊಂಡಿರುವ ಈ ದೇಶವನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ. ನಾನು ನಿನ್ನ ಸಂಗಡ ಇದ್ದು ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿ ನಿನ್ನನ್ನು ಕಾಪಾಡಿ ತಿರುಗಿ ಈ ದೇಶಕ್ಕೇ ಬರಮಾಡುತ್ತೇನೆ. ನಾನು ನಿನಗೆ ಹೇಳಿದ್ದನ್ನೆಲ್ಲಾ ನೆರವೇರಿಸದ ಹೊರತು ಬಿಡುವದಿಲ್ಲ" ಎಂದು ವಾಗ್ದಾನ ಮಾಡಿದನು (ಆದಿ. 28:13–15). ಈ ವಾಗ್ದಾನವನ್ನು ನೋಡಿರಿ. ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿ ನಿನ್ನೊಂದಿಗೆ ಇದ್ದು ಕಾಪಾಡುವೆನು. ನೀನು ಹಿಂತಿರುಗಿ ಬರುವಾಗಲು ನಿನ್ನೊಂದಿಗಿದ್ದು ಕಾಪಾಡುವೆನು ಎಂದು ಕರ್ತನು ಹೇಳುತ್ತಾನೆ. ಇದರ ಅರ್ಥ ನಾನು ನಿನ್ನೊಂದಿಗೆ ನಿರಂತರವಾಗಿ ಇರುತ್ತೇನೆ ಎಂಬುದೇ. ಯಾವಾಗ ದೇವರು ನಮ್ಮೊಂದಿಗಿರುವನೋ ನೀವು ಯಾವದೇ ಕೇಡಿಗೆ ಭಯಪಡಬೇಕಾಗಿಲ್ಲ. ಆತನು ನಿಮ್ಮೊಂದಿಗೆ ಇರಬೇಕಾದರೆ ಒಂದು ನಿಬಂಧನೆ ಉಂಟು. ನೀವು ಆತನಲ್ಲಿ ನಂಬಿಕೆ ಇಡಬೇಕು, ಮಾತ್ರವಲ್ಲ ಆತನ ಸ್ವರಕ್ಕೆ ಓಗೊಟ್ಟು ಆತನಿಗೆ ವಿಧೇಯರಾಗಿ ನಡೆದುಕೊಳ್ಳಬೇಕು. ಆತನನ್ನು ನಂಬಿದ ಮಕ್ಕಳಿಗೆ ಈ ಲೋಕದಲ್ಲಿ ಯಾವದೇ ಉಪದ್ರವ ಉಂಟಾಗುವದಿಲ್ಲವೆಂದು ಅರ್ಥವಲ್ಲ, ಉಂಟಾದಾಗ್ಯೂ ಕರ್ತನ ಹಸ್ತ ಉಪದ್ರವಗಳ ನಡುವೆಯೂ ನಿಮ್ಮನ್ನು ರಕ್ಷಿಸುವದು.

ದೇವಮಕ್ಕಳೇ, ಅಂದು ಯಾಕೋಬನು ನನ್ನನ್ನು ತಂದೆಯ ಮನೆಗೆ ಸುಖವಾಗಿ ಹಿಂದಿರುಗಿಸಿದರೆ, ಯೆಹೋವನಿಗೆ ಒಂದು ಆಲಯವನ್ನು ಕಟ್ಟುವದಾಗಿ, ತನ್ನ ಎಲ್ಲಾ ಆದಾಯದಲ್ಲಿ ದಶಮಭಾಗ ಕೊಡುವದಾಗಿ ಹರಕೆ ಹೊತ್ತನು. ಇಂದು ನೀವೂ ನಿಮ್ಮನ್ನು ನಡೆಸುವ ದೇವರಿಗೆ ಆದಾಯದಲ್ಲಿ ದಶಮ ಭಾಗ ಮಾತ್ರವಲ್ಲ, ನಿಮ್ಮ ಜೀವಿತದಲ್ಲಿಯೂ ಆತನಿಗೆ ಮೊದಲ ಸ್ಥಾನ ನೀಡುವದಾಗಿ ಹರಕೆ ಹೊತ್ತುಕೊಳ್ಳಿ.

*ನೆನಪಿಗೆ : ನಿಮ್ಮ ದೇವರಾದ ಯೆಹೋವನು ನಿಮ್ಮ ಸಂಗಡ ಇದ್ದದರಿಂದ ನಿಮಗೆ ಏನೂ ಕಡಿಮೆಯಾಗಲಿಲ್ಲ (ಧರ್ಮೋ. 2:7).*



ಜೂನ್ 7

## ನಿತ್ಯತ್ವದವರೆಗೆ ನಡೆಸುತ್ತಾನೆ!

ಬೆಳಿಗ್ಗೆ : 2 ಪೂ.ವೃ. 28,29
ಸಂಜೆ : ಯೋಹಾ 17

ಸಿಂಹಾಸನದ ಮಧ್ಯದಲ್ಲಿರುವ ಯಜ್ಞದ ಕುರಿಯಾದಾತನು ಅವರಿಗೆ ಕುರುಬನಂತಿದ್ದು ಜೀವಜಲದ ಒರತೆಗಳ ಬಳಿಗೆ ನಡೆಸುತ್ತಾನೆ (ಪ್ರಕ. 7:17).

ದೇವರು ನಿಮ್ಮನ್ನು ಇಹಲೋಕದಲ್ಲಿ ನಡೆಸುವದು ಮಾತ್ರವಲ್ಲ, ನಿತ್ಯತ್ವದವರೆಗೂ ನಡೆಸುವನು. ನಿಮ್ಮ ಓಟ ಜಯಭರಿತವಾಗಿ ಮುಗಿದು, ನೀತಿಯೆಂಬ ಕಿರೀಟವನ್ನು ಕರ್ತನ ಕರಗಳಿಂದ ಪಡೆದು ಸಂತೋಷಿಸುವಿರಿ. ಆತನೇ ನಿಮ್ಮ ಕಣ್ಣೀರನ್ನೆಲ್ಲಾ ಒರೆಸುವನು. ಕರ್ತನು ನಿಮ್ಮನ್ನು ನಡೆಸುವ ದಾರಿ ಆದರಣೆಯ ದಾರಿ. ಜೀವಜಲದ ಒರತೆಗಳ ಬಳಿಗೆ ನಿಮ್ಮನ್ನು ನಡೆಸಿಕೊಂಡು ಹೋಗುವನು.

ಒಮ್ಮೆ ಯೇಸುಕ್ರಿಸ್ತನು ಸಮಾರ್ಯದ ಬಾವಿಯ ಬಳಿಗೆ ಬಂದಾಗ ಅಲ್ಲಿಗೆ ಬಂದ ಒಂದು ಸ್ತ್ರೀಯ ಬಳಿ ನನ್ನ ದಾಹವನ್ನು ತಣಿಸಲು ನೀರುಕೊಡು ಎಂದು ಕೇಳಿದನು. ಆ ಸ್ತ್ರೀ ಪ್ರೀತಿಗಾಗಿ ಹಾತೊರೆದು ಜೀವನದಲ್ಲಿ ನೊಂದವಳು. ಅವಳು ಐದು ಮಂದಿ ಪುರುಷರನ್ನು ಮದುವೆಯಾದರೂ ಸಂತೋಷದ ಜೀವಿತ ಅವಳಿಗೆ ಸಿಗಲಿಲ್ಲ. ಇಂದು ಪ್ರೀತಿಗಾಗಿ ಹಂಬಲಿಸುವ ಅನೇಕ ರೀತಿಯ ಜನರನ್ನು ನೋಡಬಹುದು. ಗಂಡನಿಂದ ಕೈಬಿಡಲ್ಪಟ್ಟ ಹೆಂಡತಿ, ಹೆತ್ತವರಿಂದ ಕೈಬಿಡಲ್ಪಟ್ಟ ಮಕ್ಕಳು, ಮಕ್ಕಳಿಂದ ತ್ಯಜಿಸಲ್ಪಟ್ಟ ವಯಸ್ಸಾದ ತಂದೆ ತಾಯಿಗಳು, ಆದರೂ ದೇವರು ಅವರನ್ನು ಕೈಬಿಡದೆ, ಕೈ ಹಿಡಿದು ಜೀವಜಲದ ಒರತೆಗಳ ಬಳಿ ನಡೆಸುವನು. ಆತನು ಎಂದಿಗೂ ಕೈಬಿಡನು. ದಾವೀದನು ಒಂದು ದಿನ ತನ್ನ ಮುಪ್ಪಿನ ಕಾಲ ಹೇಗಿರುವದೋ? ಕರ್ತನು ನನ್ನನ್ನು ಹೇಗೆ ನಡೆಸುವನೋ? ಎಂದು ಕಳವಳಗೊಂಡನು. ಅವನು ಹೀಗೆ ಒಂದು ಚಿಕ್ಕ ಪ್ರಾರ್ಥನೆಯನ್ನು ಮಾಡಿದನು. "ವೃದ್ಧಾಪ್ಯದಲ್ಲಿ ನನ್ನನ್ನು ಧಿಕ್ಕರಿಸಬೇಡ. ನನ್ನ ಬಲವು ಕುಂದಿದಾಗ ಕೈಬಿಡಬೇಡ" (ಕೀರ್ತ.71:9) ಎಂದು ಕರ್ತನ ಕೈಯಲ್ಲಿ ತನ್ನನ್ನು ಒಪ್ಪಿಸಿಕೊಟ್ಟು ಪ್ರಾರ್ಥಿಸಿದ ಮೇಲೆ ಅವನ ಆಂತರ್ಯದಲ್ಲಿ ಒಂದು ದೊಡ್ಡ ನೆಮ್ಮದಿ ಉಂಟಾಯಿತು. ನಂತರ ವಿಶ್ವಾಸ ಅರಿಕೆ ಮಾಡಿ ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ, ಕೃಪೆಯೂ ನನ್ನನ್ನು ಹಿಂಬಾಲಿಸುವವು, ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು" ಅಂದನು (ಕೀರ್ತ. 23:6).

ದೇವಮಕ್ಕಳೇ, ಕಳವಳಪಡಬೇಡಿರಿ, ಈ ಲೋಕದಲ್ಲಿ ಎಷ್ಟೋ ಭಕ್ತರು ಜೀವಿಸಿ, ತಮ್ಮ ಓಟವನ್ನು ಜಯಭರಿತವಾಗಿ ಓಡಿ ಮುಗಿಸಿರುವರು. ಅವರನ್ನು ಕೈಬಿಡದೆ ಕೊನೆಯವರೆಗೆ ನಡೆಸಿದ ದೇವರು ನಿಮ್ಮನ್ನು ನಡೆಸುವನು. ಎಡವಿ ಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಆತನು ಶಕ್ತನಾಗಿರುವನು (ಯೂದ. 1:24).

*ನೆನಪಿಗೆ : ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ, ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆ (ಯೋಹಾ. 14:1–2).*

ಜೂನ್
೮

## ನೆಟ್ಟನೆಯ ಮಾರ್ಗದಲ್ಲಿ!

ಬೆಳಿಗ್ಗೆ : 2 ಪೂ.ವೃ. 30,31
ಸಂಜೆ : ಯೋಹಾ 18:1–18

ನನ್ನನ್ನು ನೀಟಾದ ದಾರಿಯಲ್ಲಿ ಕರೆದುಕೊಂಡು ಬಂದದ್ದಕ್ಕಾಗಿ ಆತನನ್ನು ಕೊಂಡಾಡಿದೆನು (ಆದಿ. 24:48).

ಕರ್ತನು ನಿಮ್ಮನ್ನು ಅನುದಿನವೂ ನಡೆಸುವನು, ನೀತಿಯ ಮಾರ್ಗದಲ್ಲಿ ನಡೆಸುವನು. ನಿತ್ಯತ್ವದವರೆಗೂ ನಡೆಸುವನು. ಮಾತ್ರವಲ್ಲ, ನೆಟ್ಟನೆಯ ಮಾರ್ಗದಲ್ಲಿ ನಡೆಸುವನು. ಆತನು ನಡೆಸುವ ಮಾರ್ಗಗಳನ್ನು ನೆನಸುವಾಗ, ಅದು ಆಶ್ಚರ್ಯವೂ, ಅತಿಶಯವೂ ಆಗಿರುವದು. ಆತನ ಬಳಿ ನಿಮ್ಮ ಜವಾಬ್ದಾರಿಗಳನ್ನು ಒಪ್ಪಿಸಿಕೊಡುವಾಗ, ನಿಮ್ಮನ್ನು ಸರಿಯಾದ ರೀತಿಯಲ್ಲಿ ನಡೆಸುವನು, ನೆಟ್ಟನೆಯ ಮಾರ್ಗದಲ್ಲಿ ನಡೆಸುವನು.

ಅಬ್ರಹಾಮನ ಮಗನಾದ ಇಸಾಕನಿಗೆ ಹೆಣ್ಣು ಗೊತ್ತುಮಾಡುವ ಕಾರ್ಯಕ್ಕಾಗಿ, ಅಬ್ರಹಾಮನ ಮನೆಯ ಮೇಲ್ವಿಚಾರಕನಾದ ಎಲಿಯೇಜ಼ರನು ಹೊರಟಾಗ ಅಬ್ರಹಾಮನು ತನ್ನ ಸೇವಕನಿಗೆ ನನ್ನ ಸ್ವದೇಶಕ್ಕೂ ನನ್ನ ಬಂಧುಗಳ ಬಳಿಗೂ ಹೋಗಿ ಅವರಲ್ಲೇ ನನ್ನ ಮಗನಿಗೆ ಹೆಣ್ಣನ್ನು ತೆಗೆದುಕೊಳ್ಳಬೇಕು. ಹಾಗೆ ತೆಗೆದುಕೊಳ್ಳುತ್ತೇನೆಂಬುದಕ್ಕೆ ನೀನು ನನ್ನ ತೊಡೆಯ ಕೆಳಗೆ ಕೈಯಿಟ್ಟು ಭೂಲೋಕ ಪರಲೋಕಗಳ ದೇವರಾಗಿರುವ ಯೆಹೋವನ ಮೇಲೆ ಪ್ರಮಾಣ ಮಾಡಬೇಕೆಂದು ಪ್ರಮಾಣ ಮಾಡಿಸಿಕೊಂಡನು (ಆದಿ. 24:4). ಅಬ್ರಹಾಮನು ಆ ಭಾರವನ್ನು ಕರ್ತನ ಮೇಲೆ ಇಟ್ಟನು. ಎಲೀಯೇಜ಼ರನೂ ಸಹ ಕರ್ತನ ಕೈಯಲ್ಲಿ ತನ್ನ ಜವಾಬ್ದಾರಿಯನ್ನು ಕೊಟ್ಟು "ನನ್ನ ದಣಿಯಾದ ಅಬ್ರಹಾಮನ ದೇವರಾಗಿರುವ ಯೆಹೋವನೇ, ಈ ಹೊತ್ತು ನಾನು ಬಂದ ಕಾರ್ಯವನ್ನು ನೀನು ಅನುಕೂಲಪಡಿಸಿ ನನ್ನ ದಣಿಯಾದ ಅಬ್ರಹಾಮನಿಗೆ ಉಪಕಾರ ಮಾಡಬೇಕೆಂದು ಬೇಡುತ್ತೇನೆ (ಆದಿ. 24:12) ಎಂದು ಪ್ರಾರ್ಥಿಸಿ ಹೆಣ್ಣು ನೋಡಲು ಹೊರಟನು. ಆದ್ದರಿಂದಲೇ ತಕ್ಕ ಗುಣವತಿಯಾದ ಹೆಣ್ಣನ್ನು ಕರ್ತನು ಎಲಿಯೇಜ಼ರನಿಗೆ ತೋರಿಸಿದನು. ಆಗ ಎಲೀಯೇಜ಼ರನು ತಲೆಬಾಗಿ ಕರ್ತನಿಗೆ ನಮಸ್ಕರಿಸಿ ನನ್ನನ್ನು ನೀಟಾದ ದಾರಿಯಲ್ಲಿ ಕರೆದುಕೊಂಡು ಬಂದ ನನ್ನ ದಣಿಯಾದ ಅಬ್ರಹಾಮನ ದೇವರಾದ ಯೆಹೋವನಿಗೆ ಸ್ತೋತ್ರ ಅಂದನು (ಆದಿ.24:48).

ದೇವಮಕ್ಕಳೇ, ಅಬ್ರಹಾಮ, ಎಲೀಯೇಜ಼ರರಂತೆ ನಿಮ್ಮ ಭಾರವನ್ನು ಕರ್ತನ ಕೈಯಲ್ಲಿ ಒಪ್ಪಿಸಿಕೊಡುವಾಗ, ನಿಶ್ಚಯವಾಗಿ ಕರ್ತನು ನಿಮ್ಮನ್ನು ನೀಟಾದ ಮಾರ್ಗದಲ್ಲಿ ನಡೆಸಿ ನಿಮ್ಮ ಕಾರ್ಯಗಳನ್ನು ಸಫಲಗೊಳಿಸುವನು. ಅದು ದೊಡ್ಡ ಕಾರ್ಯವಾಗಲಿ, ಚಿಕ್ಕ ಕಾರ್ಯವಾಗಲಿ ಅದರ ಜವಾಬ್ದಾರಿಯನ್ನು ಕರ್ತನ ಕರಗಳಲ್ಲಿಟ್ಟು ಮುನ್ನಡೆಯಿರಿ. ಆತನು ನಿಮಗೆ ಸಹಾಯ ಮಾಡುವನು. ಆದರೆ ಒಂದು ಎಚ್ಚರಿಕೆಯನ್ನು ವಹಿಸಬೇಕು. ನೀವು ಮಾಡುವ ಕಾರ್ಯ ಕರ್ತನ ಚಿತ್ತಕ್ಕೆ ಒಪ್ಪುವಂಥದ್ದಾಗಿರಬೇಕು.

*ನೆನಪಿಗೆ : ಕೋರಿದ್ದಕ್ಕೆ ತಡವಾದರೆ ಮನಸ್ಸು ಬಳಲುವದು, ಕೈಗೂಡಿದ ಇಷ್ಟಾರ್ಥವು ಜೀವವೃಕ್ಷವು (ಜ್ಞಾನೋ. 13:12).*



ಜೂನ್
೯

## ಮರುಭೂಮಿಯಲ್ಲೂ ನಡೆಸುವನು!

ಬೆಳಿಗ್ಗೆ : 2 ಪೂ.ವೃ. 32,33
ಸಂಜೆ : ಯೋಹಾ 18:19–40

ಯೆಹೋವನು ನಿಮ್ಮನ್ನು ನಿತ್ಯವೂ ನಡೆಸುತ್ತಾ ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸುವನು (ಯೆಶಾ. 58:11).

ನಿಮ್ಮನ್ನು ಅನುದಿನವೂ ಕೈಹಿಡಿದು ನಡೆಸುವ ಕರ್ತನನ್ನು ಕೃತಜ್ಞತೆಯಿಂದ ನೋಡಿರಿ. ಆತನು ನಿಮ್ಮನ್ನು ಮರುಭೂಮಿಯಲ್ಲಿಯೂ ನಡೆಸುವನು. ಅಂದರೆ ಕೊರತೆಗಳಿರುವಾಗಲೂ, ಕಷ್ಟ ಸಂಕಟಗಳ ನಡುವೆ ಹಾದು ಹೋಗುವಾಗಲೂ ನಿಮ್ಮನ್ನು ನಡೆಸುವನು. ಯೆಹೋವನು ನೀತಿವಂತನನ್ನು ಹಸಿವೆಗೊಳಿಸನು (ಜ್ಞಾನೋ. 10:3). "ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು. ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ" (ಕೀರ್ತ.34:10). "ಅವರ ಪ್ರಾಣವನ್ನು ಮರಣದಿಂದ ತಪ್ಪಿಸುವನು; ಬರಗಾಲದಲ್ಲಿ ಅವರ ಜೀವವನ್ನು ಉಳಿಸುವನು" (ಕೀರ್ತ.33:19). "ಅವರಿಗೆ ವಿಪತ್ಕಾಲದಲ್ಲಿಯೂ ಆಶಾಭಂಗವಾಗುವದಿಲ್ಲ; ಬರಗಾಲದಲ್ಲಿಯೂ ಅವರಿಗೆ ಕೊರತೆಯಿಲ್ಲ" (ಕೀರ್ತ. 37:19) ಎಂಬುದು ಕರ್ತನ ವಾಗ್ದಾನಗಳಾಗಿರುವವು.

ಈ ಮರುಭೂಮಿಯಂಥಹ ಸ್ಥಿತಿ. ಲೌಕೀಕ ಜೀವಿತಕ್ಕೆ ಮಾತ್ರವಲ್ಲ, ಆತ್ಮೀಕ ಜೀವಿತದಲ್ಲೂ ಉಂಟಾಗುವದು. ಪ್ರವಾದಿಯಾದ ಆಮೋಸನು ಹೀಗೆ ಪ್ರವಾದಿಸುತ್ತಾನೆ –ಕರ್ತನಾದ ಯೆಹೋವನು ಇಂತೆನ್ನುತ್ತಾನೆ "ಆಹಾ, ನಾನು ದೇಶಕ್ಕೆ ಕ್ಷಾಮವನ್ನು ಉಂಟುಮಾಡುವ ದಿನಗಳು ಬರುತ್ತಿವೆ. ಅದು ಅನ್ನದ ಕ್ಷಾಮವಲ್ಲ, ನೀರಿನ ಕ್ಷಾಮವಲ್ಲ, ಯೆಹೋವನ ವಾಕ್ಯಗಳ ಕ್ಷಾಮವೇ" (ಆಮೋಸ.8:11). ಇಂದು ಅನೇಕ ಮ್ಯೂಸಿಸ್ಟ್ ದೇಶಗಳಲ್ಲಿ ದೇವರ ವಾಕ್ಯಗಳು ಸಿಗುವದಿಲ್ಲ. ನಮ್ಮ ಭಾರತ ದೇಶದಲ್ಲೂ ಕೆಲವು ರಾಜ್ಯಗಳಲ್ಲಿ ಕ್ರೈಸ್ತ ಮಾರ್ಗಕ್ಕೆ ತಡೆಯಾದ ಕಾನೂನುಗಳೂ, ಸರ್ಕಾರದ ವಿರೋಧಗಳೂ ಇರುವವು. ಮತಾಂತರ ಮಾಡುವರೆಂಬ ಕೂಗು ಇದೆ. ಎಷ್ಟೇ ವಿರೋಧಗಳು ಬಂದರೂ ಕರ್ತನೇ ನಿಮ್ಮ ಆತ್ಮಗಳನ್ನು ತೃಪ್ತಿಗೊಳಿಸಿ, ನಿಮ್ಮ ಎಲುಬುಗಳನ್ನು ಸಸಾರಗೊಳಿಸುವನು. ಒಮ್ಮೆ ಲೂಥರನ್ ಸಭೆಗೆ ಸೇರಿದ ಒಬ್ಬ ಧನಿಕರು, ಚೀಣಾ ದೇಶಕ್ಕೆ ಹೋದರು. ಅಲ್ಲಿ ರಹಸ್ಯವಾಗಿ ದೇವರನ್ನು ಆರಾಧಿಸುತ್ತಿದ್ದ ಒಂದು ಪ್ರಾರ್ಥನಾ ಗುಂಪಿನವರು ಅವರನ್ನು ಆಮಂತ್ರಿಸಿದರು. ಆರಾಧನೆ ನಡೆಸುತ್ತಿದ್ದ ಒಬ್ಬ ಬಡ ತಾಯಿಯ ಬಳಿ ಕರೆದುಕೊಂಡು ಹೋದರು. ಆಕೆ ಆತನ ಮೇಲೆ ಕೈಯಿಟ್ಟು ಪ್ರಾರ್ಥಿಸುತ್ತಿದ್ದಂತೆಯೇ ಆತನು ಕರೆಂಟ್ ಹೊಡೆದವನಂತೆ ಕೆಳಕ್ಕೆ ಬಿದ್ದುಬಿಟ್ಟರು. ಎಚ್ಚರವಾದಾಗ ಆಕೆಯನ್ನು ನೋಡಿ ಅಮ್ಮಾ ಇಷ್ಟು ದೊಡ್ಡ ಅಭಿಷೇಕ ದೈವೀಕ ಬಲ ನಿಮಗೆ ಎಲ್ಲಿಂದ ಬಂತು ಎಂದು ಕೇಳಲಾಗಿ ಆಕೆ "ಅಯ್ಯೋ, ನಾನು ಸತ್ಯವೇದವನ್ನು ದಾಹದಿಂದ ಪ್ರತಿದಿನ ಓದುವೆನು. ಹಲವು ಕಾಲ ನನ್ನನ್ನು ಸೆರೆಮನೆಯಲ್ಲಿಟ್ಟಾಗ ಕರ್ತನ ವಾಕ್ಯಗಳು ಆದರಣೆ ನೀಡಿ ಬಲಪಡಿಸಿತು" ಎಂದು ಹೇಳಿದಳು.

ದೇವಮಕ್ಕಳೇ, ನಿಮ್ಮನ್ನು ಕರ್ತನ ಕೈಗಳಲ್ಲಿ ಒಪ್ಪಿಸಿಕೊಟ್ಟು ಅನುದಿನವೂ ಆತನ ವಾಕ್ಯಗಳನ್ನು ಧ್ಯಾನಿಸುವಾಗ ಕರ್ತನು ನಿಶ್ಚಯವಾಗಿ ನಿಮ್ಮನ್ನು ಎಲ್ಲಾ ಸನ್ನಿವೇಶಗಳಲ್ಲಿ ನಡೆಸಿ ಕಾಪಾಡುವನು.

*ನೆನಪಿಗೆ : ಕುರುಬನು ಕುರಿಹಿಂಡನ್ನು, ಹೇಗೋ ಹಾಗೆ ನೀನು ಮೋಶೆ ಆರೋನರ ಮುಖಾಂತರ ನಿನ್ನ ಪ್ರಜೆಯನ್ನು ಕರೆದೊಯ್ದಿ (ಕೀರ್ತ. 77:20).*

ಜೂನ್ 10

## ಬತ್ತದ ಬುಗ್ಗೆಗಳಾಗಿರುವಿರಿ!

ಬೆಳಿಗ್ಗೆ : 2ಪೂ.ವೃ.34,35,36
ಸಂಜೆ : ಯೋಹಾ 19:1–22

ನೀವು ತಂಪಾದ ತೋಟಕ್ಕೂ ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನವಾಗುವಿರಿ (ಯೆಶಾ.58:11).

ನೀವು ತಂಪಾದ ತೋಟಕ್ಕೂ ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನವಾಗಿ ಇರಬೇಕಾದರೆ ನೀವು ಕರ್ತನಿಂದ ನಡೆಸಲ್ಪಡುವವರಾಗಿರಬೇಕು. ಆಗ ನಿಮ್ಮ ಜೀವಿತವೆಲ್ಲಾ ಸಂತೋಷಕರವಾಗಿಯೂ ಭಾಗ್ಯಕರವಾಗಿಯೂ ಇರುವದು. ಕರ್ತನು ಹಾಗೆಯೇ ನಿಮ್ಮನ್ನು ಆಶೀರ್ವದಿಸಲಿ.

ನಮ್ಮ ದೇಶದಲ್ಲಿ ಊರುಗಳಲ್ಲಿ ನದಿಗಳು, ಕೆರೆಕಟ್ಟೆಗಳು ಇರುವವು. ಆದರೆ ಬಿಸಿಲುಕಾಲ ಬಂತೆಂದರೆ ಅನೇಕ ನದಿಗಳು ಕೆರೆಗಳು ಬತ್ತಿಹೋಗುವವು. ಸುತ್ತಮುತ್ತಲಿರುವ ಗಿಡ ಮರಗಳು ಬಿಸಿಲಿನ ತಾಪಕ್ಕೆ ಒಣಗಿಹೋಗುವವು. ಆದರೆ ನಮ್ಮ ಕರ್ತನಾದರೋ ಜೀವನದಿಯಾಗಿರುವನು. ಆತನಲ್ಲಿರುವ ಜೀವಜಲವು ವರ್ಷವಿಡೀ ನಮ್ಮೊಳಗೆ ಹರಿದುಬರುವದರಿಂದ ಬತ್ತಿಹೋಗದ ನೀರಿನ ಬುಗ್ಗೆಗಳಾಗಿರುವೆವು. ನಿತ್ಯವೂ ನಿಮ್ಮ ಪಾತ್ರೆಯು ತುಂಬಿ ಹೊರಸೂಸುತ್ತಲೇ ಇರುವದು (ಕೀರ್ತ. 23:5). ಈ ಜೀವನದಿ ಕೊರತೆಗಳನ್ನು ನೀಗಿಸುವಂಥದ್ದು. ಒಬ್ಬ ಪ್ರವಾದಿಯು ಮರಣ ಹೊಂದಿದಾಗ ಅವನ ಮನೆಯಲ್ಲಿ ಹಣದ ಕೊರತೆ ಉಂಟಾಯಿತು. ಮನೆಯಲ್ಲಿದ್ದ ಒಂದು ಪಾತ್ರೆಯಲ್ಲಿನ ಎಣ್ಣೆಯ ಹೊರತು ಬೇರೇನೂ ಇರಲಿಲ್ಲ. ಆ ಪ್ರವಾದಿಯ ಹೆಂಡತಿ ಪ್ರವಾದಿಯಾದ ಎಲೀಷನ ಬಳಿ ಬಂದು ತನ್ನ ಗಂಡನು ಮಾಡಿದ ಸಾಲವನ್ನು ಹಿಂದಿರುಗಿಸಲಾರದ ಸ್ಥಿತಿಯನ್ನು ಹೇಳಿಕೊಂಡಾಗ ಎಲೀಷನು ದೈವಸಂದೇಶದಂತೆ ಪಾತ್ರೆಗಳಲ್ಲಿ ಆ ಎಣ್ಣೆಯನ್ನು ಹೊಯ್ದಾಗ ಎಲ್ಲಾ ಪಾತ್ರೆಗಳೂ ಎಣ್ಣೆಯಿಂದ ತುಂಬಿದವು. ಆ ಎಣ್ಣೆಯನ್ನು ಮಾರಿ ಅವಳು ತನ್ನ ಸಾಲವನ್ನು ತೀರಿಸಿದಳು. ಹೌದು, ನಮ್ಮ ದೇವರು ಬತ್ತಿಹೋಗದ ಜೀವದ ಬುಗ್ಗೆಯಾಗಿರುವನು. ಆ ವಿಧವೆಯ ಮನೆಯಲ್ಲಿನ ಪಾತ್ರೆಯಂತೆ ಇಂದಿಗೂ ನಿಮ್ಮೊಳಗೆ ಪವಿತ್ರಾತ್ಮನ ಅಭಿಷೇಕವನ್ನು ಸುರಿಸುತ್ತಿರುವನು. ಆತನು ಜೀವನದಿಯಲ್ಲವೇ? "ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನುಂಟು ಮಾಡುವದು" (ಯೋಹಾ. 4:14) ಎಂದು ಕರ್ತನು ಹೇಳಿರುವನು.

ದೇವಮಕ್ಕಳೇ, ಕ್ರಿಸ್ತನೊಬ್ಬನೇ ನಿಮ್ಮ ಆತ್ಮೀಕ ದಾಹವನ್ನು ತೀರಿಸುವಾತನು. ಈ ಲೋಕದ ಜನರು ಪಾಪಭೋಗಗಳನ್ನು ಹುಡುಕಿ ದಾಹದಿಂದ ಓಡುತ್ತಿರುವರು. ಅಂಥವರು ಎಂದಿಗೂ ತೃಪ್ತಿಗೊಳ್ಳುವದಿಲ್ಲ. ಆದರೆ ಕರ್ತನು ನಿಮ್ಮ ದಾಹವನ್ನು ತೀರಿಸುವದು ಮಾತ್ರವಲ್ಲ, ನಿಮ್ಮನ್ನು ಇತರರಿಗೆ ಆಶೀರ್ವಾದವಾಗಿರುವಂತೆ ನಿಮ್ಮೊಳಗೆ ಇದ್ದು ಆ ಬುಗ್ಗೆಯು ಉಕ್ಕುವಂತೆ ಮಾಡುವನು.

*ನೆನಪಿಗೆ : ಆತನು ಬಂಡೆಯನ್ನು ಕೆರೆಯನ್ನಾಗಿಯೂ, ಶಿಲೆಯನ್ನು ಬುಗ್ಗೆಯನ್ನಾಗಿಯೂ ಮಾರ್ಪಾಡಿಸುತ್ತಾನೆ (ಕೀರ್ತ. 114:8).*



ಜೂನ್ 11

## ಬಲಪಡಿಸುತ್ತೇನೆ!

ಬೆಳಿಗ್ಗೆ : ಎಜ್ರ 1,2
ಸಂಜೆ :ಯೋಹಾ 19:23–42

ನೀನಂತೂ ಹೆದರಬೇಡ, ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು ನಿನಗೆ ಸಹಾಯ ಕೊಡುತ್ತೇನೆ. ನನ್ನ ಧರ್ಮದ ಬಲಗೈ ನಿನಗೆ ಆಧಾರ ಮಾಡುತ್ತೇನೆ (ಯೆಶಾ. 41:10).

ಈ ವಾಕ್ಯದಲ್ಲಿ ಅನೇಕ ವಾಗ್ದಾನಗಳಿದ್ದರೂ "ನಾನು ನಿನ್ನನ್ನು ಬಲಪಡಿಸುತ್ತೇನೆ" ಎಂಬ ಭಾಗವನ್ನು ಧ್ಯಾನಿಸೋಣ. ಪ್ರತಿಯೊಬ್ಬ ದೇವಮಗುವಿಗೂ ಶರೀರದಲ್ಲಿ, ಆತ್ಮದಲ್ಲಿ ಬಲವು ಅಗತ್ಯವಾದದ್ದು. ಈ ಪ್ರಪಂಚದಲ್ಲಿ ಹೆಚ್ಚಿನಾಂಶ ಜನರು ತಮ್ಮ ಶರೀರಗಳನ್ನು ಆರೋಗ್ಯವಾಗಿಟ್ಟುಕೊಳ್ಳಲು ವ್ಯಾಯಾಮ, ಪೌಷ್ಟಿಕಾಂಶವುಳ್ಳ ಒಳ್ಳೆಯ ಆಹಾರ ಪಾನೀಯಗಳು ಎಂದು ಅನೇಕ ವಿಧದಲ್ಲಿ ಪ್ರಯಾಸ ಪಡುವರು. ದಿನಪತ್ರಿಕೆಗಳೂ ಈ ಕುರಿತಾಗಿ ಅನೇಕ ಜಾಹೀರಾತುಗಳನ್ನು ನೀಡುವವು.

ಶರೀರವನ್ನು ಬಲಪಡಿಸಲು ಇಷ್ಟೊಂದು ಪ್ರಯಾಸ ಪಡುವ ಮನುಷ್ಯರು ತಮ್ಮ ಆತ್ಮದ ಬಲದ ಕುರಿತಾಗಿ ಅಷ್ಟಾಗಿ ಕಾಳಜಿ ವಹಿಸುವದಿಲ್ಲ. ಈ ಶರೀರವು ಮರ್ತ್ಯವಾದದ್ದು. ಮರಣದೊಂದಿಗೆ ಶರೀರಕ್ಕಾಗಿ ಪಟ್ಟ ಪ್ರಯಾಸವೆಲ್ಲಾ ಮಣ್ಣಲ್ಲಿ ಮಣ್ಣಾಗಿ ಹೋಗುವದು. ಆದ್ದರಿಂದಲೇ ಅಪೊ. ಪೌಲನು ತನ್ನ ಆತ್ಮೀಕ ಕುಮಾರನಾದ ತಿಮೊಥೆಯನಿಗೆ ಹೀಗೆ ಬರೆಯುತ್ತಾನೆ. ದೇಹಸಾಧನೆಯು ಸ್ವಲ್ಪ ಮಟ್ಟಿಗೆ ಪ್ರಯೋಜನವಾಗಿದೆ (1 ತಿಮೊ. 4:8) ಎಂದು. ಮೇಲೆ ಹೇಳಿರುವ ವಾಕ್ಯದಲ್ಲಿ ಕರ್ತನು "ನಾನೇ ನಿನ್ನನ್ನು ಬಲಪಡಿಸುತ್ತೇನೆ" ಎಂದು ವಾಗ್ದಾನ ಮಾಡಿರುವನು. ಹೌದು ಕರ್ತನು ನಿಮ್ಮ ಶರೀರವನ್ನು ಮಾತ್ರವಲ್ಲ, ಆತ್ಮವನ್ನೂ ಬಲ ಪಡಿಸುವಾತನಾಗಿದ್ದಾನೆ. ಆತನ ಉನ್ನತವಾದ ಬಲವನ್ನು ನಿಮ್ಮ ಮೇಲೆ ಸುರಿಸುವಾಗ ನಿಮ್ಮ ಅಂತರ್ಯವು ಮಹಿಮೆಯಿಂದ ತುಂಬುವದು. ಆತ್ಮದಲ್ಲಿ ವೈರಾಗ್ಯಗೊಂಡು ಎದ್ದೇಳುವಂತೆ ನಿಮ್ಮ ಮೇಲೆ ಪವಿತ್ರಾತ್ಮನು ಚಲಿಸುವನು. ಅನೇಕರು ದೇಹಾದಾರ್ಢ್ಯವುಳ್ಳವರಾಗಿ ಕಾಣುವರು. ಆದರೆ ಜೀವಿತದಲ್ಲಿ ಸಮಸ್ಯೆಗಳು ಬಿರುಗಾಳಿಯಂತೆ ಏಳುವಾಗ ಅವರಲ್ಲಿ ಆತ್ಮೀಕ ಬಲವೇ ಇರುವದಿಲ್ಲ. ಬಹಳ ಬೇಗ ಸೊರಗಿ ಹೋಗುತ್ತಾರೆ. ಆತ್ಮದಲ್ಲಿ ಕುಂದಿಹೋಗುತ್ತಾರೆ.

ದೇವಮಕ್ಕಳೇ, ನಿಮ್ಮನ್ನು ಕರ್ತನ ಕೈಗಳಲ್ಲಿ ಒಪ್ಪಿಸಿಕೊಡಿರಿ. ಆತನು ನಿಮ್ಮ ಶರೀರಾತ್ಮಗಳನ್ನು ಬಲಪಡಿಸುವನು. ನನ್ನನ್ನು ಬಲಪಡಿಸುವ ಕ್ರಿಸ್ತನಲ್ಲಿದ್ದುಕೊಂಡು ಎಲ್ಲವನ್ನೂ ಮಾಡಲು ನನಗೆ ಬಲವುಂಟು ಎಂದು ಹೇಳಿ ಕರ್ತನಲ್ಲಿ ದೃಢಗೊಳ್ಳಿರಿ. ಸುವಾರ್ತೆಯನ್ನು ದೇವಬಲದಿಂದ ಸಾರಿ, ದೊಡ್ಡ ಉಜ್ಜೀವನವನ್ನು ಕುಟುಂಬದಲ್ಲಿ, ಸಭೆಯಲ್ಲಿ, ಸಮುದಾಯದಲ್ಲಿ ತನ್ನಿರಿ.

*ನೆನಪಿಗೆ : ನಂಬಿಕೆಯ ಮೂಲಕ ಅವರು ರಾಜ್ಯಗಳನ್ನು ಸ್ವಾಧೀನ ಮಾಡಿಕೊಂಡರು; ನೀತಿಯನ್ನು ನಡೆಸಿದರು, ವಾಗ್ದಾನಗಳನ್ನು ಪಡೆದುಕೊಂಡರು (ಇಬ್ರಿ. 11:33).*

ಜೂನ್ 12

## ಕುಗ್ಗಿದ ಬಲ!

ಬೆಳಿಗ್ಗೆ : ಎಜ್ರ 3,4,5
ಸಂಜೆ : ಯೋಹಾ 20

ಇಕ್ಕಟ್ಟಿನ ದಿನದಲ್ಲಿ ನೀನು ಬಳಲಿಹೋದರೆ ನಿನ್ನ ಬಲವೂ ಇಕ್ಕಟ್ಟೇ (ಜ್ಞಾನೋ. 24:10).

ಕರ್ತನು ನೀವು ಯಾವಾಗಲೂ ಬಲವುಳ್ಳವರಾಗಿಯೇ ಇರಬೇಕೆಂದು ಬಯಸುತ್ತಾನೆ. ಆದರೆ ಸೈತಾನನಾದರೋ ನೀವು ಬಲಹೀನರಾಗಿ ಕುಗ್ಗಿಹೋಗಬೇಕೆಂದು ಯೋಚಿಸುತ್ತಾನೆ. ಇದಕ್ಕಾಗಿ ಅವನು ದೇವಜನರಲ್ಲಿ ಕೀಳರಿಮೆ, ಮನದಲ್ಲಿ ಕುಗ್ಗುವಿಕೆಯನ್ನು ಉಂಟುಮಾಡುತ್ತಾನೆ. ಇದರಿಂದ ಅವರು ತಮ್ಮ ಬಲವನ್ನೂ ಕ್ರಿಸ್ತನ ಬಲವನ್ನೂ ತಪ್ಪಾಗಿ ತೂಕ ಹಾಕಿನೋಡುತ್ತಾರೆ. ಕಷ್ಟಗಳು, ಸಮಸ್ಯೆಗಳು, ಶೋಧನೆಗಳು ಬರುವಾಗ ಸೋತುಹೋಗುತ್ತಾರೆ.

ಅರಣ್ಯದಲ್ಲಿ ಇಸ್ರಾಯೇಲ್ಯರು ಪ್ರಯಾಣ ಮಾಡುತ್ತಿದ್ದಾಗ ಭಕ್ತನಾದ ಮೋಶೆ ಕಾನಾನ್ ದೇಶವನ್ನು ಸುತ್ತಿ ನೋಡಿ ಬರುವಂತೆ ಗೋತ್ರಕ್ಕೆ ಒಬ್ಬರಂತೆ ಹನ್ನೆರಡು ಮಂದಿಯನ್ನು ಕಳುಹಿಸಿದನು. ಅದರಲ್ಲಿ ಹತ್ತು ಜನರು ಕೀಳರಿಮೆಯುಳ್ಳವರು. ಅವರು ತಂದ ಸಮಾಚಾರ ಒಳ್ಳೆಯದಾಗಿರಲಿಲ್ಲ. ಭಯ ಹುಟ್ಟಿಸುವಂಥ ಸಮಾಚಾರ. ಆ ದೇಶದ ಜನರು ಬಹಳ ಬಲಶಾಲಿಗಳು. ದೊಡ್ಡ ಕೋಟೆ ಕೊತ್ತಲುಗಳುಳ್ಳ ದೇಶ. ಅಲ್ಲಿರುವ ಜನರು ಉನ್ನತವಾದ ಪುರುಷರು. ಅವರನ್ನು ಜಯಿಸಲಾಗದು ಎಂದು ಹೇಳಿದರು (ಅರಣ್ಯ 13:27–29). ಆದರೆ ಅವರೊಂದಿಗೆ ಹೋಗಿದ್ದ ಯೆಹೋಶುವ ಮತ್ತು ಕಾಲೇಬರು ದೇವಬಲದಲ್ಲಿ ನಂಬಿಕೆ ಇಟ್ಟವರು. ಅವರೇನು ಹೇಳಿದರು? “ನಾವು ನಿರ್ಭಯವಾಗಿ ಆ ಬೆಟ್ಟದ ಸೀಮೆಗೆ ಹತ್ತಿಹೋಗಿ ಅದನ್ನು ಸ್ವಾಧೀನ ಮಾಡಿಕೊಳ್ಳೋಣ. ಅದನ್ನು ಜಯಿಸಬಲ್ಲೆವು” ಎಂದು ಹೇಳಿದರು (ಅರಣ್ಯ. 13:30,31). ಕೀಳರಿಮೆ ಯಾವಾಗ್ಯೂ ಅಪನಂಬಿಕೆಯನ್ನು ಉಂಟುಮಾಡುವದು. ಭಯವನ್ನು ಉಂಟುಮಾಡುವದು. ಆದರೆ ನೀವು ಅದಕ್ಕೆ ಸ್ಥಳಕೊಡದೆ ಕರ್ತನನ್ನೇ ದೃಷ್ಟಿಸುತ್ತಾ ಆತನ ಬಲದಲ್ಲಿ ತುಂಬಿರುವಾಗ, ಜಯವನ್ನು ಗಳಿಸುವಿರಿ. ಗೊಲಿಯಾತನನ್ನು ಕಂಡಾಗ ಸೌಲನು ಅವನ ಸೇನಾಧಿಪತಿಗಳು, ಸೈನಿಕರು ಕೀಳರಿಮೆಯಿಂದ ಭಯಭೀತರಾದರು. ಆದರೆ ದಾವೀದನೋ ದೇವರಲ್ಲಿ ಬಲ ಹೊಂದಿದವನಾಗಿದ್ದರಿಂದ ಗೊಲಿಯಾತನನ್ನು ಬಹಳ ಸುಲಭವಾಗಿ ಜಯಿಸಿದನು.

ದೇವಮಕ್ಕಳೇ ಸಮಸ್ಯೆಗಳು, ಹೋರಾಟಗಳು ಬರುವಾಗ ನಿಮ್ಮ ಬಲಹೀನತೆಯನ್ನು ನೋಡದೆ ಕರ್ತನ ಬಲದ ಮೇಲೆ ನಂಬಿಕೆ ಇಟ್ಟು ಮುಂದೆ ಸಾಗಿರಿ. ನಿಶ್ಚಯವಾಗಿ ಕರ್ತನು ನಿಮಗೆ ಜಯ ನೀಡುವನು.

*ನೆನಪಿಗೆ : ಇದರಿಂದ ನಾನೂ ನಿನ್ನ ಪ್ರಜೆಗಳಾದ ಇವರೂ ಭೂಮಿಯಲ್ಲಿರುವ ಬೇರೆ ಎಲ್ಲಾ ಜನಗಳಿಗಿಂತಲೂ ವಿಶೇಷವಾಗಿದ್ದೇವೆಂಬುದು ತೋರುವದು ಅಂದನು (ವಿಮೋ. 33:16).*



ಜೂನ್ 13

## ಘೇಂಡಾಮೃಗದ ಬಲ!

ಬೆಳಿಗ್ಗೆ : ಎಜ್ರ 6,7,8
ಸಂಜೆ : ಯೋಹಾ 21

ಅವರನ್ನು ಐಗುಪ್ತ ದೇಶದಿಂದ ಕರಕೊಂಡು ಬಂದವನು ದೇವರೇ ಅವರು ಕಾಡುಕೋಣದಷ್ಟು ಬಲವುಳ್ಳವರು (ಅರಣ್ಯ. 23:22).

ದೇವರು ಸೃಷ್ಟಿಸಿದ ಎಲ್ಲಾ ಮೃಗಗಳಲ್ಲಿ ಕಾಡುಕೋಣ ಅಥವಾ ಘೇಂಡಾಮೃಗ ಬಹಳ ಬಲವುಳ್ಳದ್ದು. ಅದರ ಬಲವಾದ ಕೊಂಬುಗಳ ಮುಂದೆ ಆನೆಯೋ, ಸಿಂಹವೋ ನಿಲ್ಲಲು ಸಾಧ್ಯವಿಲ್ಲ. ಅದು ಇತರ ಮೃಗಗಳೊಂದಿಗೆ ಪಳಗುವದಿಲ್ಲ. ಪ್ರವಾದಿಯಾದ ಬಿಳಾಮನು ಇಸ್ರಾಯೇಲ್ಯರನ್ನು ಘೇಂಡಾಮೃಗದಂತೆ ಬಲವುಳ್ಳವರಾದವರನ್ನಾಗಿ ಕಂಡನು.

ಇಸ್ರಾಯೇಲ್ಯರು ಐಗುಪ್ತ ದೇಶದಿಂದ ಹೊರಟಾಗ ಅರೆಹೊಟ್ಟೆಗೂ ಊಟವಿಲ್ಲದೆ ದಾಸರಾಗಿ ಇದ್ದರು. ಐಗುಪ್ತದ ಮೇಲ್ವಿಚಾರಕರಿಂದ ಛಡಿ ಏಟುಗಳನ್ನು ತಿಂದು ಬಲಹೀನರಾಗಿ ಹೋಗಿದ್ದರು. ಹಾಗಾದರೆ ಅವರಿಗೆ ಮುಂದೆ ಹೇಗೆ ಘೇಂಡಾಮೃಗದ ಬಲಬಂದಿತು? ದೇವರು ಅವರನ್ನು ಅರಣ್ಯ ಮಾರ್ಗವಾಗಿ ನಡೆಸಿಕೊಂಡು ಬಂದಾಗ, ಅವರಿಗೆ ದೇವದೂತರ ಆಹಾರವಾದ ಮನ್ನವನ್ನು ನೀಡಿದನು. ಆ ವಿಶೇಷವಾದ ಆಹಾರವನ್ನು ಬಂಡೆಯೊಳಗಿಂದ ಹರಿದುಬಂದ ನೀರನ್ನು ಸೇವಿಸಿ ಬಲಶಾಲಿಗಳಾಗಿ ಮೂವತ್ತೊಂದು ರಾಜರನ್ನೂ ಸೋಲಿಸಿದರು. ಅಂದು ದೇವರು ಕೊಟ್ಟ ಮನ್ನವೆಂಬ ಆಹಾರ, ಹೊಸ ಒಡಂಬಡಿಕೆಯ ದೇವರ ವಾಕ್ಯಕ್ಕೆ ಸಮಾನವಾಗಿದೆ. ಈ ದೇವರ ವಾಕ್ಯ ಜೀವವುಳ್ಳದ್ದೂ, ಬಲವುಳ್ಳದ್ದೂ ಆಗಿದೆ. ಮಾತ್ರವಲ್ಲ ಆತ್ಮವನ್ನು ಬಲಪಡಿಸುವಂಥದ್ದು ಆಗಿರುವದು. ಅದು ಇಬ್ಬಾಯಿಕತ್ತಿಗಿಂತಲೂ ಹರಿತವಾದದ್ದು. ಬೆಟ್ಟಗಳನ್ನು ಪುಡಿಮಾಡುವ ಚಮ್ಮಟಿಯಾಗಿದೆ. ನೀವು ವಾಗ್ದಾನ ವಚನಗಳನ್ನು ನಂಬಿಕೆಯಿಂದ ಹೇಳುವಾಗ, ಯಾವ ಮಂತ್ರ ತಂತ್ರಗಳೂ ನಿಮಗೆ ವಿರೋಧವಾಗಿ ಕೇಡುಮಾಡಲಾಗದು. ದುಷ್ಟನು ನಿಮ್ಮನ್ನು ಎದುರಿಸಿ ನಿಲ್ಲಲಾರನು. ಈ ಲೋಕದಲ್ಲಿರುವವನಿಗಿಂತ ನಮ್ಮಲ್ಲಿರುವಾತನು ಹೆಚ್ಚಿನವನು (1 ಯೋಹಾ.4:4). ಯೇಸುಕ್ರಿಸ್ತನು ನಾಲ್ವತ್ತು ದಿನಗಳು ಉಪವಾಸ ಮಾಡಿ ಹಸಿವಿನಿಂದ ಇದ್ದಾಗ, ಸೈತಾನನು ಶೋಧಿಸಲು ಬಂದನು. ಉಪವಾಸದಿಂದ ಕ್ರಿಸ್ತನು ಎಷ್ಟೋ ಬಳಲಿದ್ದನು. ಆದರೂ ಆತನು ಆತ್ಮದಲ್ಲಿ ಘೇಂಡಾಮೃಗದಷ್ಟು ಬಲಶಾಲಿಯಾಗಿದ್ದದ್ದರಿಂದ ದೇವರ ವಾಕ್ಯಗಳಿಂದಲೇ ಸೈತಾನನನ್ನು ಸೋಲಿಸಿದನು.

ದೇವಮಕ್ಕಳೇ, ಶರೀರಕ್ಕೆ ಆಹಾರ ಬಲ ನೀಡುವಂತೆ ದೇವರ ವಾಕ್ಯಗಳು ಆತ್ಮಕ್ಕೆ ಬಲ ನೀಡುವದು. ಆದ್ದರಿಂದ ಸತ್ಯವೇದವನ್ನು ದಾಹದಿಂದ ಓದಿರಿ. ನಿಮ್ಮ ಬಲವಾಗಿ ಅದನ್ನು ಅಂಗೀಕರಿಸಿಕೊಳ್ಳಿರಿ. ಸಮಯ ಒದಗಿದಾಗೆಲ್ಲಾ ವಾಗ್ದಾನ ವಚನಗಳನ್ನು ವಿಶ್ವಾಸ ಅರಿಕೆ ಮಾಡಿರಿ. ಆಗ ನೀವು ಬಲದ ಮೇಲೆ ಬಲಹೊಂದುವಿರಿ.

*ನೆನಪಿಗೆ : ನಾನು ಮೊರೆಯಿಟ್ಟಾಗ ಸದುತ್ತರವನ್ನು ದಯಪಾಲಿಸಿದಿ. ನನ್ನ ಆತ್ಮಕ್ಕೆ ಬಲಕೊಟ್ಟು ನನ್ನನ್ನು ಧೈರ್ಯಪಡಿಸಿದ್ದೀ (ಕೀರ್ತ. 138:3).*

ಜೂನ್ 14

# ಕರ್ತನ ನಾಮ!

ಬೆಳಿಗ್ಗೆ : ಎಜ್ರ 9,10
ಸಂಜೆ : ಅ.ಕೃ. 1

ಯೆಹೋವನು ತನ್ನ ಜನರಿಗೆ ಬಲವೂ, ತಾನು ಅಭಿಷೇಕಿಸಿದವನಿಗೆ ಆಶ್ರಯ ದುರ್ಗವೂ ಆಗಿದ್ದಾನೆ (ಕೀರ್ತ. 28:8).

ಕರ್ತನನ್ನು ತನ್ನ ಬಲವಾಗಿಸಿಕೊಂಡಿದ್ದ ದಾವೀದನು ಎಲ್ಲಾ ಯುದ್ಧಗಳಲ್ಲೂ ಜಯಭೇರಿ ಹೊಡೆದನು. ಕಾರಣ ಅವನು ತನ್ನ ಬಲವನ್ನು ದೇವರ ಬಲದೊಂದಿಗೆ ಐಕ್ಯವಾಗಿಸಿಕೊಂಡಿದ್ದನು. ಕರ್ತನೇ ನನ್ನ ಬಲವು, ನಾನು ಯಾರಿಗೆ ಹೆದರೇನು? ಎಂದು ಧೈರ್ಯವಾಗಿ ಹೇಳಿದನು. ದೇವರ ಬಲವೆನ್ನುವದು ಆತನ ನಾಮದಿಂದ ಬರುವ ಬಲವನ್ನು ಸೂಚಿಸುವದು.

ಕರ್ತನ ನಾಮವಾದ ಸೇನಾಧೀಶ್ವರನಾದ ಯೆಹೋವನು ಎಂದು ಹೇಳುವಾಗಲೇ ಶತ್ರುಗಳು ನಡುಗಿ ಓಡಿಹೋಗುವರು. "ಸೇನಾಧೀಶ್ವರನಾದ ಯೆಹೋವನು ನಮ್ಮ ಸಂಗಡ ಇದ್ದಾನೆ; ಯಾಕೋಬ ವಂಶದ ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ" (ಕೀರ್ತ. 46:11) ಎಂದು ದಾವೀದನು ಘೋಷಿಸಿದಾಗ, ಸೈನಿಕರು ಬಲಗೊಂಡು ಧೈರ್ಯದಿಂದ ಯುದ್ಧದಲ್ಲಿ ಹೋರಾಡಿ ಜಯಗಳಿಸಿದರು. ಡಾ.ಹೆನ್ರಿ ಎಂಬುವರು ಒಮ್ಮೆ ಒಂದು ಭಯಂಕರವಾದ ವ್ಯಾಧಿಗೆ ಒಳಗಾದರು. ದಿನ ಕಳೆದಂತೆ ವ್ಯಾಧಿ ಹೆಚ್ಚಾಗಿ ಹಾಸಿಗೆ ಹಿಡಿದರು. ಇನ್ನೇನು ತನ್ನ ಮರಣದ ವೇಳೆ ಸಮೀಪಿಸಿತು ಎಂದುಕೊಳ್ಳುವಾಗ ಒಬ್ಬರು "ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ; ನಿನ್ನನ್ನು ರಕ್ಷಿಸುವನು, ನಿನ್ನಲ್ಲಿ ಉಲ್ಲಾಸಿಸೇ ಉಲ್ಲಾಸಿಸುವನು" (ಚೆಫನ್ಯ 3:17) ಎಂಬ ವಾಕ್ಯವನ್ನು ಓದಿ ತೋರಿಸಿದರು. ಈ ವಾಕ್ಯವನ್ನು ಹೆನ್ರಿಯವರು ಪುನಃ ಪುನಃ ವಿಶ್ವಾಸದಿಂದ ಅರಿಕೆ ಮಾಡಿದಾಗ ದೇವಮಹಿಮೆ ಅವರ ಮೇಲೆ ಇಳಿಯಿತು. ತನ್ನೊಳಗೆ ಯೇಸುಕ್ರಿಸ್ತನೆಂಬ ಪುನರುತ್ಥಾನ ಹೊಂದಿದ ರಕ್ಷಕನು ವಾಸಮಾಡುತ್ತಿರುವನೆಂಬುದನ್ನು ಅರಿತರು. ಪೂರ್ಣ ಹೃದಯದಿಂದ ಕರ್ತನನ್ನು ಹುಡುಕಿದರು. ಪೂರ್ಣವಾದ ಸ್ವಸ್ಥತೆಯನ್ನು ಹೊಂದಿದರು. ದೇವಾಲಯದ ಬಾಗಿಲಲ್ಲಿ ಕುಳಿತಿದ್ದ ಹುಟ್ಟು ಕುಂಟನಾಗಿದ್ದ ಭಿಕ್ಷೆಗಾರನನ್ನು ಬಲಪಡಿಸಿದ್ದು ಯಾವದು! ಕರ್ತನ ನಾಮವಲ್ಲವೇ? ಯೇಸುಕ್ರಿಸ್ತನ ನಾಮದಲ್ಲಿ ನೀನು ಎದ್ದು ನಡೆ ಎಂದು ಅಪೊ. ಪೇತ್ರನು ಹೇಳಿದಾಗ, ಅವನ ಕಾಲುಗಳು ಹರಡುಗಳು ಬಲಗೊಂಡವು (ಅ.ಕೃ. 3:6,7).

ದೇವಮಕ್ಕಳೇ, ನೀವೂ ದಾವೀದನಂತೆ ಯೆಹೋವನು ನನ್ನ ಪ್ರಾಣದ ಆಧಾರವು, ನಾನು ಯಾರಿಗೆ ಹೆದರೇನು? (ಕೀರ್ತ. 27:1) ಎಂದು ಹೇಳಿ ಕರ್ತನ ಹೆಸರಿನಲ್ಲಿ ಜಯವನ್ನು ಪಡೆದುಕೊಳ್ಳಿರಿ. "ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು" (ಯೋಹಾ. 14:14) ಎಂದು ಕರ್ತನು ವಾಗ್ದಾನ ಮಾಡಿರುವನಲ್ಲವೇ? ಆತನ ನಾಮದಲ್ಲಿ ಮಹಿಮೆಯುಂಟು. "ಯೆಹೋವನ ನಾಮವು ಬಲವಾದ ಬುರುಜು. ಶಿಷ್ಟನು ಅದರೊಳಕ್ಕೆ ಓಡಿಹೋಗಿ ಭದ್ರವಾಗಿರುವನು" (ಜ್ಞಾನೋ. 18:10).

*ನೆನಪಿಗೆ : ಆತನ ಹೆಸರಿನಲ್ಲಿ ಇಟ್ಟ ನಂಬಿಕೆಯೇ ಕಾರಣ; ಆ ಹೆಸರೇ ಇವನನ್ನು ಬಲಪಡಿಸಿತು. ....ನಿಮ್ಮೆಲ್ಲರ ಮುಂದೆ ಪೂರ್ಣಕ್ಷೇಮವನ್ನು ಕೊಟ್ಟಿತು. (ಅ.ಕೃ. 3:16).*



ಜೂನ್ 15

# ಹದ್ದಿನಂತೆ ಬಲ!

ಬೆಳಿಗ್ಗೆ : ನೆಹೆಮೀಯ 1,2,3
ಸಂಜೆ : ಅ.ಕೃ. 2:1–21

"ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು ಏರುವರು. ಓಡಿ ದಣಿಯರು, ನಡೆದು ಬಳಲರು" (ಯೆಶಾ.40:31).

ಇಂದಿನ ಧ್ಯಾನದಲ್ಲಿ ಹದ್ದಿನಂಥ ಬಲವನ್ನು ಕುರಿತು ಧ್ಯಾನಿಸಲಿರುವೆವು. ಹದ್ದು ಸತ್ಯವೇದದಲ್ಲಿ ಒಂದು ಉನ್ನತ ಸ್ಥಾನವನ್ನು ಪಡೆದುಕೊಂಡಿದೆ. ಇದನ್ನು ದೇವರಿಗೆ ಹೋಲಿಸಿ ಹೇಳಲಾಗಿದೆ. ಇತರ ಪಕ್ಷಿಗಳಿಗಿಂತ ಹದ್ದು ವ್ಯತ್ಯಾಸವಾದ ಪಕ್ಷಿ. ಇದು ಯಾವಾಗಲೂ ಎತ್ತರದಲ್ಲಿ ಹಾರಾಡುವ ಪಕ್ಷಿ.

ಹದ್ದಿಗೂ ಇತರ ಪಕ್ಷಿಗಳಿಗೂ ಇರುವ ಒಂದು ದೊಡ್ಡ ವ್ಯತ್ಯಾಸವೇನು ಗೊತ್ತೇ? ಹದ್ದು, ವಯಸ್ಸಾಗಿ ಅದರ ಶರೀರದ ಬಲ ಕ್ಷೀಣಿಸಿದಾಗ, ಒಂಟಿಯಾಗಿ ಒಂದು ಬಂಡೆಯ ಸೀಳಿನಲ್ಲಿ ಕುಳಿತು ತನ್ನ ಕೊಕ್ಕಿನಿಂದ ತನ್ನ ಮೈಮೇಲಿನ ಗರಿಗಳನ್ನೆಲ್ಲಾ ಕಿತ್ತುಹಾಕುವದು. ಏನೂ ಆಹಾರ ತೆಗೆದುಕೊಳ್ಳದೆ ಕಾದು ಕುಳಿತುಕೊಳ್ಳುವುದು. ಆಗ ಅದರ ಶರೀರದಲ್ಲಿರವ ಕೊಬ್ಬೆಲ್ಲಾ ಕರಗಿ ಹೊಸ ಗರಿಗಳು ಮೂಡುವವು. ಕಾಲಿನ ಉಗುರುಗಳು ಬೆಳೆಯುವವು. ನಂತರ ಅದರ ಯೌವನ ಅದಕ್ಕೆ ದೊರೆಯುವದು. ಪುನಃ ಅದು ಆಕಾಶದಲ್ಲಿ ಮೇಲೆ ಮೇಲೆ ಹಾರುವದು. ಅದೇ ರೀತಿ ಒಬ್ಬ ವಿಶ್ವಾಸಿಯು ಆತ್ಮದಲ್ಲಿ ಸೋತು ಬಲ ಕಳೆದುಕೊಂಡಾಗ ಉಪವಾಸದಿಂದ ದೇವ ಸಮ್ಮುಖದಲ್ಲಿ ಕಾದು ಕುಳಿತುಕೊಳ್ಳುವಾಗ ಅವನ ಆತ್ಮವು ಪುನಃ ಚೈತನ್ಯಗೊಳ್ಳುವದು. ದೇವಸಮ್ಮುಖದಲ್ಲಿ ಕಾದುಕುಳಿತುಕೊಳ್ಳುವದೆಂದರೆ ಉಪವಾಸದಿಂದ ತನ್ನನ್ನು ತಗ್ಗಿಸಿಕೊಂಡು ಪ್ರಾರ್ಥನೆ, ಬಿನ್ನಹಗಳನ್ನು ದೇವರಿಗೆ ಸಲ್ಲಿಸುತ್ತಾ ಕರ್ತನ ಉತ್ತರಕ್ಕಾಗಿ ಆತನ ಸಮಯಕ್ಕಾಗಿ ಕಾದಿರುವದು. ಹಾಗೆ ಕಾಯುವಾಗ ಒಳಗಿನ ಮನುಷ್ಯನು ಅಂದರೆ ಆಂತರ್ಯವು ಬಲಗೊಳ್ಳುವದು. ಹೊಸ ಬಲವನ್ನು ಪಡೆದು ತನ್ನ ರೆಕ್ಕೆಗಳನ್ನು ಬಡಿಯುತ್ತಾ ಏಳುವ ಹದ್ದು ಬೆಟ್ಟಗಳನ್ನು ಕುರಿತೋ, ಹಳ್ಳಗಳನ್ನು ಕುರಿತೋ ಚಿಂತಿಸುವದಿಲ್ಲ. ಅದು ಉನ್ನತಾಕಾಶದಲ್ಲಿ, ಎತ್ತರವಾದ ಸ್ಥಳಗಳಲ್ಲಿ ಹಾರುತ್ತಾ ಸಾಗುವದು. ಅದರಂತೆ ಆತ್ಮದಲ್ಲಿ ಬಲಹೊಂದಿದ ವಿಶ್ವಾಸಿಯು ಭೂಸಂಬಂಧವಾದ ಯಾವದೇ ಕಾರ್ಯಗಳನ್ನು ಚಿಂತಿಸದೆ ಆತ್ಮೀಕ ಜೀವಿತದಲ್ಲಿ ಮೇಲೆ ಮೇಲೆ ಸಾಗುವನು.

ದೇವಮಕ್ಕಳೇ, ನಿಮ್ಮ ವೈಯಕ್ತಿಕ ಜೀವಿತದಲ್ಲಿ ಪ್ರಾರ್ಥನೆ, ಬಿನ್ನಹ, ಸ್ತೋತ್ರಗಳಂಥ ಹದ್ದುಗಳು ರೆಕ್ಕೆ ಬಡಿಯುತ್ತಾ ಏಳಲು ನಿಮಗೆ ಸಹಾಯವಾಗಿರುವ ಪ್ರಾರ್ಥನಾ ಜೀವಿತಕ್ಕೆ ಸಮನಾದದ್ದು ಯಾವದೂ ಇಲ್ಲ. ಜಪವೇ ಜಯ. ಪ್ರಾರ್ಥಿಸುವ ವೀರರು ದೇವಬಲವನ್ನು ಅಪರಿಮಿತವಾಗಿ ಪಡೆಯುವರು. ದೇವಬಲದಿಂದ ಎದ್ದು ಪ್ರಕಾಶಿಸುವರು. ಇಂದೇ ನಿಮ್ಮನ್ನು ಆಸಕ್ತಿಯಿಂದ ಕೂಡಿದ ಪ್ರಾರ್ಥನಾ ಜೀವಿತಕ್ಕೆ ಒಪ್ಪಿಸಿಕೊಡಿರಿ.

*ನೆನಪಿಗೆ : ಯೆಹೋವನ ಭುಜವೇ ಎಚ್ಚರಗೊಳ್ಳು, ಬಲವನ್ನು ತಂದುಕೋ! ಪೂರ್ವಕಾಲದಲ್ಲಿ ಪುರಾತನದ ತಲಾಂತರಗಳಲ್ಲಿ ಎಚ್ಚರಪಟ್ಟಂತೆ ಈಗಲೂ ಎಚ್ಚೆತ್ತುಕೋ (ಯೆಶಾ. 51:9).*

ಜೂನ್ 16

## ಸ್ತುತಿಯಿಂದ ಬಲ!

ಬೆಳಿಗ್ಗೆ : ನೆಹೆ. 4,5,6
ಸಂಜೆ : ಅ.ಕೃ. 2:22–47

ಮುಯ್ಯಿ ತೀರಿಸುವ ವೈರಿಗಳ ಬಾಯನ್ನು ಕಟ್ಟುವದಕ್ಕೋಸ್ಕರ ನೀನು ಬಾಲಕರ, ಮತ್ತು ಮೊಲೆ ಕೂಸುಗಳ ಬಾಯಿಂದ ಬಲವಾದ ಸಾಕ್ಷಿ ಉಂಟಾಗುವಂತೆ ಮಾಡಿದ್ದೀ (ಕೀರ್ತ. 8:2).

ಕರ್ತನನ್ನು ಸ್ತುತಿಸುವ ಸ್ತುತಿ, ಯಾವಾಗಲೂ ನಿಮ್ಮಲ್ಲಿ ದೈವೀಕ ಬಲವನ್ನು ತರುವದು. ನಿಮ್ಮನ್ನು ನೀವು ಚಿಕ್ಕ ಮಕ್ಕಳಂತೆ ತಗ್ಗಿಸಿ ಕರ್ತನನ್ನು ಸ್ತುತಿಸಲಾರಂಭಿಸುವಾಗ, ಶತ್ರುಗಳನ್ನು ಕರ್ತನು ನಿಮ್ಮ ಕಾಲಕೆಳಗೆ ಹಾಕುವನು.

ಅಂದು ಯೇಸುಕ್ರಿಸ್ತನು ಈ ಭೂಮಿಯಲ್ಲಿದ್ದಾಗ, ಚಿಕ್ಕ ಮಕ್ಕಳು ಬಾಲಕರು ಆತನನ್ನು ಸ್ತುತಿಸಿದರು. “ದಾವೀದ ಕುಮಾರನಿಗೆ ಹೊಸನ್ನಾ” ಎಂದು ಆರ್ಭಟಿಸಿದರು. ಅದನ್ನು ಕಂಡ ಫರಿಸಾಯರು ಸದ್ದುಕಾಯರುಗಳಿಗೆ ಕೋಪ ಬಂತು. ಆಗ ಯೇಸುಕ್ರಿಸ್ತನು ಅವರನ್ನು ನೋಡಿ “ಸಣ್ಣ ಮಕ್ಕಳ ಬಾಯಿಂದಲೂ, ಮೊಲೆಕೂಸುಗಳ ಬಾಯಿಂದಲೂ ಸ್ತೋತ್ರವನ್ನು ಸಿದ್ಧಿಗೆ ತಂದಿ ಎಂಬುದನ್ನು ನೀವು ಎಂದಾದರೂ ಓದಲಿಲ್ಲವೋ” ಅಂದನು (ಮತ್ತಾ. 21:16). ನೀವು ಕರ್ತನನ್ನು ಸ್ತುತಿಸಿ ಆತನಲ್ಲಿ ಬಲಹೊಂದಲು ಬಯಸುವಾಗ, ಹಲವು ರೀತಿಯ ಫರಿಸಾಯ ಆತ್ಮಗಳು ಗುಣಗುಟ್ಟಬಹುದು. ನಿಮ್ಮ ಮನೆಯವರೇ ನಿಮಗೆ ವಿರೋಧ ತೋರಿಸಬಹುದು. ಆದರೂ ನೀವು ಅದನ್ನು ಗಣನೆಗೆ ತೆಗೆದುಕೊಳ್ಳದೆ ಕರ್ತನನ್ನು ಸ್ತುತಿಸಿ ಉನ್ನತ ಬಲದಿಂದ ತುಂಬಲ್ಪಡಿರಿ. ಸ್ತುತಿಸಿ, ಬಲಗೊಂಡು ಯುದ್ಧ ಮಾಡಿ ಜಯ ಪಡೆದ ಅನೇಕ ಭಕ್ತರ ಕುರಿತು ಸತ್ಯವೇದ ನಮಗೆ ಸಾಕ್ಷಿ ನೀಡುವದು. ಸ್ತುತಿಯಲ್ಲಿ ಮಹಿಮೆ ಉಂಟು, ಬಲವುಂಟು. ಅಂದು ಸೆರಾಫಿಯರು ಸೇನಾಧೀಶ್ವರನಾದ ಯೆಹೋವನನ್ನು ಪರಿಶುದ್ಧನೂ, ಪರಿಶುದ್ಧನೂ, ಪರಿಶುದ್ಧನೂ ಎಂದು ಸ್ತುತಿಸಿದಾಗ ದೇವಾಲಯದ ಕಂಬಗಳು ಕಂಪನಗೊಂಡವು. ಸ್ತುತಿಯ ಶಬ್ದಕ್ಕೆ ಜೀವವಿಲ್ಲದ ಕಂಬಗಳೇ ಕಂಪಿಸುವದಾದರೆ ಜೀವವುಳ್ಳ ದೇವರ ಮಕ್ಕಳು ಚಲಿಸದೆ ಸಂತೋಷಿಸದೆ ಇರುವದು ಹೇಗೆ? ಎಲಿಸಬೇತಳು ಮರಿಯಳ ವಂದನೆಯನ್ನು ಕೇಳುತ್ತಲೇ ಆಕೆಯ ಗರ್ಭದಲ್ಲಿದ್ದ ಕೂಸು ಹಾರಾಡಿತು (ಲೂಕ. 1:41) ಎಂದು ಸತ್ಯವೇದದಲ್ಲಿ ಓದುತ್ತೇವೆ.

ದೇವಮಕ್ಕಳೇ, ಎಲ್ಲಿ ದೇವಸ್ತುತಿ ಇರುವದೋ ಅಲ್ಲಿ ದೇವಮಹಿಮೆ ಇಳಿದುಬರುವದು. ದೇವರು ಮನುಷ್ಯನನ್ನು ಸೃಷ್ಟಿಸಿದ ಉದ್ದೇಶಗಳಲ್ಲಿ ಸ್ತುತಿಯೂ ಒಂದಾಗಿದೆ. ಆತನು ಸ್ತುತಿ ಸ್ತೋತ್ರ ಯಜ್ಞವನ್ನು ಮೆಚ್ಚುವಂತೆ ಬೇರೆ ಯಾವ ಯಜ್ಞಗಳಿಂದಲೂ ಸಂತೃಪ್ತನಾಗಲಾರನು. ಮಾತ್ರವಲ್ಲ. ದೇವಸ್ತುತಿಯು ಸೈತಾನನ ತಡೆಗಳನ್ನು ಮುರಿದುಹಾಕಿ ಜಯವನ್ನು ನೀಡುವಂಥದ್ದಾಗಿದೆ. ನಿಮ್ಮ ವೈರಿಗಳನ್ನು ಕರ್ತನು ನಿಮ್ಮ ಕಾಲಬಳಿ ಕೆಡಹುವನು.

*ನೆನಪಿಗೆ : ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದಿ. ಹರ್ಷವಸ್ತ್ರವನ್ನು ನನಗೆ ಧಾರಣೆ ಮಾಡಿಸಿದಿ (ಕೀರ್ತ. 30:11).*



ಜೂನ್ 17

## ನಂಬಿಕೆಯಿಂದ ಬಲ!

ಬೆಳಿಗ್ಗೆ : ನೆಹೆ. 7,8,9
ಸಂಜೆ : ಅ.ಕೃ. 3

ನಿಮ್ಮ ನಂಬಿಕೆಯು ಮಾನುಷ ಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರ ಮಾಡಿಕೊಳ್ಳಬೇಕು (1 ಕೊರಿಂಥ 2:4)

ನಮ್ಮ ಕರ್ತನಾದ ಯೇಸುಕ್ರಿಸ್ತನು ತ್ರಾಣವನ್ನು ಬಲವನ್ನೂ ಕುರಿತು ಎರಡು ಸಾಮ್ಯಗಳನ್ನು ಹೇಳಿರುವನು. ಒಬ್ಬನು ಒಂದು ಕಟ್ಟಡವನ್ನು ನಿರ್ಮಿಸಲು ಬಯಸಿದರೆ, ಮೊದಲು ಅದನ್ನು ಕಟ್ಟಿ ತೀರಿಸಲು ತನಗೆ ಸಾಧ್ಯವಾ, ಅದಕ್ಕೆ ತಗಲುವ ಖರ್ಚು ವೆಚ್ಚ ಎಷ್ಟಾಗಬಹುದು ಎಂಬುದನ್ನು ಲೆಕ್ಕ ಹಾಕುತ್ತಾನೆ (ಲೂಕ. 14:28). ಹಾಗೆಯೇ ಒಬ್ಬ ಅರಸನು ಇನ್ನೊಬ್ಬ ಅರಸನೊಂದಿಗೆ ಯುದ್ಧಕ್ಕೆ ಹೋಗುವಾಗ, ತನ್ನಲ್ಲಿರುವ ಸೈನ್ಯದ ಬಲ ಇನ್ನೊಬ್ಬ ಅರಸನಲ್ಲಿರುವ ಸೇನಾಬಲವನ್ನು ಎದುರಿಸಿ ಯುದ್ಧದಲ್ಲಿ ಜಯಗಳಿಸಲು ಸಾಧ್ಯವಾ? ಎಂದು ಲೆಕ್ಕಾಚಾರ ಹಾಕುತ್ತಾನೆ (ಲೂಕ.14:31). ಲೌಕೀಕವಾದ ಮನುಷ್ಯರೇ ಇಷ್ಟೊಂದು ಚಿಂತಿಸಬೇಕಾದರೆ ಇನ್ನು ಆತ್ಮೀಕವಾದ ಮನುಷ್ಯರು ಇನ್ನೆಷ್ಟು ಹೆಚ್ಚಾಗಿ ಚಿಂತಿಸಬೇಕಲ್ಲವೇ.

ಆತ್ಮೀಕ ಯುದ್ಧದಲ್ಲಿ ನಂಬಿಕೆ ಬಹಳ ಮುಖ್ಯವಾದದ್ದು. ತಮಗೆ ದೇವರಲ್ಲಿ ಪೂರ್ಣ ನಂಬಿಕೆ ಇದೆಯಾ? ದೇವರ ಚಿತ್ತ ಏನಾಗಿದೆ? ದೇವರು ನಮಗೆ ಸಹಾಯಕನಾಗಿ ನಿಲ್ಲುವನಾ? ಎಂದು ಆತ್ಮೀಕ ಮನುಷ್ಯರು ಪರಿಶೀಲಿಸಿ ನೋಡುವರು. ನಂಬಿಕೆಯೂ ದೇವರ ಬಲವೂ ಒಂದಕ್ಕೊಂದು ಪೂರಕವಾಗಿರುವದು. ನಿಮ್ಮೊಳಗಿಂದ ಹೊರಡುವ ಮಹಿಮೆಯಾದ ನಂಬಿಕೆ ದೇವರ ಬಳಿಯಿಂದ ದೈವೀಕ ಬಲವನ್ನು ತರುವದು. ಜಯವನ್ನು ತರುವದು. ನಿಮ್ಮ ನಂಬಿಕೆಯೇ ಪ್ರಪಂಚವನ್ನು ಜಯಿಸುವಂಥದ್ದು. ಸಾರಳು ತನಗೆ ಗರ್ಭಧರಿಸುವ ಕಾಲ ಮೀರಿದರೂ ವಾಗ್ದಾನ ಮಾಡಿದ ದೇವರು ನಂಬಿಗಸ್ಥನು ಎಂಬ ಬಲವಾದ ವಿಶ್ವಾಸದಿಂದ ತನ್ನ ತೊಂಬತ್ತನೆಯ ವಯಸ್ಸಿನಲ್ಲಿ ಗರ್ಭಧರಿಸಿ ಮಗುವನ್ನು ಹೆತ್ತಳು (ಇಬ್ರಿ.11:11) ಇಂದು ನೀವು ನಂಬಿಕೆಯಲ್ಲಿ ಕೊರತೆ ಉಳ್ಳವರಾಗಿರಬಹುದು. ಕರ್ತನು ನನ್ನ ನಂಬಿಕೆಯನ್ನು ಹೆಚ್ಚಿಸುವನಾ? ಎಂದು ಕೇಳಬಹುದು. ವಿಶ್ವಾಸದಲ್ಲಿ ಬೆಳೆಯಲು ಬಲಹೊಂದಲು ಒಂದು ಮುಖ್ಯವಾದ ಮಾರ್ಗವೆಂದರೆ ಕರ್ತನನ್ನು ಸ್ತುತಿಸುವದೇ ಆಗಿದೆ. ನಾನು ನಂಬಿರುವ ದೇವರು ಯಾರೆಂದು ತಿಳಿದಿದ್ದೇನೆ ಎಂದು ಹೇಳಿ ಕರ್ತನಲ್ಲಿ ಬಲಗೊಳ್ಳಿರಿ.

ದೇವಮಕ್ಕಳೇ, ಕ್ರಿಸ್ತನು ನನ್ನನ್ನು ಸಕಲ ಆಶೀರ್ವಾದಗಳಿಂದಲೂ ಆಶೀರ್ವದಿಸಿರುವನು (ಎಫೆ.1:3). ದೇವರು ಕ್ರಿಸ್ತನಲ್ಲಿ ನನ್ನನ್ನು ಜಗದುತ್ಪತ್ತಿಗೆ ಮೊದಲೇ ಆದುಕೊಂಡನು (ಎಫೆ. 1:4). ನಾನು ರಾಜಾಧಿರಾಜನ ಮಗನೂ, ಮಗಳೂ ಆಗಿರುವೆನು ಎಂದು ವಿಶ್ವಾಸ ಅರಿಕೆ ಮಾಡಿರಿ.

*ನೆನಪಿಗೆ : ನಂಬಿಕೆಯ ಮೂಲಕ ಅವರು ರಾಜ್ಯಗಳನ್ನು ಸ್ವಾಧೀನ ಮಾಡಿಕೊಂಡರು, ನೀತಿಯನ್ನು ನಡಿಸಿದರು, ವಾಗ್ದಾನಗಳನ್ನು ಪಡೆದುಕೊಂಡರು, ಸಿಂಹಗಳ ಬಾಯಿ ಕಟ್ಟಿದರು (ಇಬ್ರಿ. 11:33,34).*

ಜೂನ್ 18

## ಪವಿತ್ರಾತ್ಮನ ಬಲ!

ಬೆಳಿಗ್ಗೆ : ನೆಹೆ. 10,11
ಸಂಜೆ : ಅ.ಕೃ. 4:1–22

ಯೇಸು ಪವಿತ್ರಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರುಗಿ ಗಲಿಲಾಯಕ್ಕೆ ಹೋದನು. ಆತನ ಸುದ್ದಿಯು ಸುತ್ತಲಿರುವ ಪ್ರಾಂತ್ಯದಲ್ಲೆಲ್ಲಾ ಹಬ್ಬಿತು (ಲೂಕ.4:14).

ದೇವಬಲವನ್ನು ಪಡೆದುಕೊಳ್ಳುವದು ಹೇಗೆ ಎಂಬುದನ್ನು ಧ್ಯಾನಿಸುತ್ತಾ ಬಂದಿರುವೆವು. ಈ ಬಲವನ್ನು ಹೊಂದಿಕೊಳ್ಳುವ ಅತಿ ಶ್ರೇಷ್ಠವಾದ ಮಾರ್ಗವೆಂದರೆ ಪವಿತ್ರಾತ್ಮನನ್ನು ಆಶ್ರಯಿಸಿ ಸದಾ ದೇವ ಅನ್ಯೋನ್ಯತೆಯಲ್ಲಿ ನಡೆಯುವದು. ಯೇಸುಕ್ರಿಸ್ತನು ಯಾವಾಗಲೂ ಪವಿತ್ರಾತ್ಮನ ಶಕ್ತಿಯನ್ನು ಆತುಕೊಂಡಿದ್ದನು. ಆದ್ದರಿಂದ ಆತನು ಕರ್ತನ ಆತ್ಮವು ನನ್ನ ಮೇಲಿದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು ಎಂದು ಹೇಳುವದನ್ನು ಲೂಕ 4:18ರಲ್ಲಿ ಓದುತ್ತೇವೆ.

ಇಂದು ಅದೇ ಉನ್ನತ ಬಲವನ್ನು ನಿಮಗೆ ನೀಡಲು ಕರ್ತನು ಬಯಸುವನು. ನಿಮ್ಮನ್ನು ತನ್ನ ಬಲದಿಂದ ತುಂಬಿ, ಅಂಧಕಾರ ಶಕ್ತಿಗಳನ್ನು ಎದುರಿಸಿ ನಿಲ್ಲುವಂಥ ಬಲಶಾಲಿಗಳನ್ನಾಗಿ ಮಾರ್ಪಡಿಸಲು ಬಯಸುವನು. ಹೌದು, ನೀವು ಬಲಹೊಂದಿ, ಕರ್ತನಿಗೆ ಸಾಕ್ಷಿಗಳಾಗಿ ನಿಲ್ಲಬೇಕು, ಸೇವೆ ಮಾಡಬೇಕು ಎಂಬುದಕ್ಕಾಗಿಯೇ ಪವಿತ್ರಾತ್ಮನೆಂಬ ಉನ್ನತ ಬಲವನ್ನು ದೇವರು ವಾಗ್ದಾನ ಮಾಡಿದನು. ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಕರ್ತನು ತನ್ನ ಶಿಷ್ಯರಿಗೆ ಹೇಳಿದ್ದನ್ನು ಲೂಕ. 24:49ರಲ್ಲಿ ನೋಡುತ್ತೇವೆ. ಪವಿತ್ರಾತ್ಮನನ್ನು ಕರ್ತನು ತನ್ನ ಮಕ್ಕಳಿಗೆ ನೀಡುವದರಲ್ಲಿ ಮೂರು ಉದ್ದೇಶಗಳಿರುವವು. 1. ಕರ್ತನಲ್ಲಿ ನಮ್ಮನ್ನು ದೃಢಪಡಿಸಿಕೊಳ್ಳುವದು, 2. ಲೋಕಕ್ಕೆ ಸುವಾರ್ತೆ ಸಾರುವದು, 3. ಕರ್ತನಿಗೆ ಸಾಕ್ಷಿಗಳಾಗಿರುವದು. ಯೇಸುಕ್ರಿಸ್ತನನ್ನು ಶಿಲುಬೆಗೆ ಹಾಕಿದಾಗ, ಆತನ ಶಿಷ್ಯರು, ಹಿಂಬಾಲಕರು ರೋಮ್ ಸರ್ಕಾರಕ್ಕೆ ಹೆದರಿ ಮೇಲುಪ್ಪರಿಗೆಯಲ್ಲಿ ಅಡಗಿಕೊಂಡಿದ್ದರು. ಆದರೆ ಪವಿತ್ರಾತ್ಮನ ಬಲ ಅವರ ಮೇಲೆ ಇಳಿದು ಬಂದಾಗ, ಅವರು ಆತ್ಮದಲ್ಲಿ ಬಲಹೊಂದಿ ಧೈರ್ಯದಿಂದ ಬಹಿರಂಗವಾಗಿ ಯೇಸುಕ್ರಿಸ್ತನೇ ದೇವಕುಮಾರನೆಂದು ಸಾರಿದರು. ಮೂರು ಸಾವಿರ, ಐದು ಸಾವಿರ ಎಂದು ಜನರನ್ನು ಕರ್ತನಿಗಾಗಿ ಆದಾಯ ಪಡಿಸಿದರು. ಹಾಗೆ ಆದದ್ದು ಬಲದಿಂದಲ್ಲ, ಪರಾಕ್ರಮದಿಂದಲ್ಲ, ದೇವರಾತ್ಮನಿಂದಲೇ ಹಾಗಾಯಿತು. ಪೇತ್ರನು ಪ್ರಸಂಗಿಸಲು ಮಾತ್ರ ಆತ್ಮದಲ್ಲಿ ಬಲಹೊಂದಲಿಲ್ಲ. ಕರ್ತನಿಗಾಗಿ ಶ್ರಮೆ ಅನುಭವಿಸಲು, ರಕ್ತಸಾಕ್ಷಿಯಾಗಿ ಸಾಯಲೂ ಆತನು ಆತ್ಮದಲ್ಲಿ ಬಲಹೊಂದಿದನು.

ದೇವಮಕ್ಕಳೇ, ಮೇಲಿನಿಂದ ಬರುವ ಪವಿತ್ರಾತ್ಮನ ಬಲದಿಂದ ತುಂಬಲ್ಪಡಿರಿ. ಆಗ ಮಾತ್ರ ಬಲವುಳ್ಳ ಕ್ರಿಸ್ತೀಯ ಜೀವಿತ ನಡೆಸಲು ನಿಮ್ಮಿಂದ ಸಾಧ್ಯ. ಪಾಪವನ್ನು ಸೈತಾನನನ್ನೂ ಜಯಿಸಲು ಬಲಹೊಂದಿರಿ.

*ನೆನಪಿಗೆ : ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ (2 ತಿಮೊ. 1:7).*



ಜೂನ್ 19

## ವಿಧೇಯತೆಯಿಂದ ಬಲ!

ಬೆಳಿಗ್ಗೆ : ನೆಹೆ. 12,13
ಸಂಜೆ : ಅ.ಕೃ. 4:23–37

ದೇವರಿಗೆ ಒಳಗಾಗಿರಿ, ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು (ಯಾಕೋ. 4:7).

ದೇವರಿಗೆ ವಿಧೇಯರಾಗುವಾಗ ದೇವರ ಕೃಪೆ ನಿಮ್ಮನ್ನು ಆವರಿಸಿಕೊಳ್ಳುವದು. ಆಗ ನೀವು ಬಲಶಾಲಿಗಳಾಗಿ ಪ್ರಕಾಶಿಸುವಿರಿ. ಯಾವ ಶತ್ರುವೂ ನಿಮ್ಮನ್ನು ಎದುರಿಸಿ ನಿಲ್ಲಲಾರನು. ಯೇಸುಕ್ರಿಸ್ತನ ಜೀವಿತದಿಂದ ನೀವು ಇದನ್ನು ಅರಿತುಕೊಳ್ಳಬಹುದು. ಯೇಸುಕ್ರಿಸ್ತನು ದೀಕ್ಷಾಸ್ನಾನ ಹೊಂದಿದ ಕೂಡಲೇ ಶೋಧನೆಗೆ ಒಳಪಡಬೇಕಾಯಿತು. ಅದಕ್ಕೆ ತನ್ನನ್ನು ಒಪ್ಪಿಸಿಕೊಟ್ಟನು. ಶೋಧಿಸಲ್ಪಡಲು ದೇವರಾತ್ಮನಿಂದ ಅಡವಿಗೆ ಕೊಂಡೊಯ್ಯಲ್ಪಟ್ಟನು (ಮತ್ತಾ. 4:1). ಇದರ ಪರಿಣಾಮವಾಗಿ ಆತ್ಮೀಕ ಬಲವುಳ್ಳವನಾಗಿ ಪ್ರಕಾಶಿಸಿದನು.

ಚಿಕ್ಕ ಪ್ರಾಯದಿಂದಲೇ ಮೊದಲನೆಯದಾಗಿ ಪ್ರಾಪಂಚಿಕ ರೀತಿಯ ಹೆತ್ತವರಿಗೆ ವಿಧೇಯನಾಗಿ ನಡೆದುಕೊಂಡನು. ಇದರಿಂದ ದೇವರ ದಯೆ ಮನುಷ್ಯರ ದಯೆ ಆತನ ಮೇಲೆ ಹೆಚ್ಚುತ್ತಾ ಬಂತು (ಲೂಕ. 2:52). ಅದೇ ವೇಳೆಯಲ್ಲಿ ತಂದೆ ದೇವರಿಗೆ ವಿಧೇಯನಾಗಿ ಬೆಳೆದನು. ಇದರಿಂದಾಗಿ ಆತ್ಮೀಕ ಬಲವು ಆತನಲ್ಲಿ ಇತ್ತು. ಎಲ್ಲಿಯವರೆಗೆ ಯೇಸುಕ್ರಿಸ್ತನು ದೇವರಿಗೆ ವಿಧೇಯನಾದನು? ತನ್ನ ಮರಣ ಪರಿಯಂತ ತಂದೆಗೆ ವಿಧೇಯನಾದನು. ಪುನರುತ್ಥಾನ ಹೊಂದಿದ ಮೇಲೂ ತಂದೆಗೆ ವಿಧೇಯನಾದನು. ಸತ್ಯವೇದ ಹೀಗೆ ಹೇಳುತ್ತದೆ. "ಆತನು ದೇವ ಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನವಾದ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದುಮಾಡಿಕೊಂಡು.... ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು" ಎಂದು (ಫಿಲಿ. 2:6–8). ಈ ವಿಧೇಯತೆಯಿಂದ ಯೇಸುಕ್ರಿಸ್ತನು ಪಡೆದ ಆಶೀರ್ವಾದವೇನು? "ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" (ಫಿಲಿ. 2:9–11) ಎಂದು ಸತ್ಯವೇದ ಹೇಳುತ್ತದೆ.

ದೇವಮಕ್ಕಳೇ, ವಿಧೇಯತೆ ಎಂಬುದು ಒಂದು ಎತ್ತರವಾದ ಏಣಿಯಂತಿದೆ. ವಿಧೇಯರಾಗುವಾಗ, ಆತ್ಮೀಕ ಹಾಗೂ ಲೌಕೀಕವಾದ ಆಶೀರ್ವಾದಗಳನ್ನು ಪಡೆಯುವಿರಿ. ಪವಿತ್ರಾತ್ಮನು ಅನೇಕ ವೇಳೆ ನಿಮಗೆ ವಿಧೇಯತೆಯ ಕುರಿತು ತಿಳಿಯಪಡಿಸುವನು. ಇದನ್ನು ಮಾಡಬೇಡ ಎಂದು ಕೆಲವು ವೇಳೆ ತಡೆಯಬಹುದು. "ಇದನ್ನು ಮಾಡು" ಎಂದು ತಿಳಿಸಬಹುದು. ದೇವರು ಕೊಡುವ ಆಲೋಚನೆಗಳಿಗೆ ವಿಧೇಯರಾಗಿ ಕಾರ್ಯ ಮಾಡಿ ಮೌನವಾಗಿರು ಎಂದಾಗ ಮೌನವಾಗಿರಿ. ಆಗ ಕರ್ತನೇ ನಿಮಗಾಗಿ ಯುದ್ಧ ಮಾಡುವನು.

*ನೆನಪಿಗೆ : ನಿಮ್ಮ ವಿಧೇಯತ್ವವು ಎಲ್ಲರಿಗೂ ಪ್ರಸಿದ್ಧವಾದದರಿಂದ ಇದನ್ನು ಬರೆದಿದ್ದೇನೆ... ನೀವು ಒಳ್ಳೇತನದ ವಿಷಯದಲ್ಲಿ ಜಾಣರೂ, ಕೆಟ್ಟತನದ ವಿಷಯದಲ್ಲಿ ಕಳಂಕವಿಲ್ಲದವರೂ ಆಗಿರಬೇಕೆಂದು ಅಪೇಕ್ಷಿಸುತ್ತೇನೆ (ರೋಮಾ. 16:19).*

ಜೂನ್ 20

## ಉಪವಾಸದಿಂದ ಬಲ!

ಬೆಳಿಗ್ಗೆ : ಎಸ್ತೇರಳು 1,2
ಸಂಜೆ : ಅ.ಕೃ. 5:1–23

ಆತನು ನಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದನು (ಮತ್ತಾ. 4:2).

ಊಟವನ್ನು ಬಿಟ್ಟು, ಕರ್ತನ ಪಾದದಲ್ಲಿ ಆಸಕ್ತಿಯಿಂದ ಪ್ರಾರ್ಥಿಸುವದೇ ಉಪವಾಸ. ಆ ವೇಳೆಯಲ್ಲಿ ಶರೀರದ ಬಲ ಕುಂದುವಾಗ ಒಳಗಿನ ಮನುಷ್ಯನಲ್ಲಿ ಅಂದರೆ ಆತ್ಮದಲ್ಲಿ ಬಲ ತುಂಬುವದು. ಒಬ್ಬನೂ ಎದುರಿಸಿ ನಿಲ್ಲಲಾರದಂಥ ದೇವಮಹಿಮೆಯನ್ನು ತರುವದು, ಯೇಸುಕ್ರಿಸ್ತನು ತನ್ನ ಸೇವೆಯನ್ನು ಪ್ರಾರಂಭಿಸುವ ಮೊದಲು ಅರಣ್ಯದಲ್ಲಿ ನಾಲ್ವತ್ತು ದಿವಸ ಉಪವಾಸಮಾಡಿ ಆತ್ಮದಲ್ಲಿ ಬಲಹೊಂದಿದನು. ಸೈತಾನನ ಶೋಧನೆಗಳನ್ನು ಜಯಿಸಿದನು.

ನಾಲ್ವತ್ತು ದಿವಸ ಉಪವಾಸ ಮಾಡುವದು ಎಂಬುದು ಸಾಧಾರಣವಾದದ್ದಲ್ಲ. ಶೋಧಕನಾದ ಸೈತಾನನು ಕಲ್ಲುಗಳನ್ನು ರೊಟ್ಟಿಯಾಗಿಸಿ ತಿನ್ನು ಎಂದು ಹೇಳಿ ಆತನಿಗೆ ಶೋಧನೆ ತಂದನು. ಆದರೆ ಯೇಸುವಾದರೋ ಆತ್ಮದಲ್ಲಿ ದೃಢವಾಗಿದ್ದನು. ದೇವರ ವಾಕ್ಯಗಳಿಂದಲೇ ಅವನನ್ನು ಜಯಿಸಿದನು. ದಾವೀದನು ತನ್ನ ಇಕ್ಕಟ್ಟಿನ ಸಮಯಗಳಲೆಲ್ಲಾ ಉಪವಾಸದಿಂದ ಕರ್ತನನ್ನು ಪ್ರಾರ್ಥಿಸಿದನು. “ನಾನು ಉಪವಾಸವಿದ್ದು ನನ್ನ ಆತ್ಮವನ್ನು ನೋಯಿಸಿದೆನು” (ಕೀರ್ತ. 35:13). “ನಾನು ಅತ್ತತ್ತು ಉಪವಾಸ ಬಿದ್ದದ್ದೆಲ್ಲಾ ಪರಿಹಾಸ್ಯಕ್ಕೆ ಕಾರಣವಾಯಿತು” (ಕೀರ್ತ. 69:10). ಉಪವಾಸದಿಂದ ನನ್ನ ಮೊಣಕಾಲುಗಳು ಬಲಹೀನವಾದವು (ಕೀರ್ತ. 109:24) ಎಂದೆಲ್ಲಾ ತನ್ನ ಅನುಭವವನ್ನು ಹೇಳುತ್ತಾನೆ. ಶತ್ರು ಅವನನ್ನು ಬೆನ್ನಟ್ಟಿದಾಗಲೆಲ್ಲಾ ಅವನು ಉಪವಾಸವಿದ್ದು ಕಣ್ಣೀರಿಟ್ಟು ಪ್ರಾರ್ಥಿಸಿದನು. ಕರ್ತನು ಅವನ ಪ್ರಾರ್ಥನೆಗೆ ಉತ್ತರಕೊಟ್ಟು ವೈರಿಗಳಿಂದ ಅವನನ್ನು ಬಿಡಿಸಿದನು. ಮಾತ್ರವಲ್ಲ ಆತ್ಮದಲ್ಲಿ ಬಲಹೊಂದಿದನು. ಎಸ್ತೇರ್ ರಾಣಿ ಮೂರುದಿನಗಳು ರಾತ್ರಿ ಹಗಲು ಉಪವಾಸವಿದ್ದು ಪ್ರಾರ್ಥಿಸಿದ್ದರಿಂದ ಅರಸನಾದ ಅಹಷ್ವೇರೋಷನ ದಯೆ ಸಿಕ್ಕಿತು. ಯೆಹೂದ್ಯ ಜನಾಂಗ ಅಳಿವಿನಿಂದ ರಕ್ಷಿಸಲ್ಪಟ್ಟಿತು. ದಿನಕ್ಕೆ ಒಂದು ಸಾರಿ ಊಟ ಮಾಡುವವನು ಯೋಗಿ, ಎರಡು ಸಾರಿ ಊಟ ಮಾಡುವವನು ಭೋಗಿ, ಮೂರು ಸಾರಿ ಊಟ ಮಾಡುವವನು ರೋಗಿ ಎಂಬುದು ಆಡುಮಾತು. ಆದರೆ ಕೆಲವರು ಏನು ಕಂಡರೂ ತಿನ್ನಬೇಕೆಂದು ಬಯಸುವರು. ಏನಾದರೂ ತಿನ್ನುತ್ತಲೇ ಇರುತ್ತಾರೆ. ಇಂಥವರು ಆತ್ಮದಲ್ಲಿ ಬಲಪಡಲು ಸಾಧ್ಯವಿಲ್ಲ. ಸೈತಾನನನ್ನು ಎದುರಿಸಿ ನಿಲ್ಲಲು ಸಾಧ್ಯವಿಲ್ಲ. ದೇವಮಕ್ಕಳೇ, ನೀವು ಮಾಡುವ ಉಪವಾಸ ಪ್ರಾರ್ಥನೆ ನಿಮ್ಮ ಮಕ್ಕಳ ಜೀವಿತದಲ್ಲಿ ನಿಮ್ಮ ಜೀವಿತದಲ್ಲಿ ಅದ್ಭುತಗಳನ್ನೂ, ಅತಿಶಯಗಳನ್ನು ಕರ್ತನು ಮಾಡುವನು. ನಿಮ್ಮ ಗಂಡನ ಅಥವಾ ಹೆಂಡತಿಯ ಜೀವಿತದಲ್ಲಿ ದೊಡ್ಡ ಮಾರ್ಪಾಟನ್ನು ಕಾಣುವಿರಿ.

*ನೆನಪಿಗೆ : ನನ್ನ ಹೃದಯದಲ್ಲಿ ಸಂತಾಪ ಉಕ್ಕಿತು; ನಾನು ಯೋಚಿಸುತ್ತಿರುವಲ್ಲಿ ಬೆಂಕಿಯುರಿಯಿತು (ಕೀರ್ತ. 39:3).*



ಜೂನ್ 21

## ಸವಾಲಿನಲ್ಲಿ ಕಣ್ಣೀರು!

ಬೆಳಿಗ್ಗೆ : ಎಸ್ತೇರಳು 3,4,5
ಸಂಜೆ : ಅ.ಕೃ. 5:24–42

ನಿನ್ನ ದೇವರು ಎಲ್ಲಿ ಎಂದು ಜನರು ಯಾವಾಗಲೂ ನನ್ನನ್ನು ಗೇಲಿ ಮಾಡುವದರಿಂದ ಹಗಲಿರುಳು ನನಗೆ ಕಣ್ಣೀರೇ ಆಹಾರವಾಯಿತು (ಕೀರ್ತ. 42:3).

ಶತ್ರುಗಳು ಸವಾಲು ಹಾಕುವಾಗ, ಎದುರಿಸಿ ನಿಂತು ಅದನ್ನು ಜಯಿಸದೆ ಹೋದರೆ, ಕಣ್ಣೀರೇ ಆಹಾರವಾಗುವದು. ಹೆದರಿ ಓಡುವವರನ್ನು ಎದುರಿಸುವರೂ ಅನೇಕರು. ಆದ್ದರಿಂದ ಸೈತಾನನನ್ನು ಎದುರಿಸಿ ನಿಲ್ಲಿರಿ. ಅವನು ಓಡಿಹೋಗುವನು. ನಿಮ್ಮ ಸಮಸ್ಯೆಗಳನ್ನೂ ಹೋರಾಟಗಳನ್ನೂ ಎದುರಿಸಿ ನಿಲ್ಲಿರಿ, ನಿಶ್ಚಯವಾಗಿ ಜಯಗಳಿಸುವಿರಿ.

ದೊಡ್ಡ ಅಲೆ ತನ್ನ ಕಡೆಗೆ ಬರುವದನ್ನು ಕಂಡ ಪೇತ್ರನು ಭಯದಿಂದ ಕೂಡಿದವನಾದನು. ಆಗ ಯೇಸುಕ್ರಿಸ್ತನು ಅಲ್ಪ ವಿಶ್ವಾಸಿಯೇ, ಯಾಕೆ ಭಯಪಡುವೆ? ಎಂದು ಹೇಳಿ ಕೈಹಿಡಿದು ಎತ್ತಿದನು. ನೀವು ಅಲೆಗಳಂತೆ ಆಗಾಗ ಬರುವ ಸಮಸ್ಯೆಗಳನ್ನು ನೋಡಿ ಸೋತುಹೋಗಬೇಡಿ. ಪೇತ್ರನು ಭಯಪಟ್ಟ ಆ ಅಲೆಗಳ ಮೇಲೆ ಕ್ರಿಸ್ತನು ನಡೆದುಬಂದು ಅವುಗಳನ್ನು ತನ್ನ ಪಾದದ ಕೆಳಗೆ ಹಾಕಿದನು. ಯಾವ ಸಮಸ್ಯೆ ನಿಮ್ಮನ್ನು ಭಯಪಡಿಸುವದೋ ಅದೇ ಸಮಸ್ಯೆ ಕ್ರಿಸ್ತನ ಕಾಲುಗಳ ಕೆಳಗೆ ಬುಟ್ಟಿಯಲ್ಲಿನ ಹಾವಾಗಿ ಅಡಗುವದು. ಯೇಸುಕ್ರಿಸ್ತನ ಹೆಸರಿನಲ್ಲಿ ಸಮಸ್ಯೆಗಳನ್ನು ತುಳಿದು ಸವಾಲುಗಳನ್ನು ಮುರಿದುಹಾಕಿರಿ. ಇಸ್ರಾಯೇಲ್ಯರ ವಿರೋಧವಾಗಿ ಗೊಲ್ಯಾತನು ಸವಾಲು ಹಾಕಿ ಯಾರು ನನ್ನೊಂದಿಗೆ ಯುದ್ಧ ಮಾಡಿ ಜಯಿಸುವಿರಿ? ಎಂದು ಕೇಳಿದಾಗ, ದಾವೀದನು ಎದ್ದು ಹೋಗಿ ತನ್ನ ಕವಣೆಕಲ್ಲಿನಿಂದ ಹೊಡೆದು ಅವನನ್ನು ಕೊಂದನು (1 ಸಮು. 17:49). ಅರಸನಾದ ಸನ್ಹೇರೀಬನೂ, ದಳಪತಿಯಾದ ರಬ್ಶಾಕೆಯು ಇಸ್ರಾಯೇಲ್ ಅರಸನಾದ ಹಿಜ್ಕೀಯನಿಗೆ ಸವಾಲು ಹಾಕಿದರು. ಆಗ ಕರ್ತನು ತನ್ನ ದೇವದೂತನನ್ನು ಕಳುಹಿಸಿದನು. ಅವನು ಅಶ್ಶೂರದ ಅರಸನ ಪಾಳೆಯದೊಳಗೆ ಇಳಿದು ಒಂದು ಲಕ್ಷದ ಎಂಬತ್ತೈದು ಸಾವಿರ ಜನರನ್ನು ಸಂಹಾರಮಾಡಿದನು (2 ಅರ. 19:35). ಕರ್ಮೆಲ್ ಬೆಟ್ಟದಲ್ಲಿ ಒಂದು ದೊಡ್ಡ ಸವಾಲು ಎದ್ದಿತು. ಯೆಹೋವನು ದೇವರಾ? ಬಾಳನು ದೇವರಾ? ಎಲೀಯನು ಆಕಾಶದಿಂದ ಬೆಂಕಿಯನ್ನು ಇಳಿಯುವಂತೆ ಮಾಡಿ ಯೆಹೋವನೇ ದೇವರೆಂದು ನಿರೂಪಿಸಿದನು.

ದೇವಮಕ್ಕಳೇ, ದಾನಿಯೇಲನಿಗೆ ವಿರೋಧವಾಗಿ ಸಂಚು ಮಾಡಿದಾಗ ದೇವರು ಸಿಂಹಗಳ ಬಾಯನ್ನು ಕಟ್ಟಿದನು. ಸಂಚು ರೂಪಿಸಿದವರೇ ಸಿಂಹಗಳ ಬಾಯಿಗೆ ಆಹಾರವಾಗಬೇಕಾಯಿತು. ಹಾಗೆಯೇ ಕರ್ತನು ತನಗೆ ಭಯಪಡುವ ಮಕ್ಕಳಿಗೆ ಎದುರಾಗುವ ಎಲ್ಲಾ ಸಮಸ್ಯೆಗಳಿಂದ ಬಿಡುಗಡೆ ನೀಡುವದು ನಿಶ್ಚಯ. ಆದ್ದರಿಂದ ಸಮಸ್ಯೆಗಳು ಎದುರಾದಾಗ ಧೈರ್ಯವಾಗಿ ಎದುರಿಸಿ ನಿಲ್ಲಿರಿ.

*ನೆನಪಿಗೆ : ನಾಳೆ ಎಂದು ಕೊಚ್ಚಿಕೊಳ್ಳಬೇಡ, ಒಂದು ದಿನದೊಳಗೇ ಏನಾಗುವದೋ ನಿನಗೆ ತಿಳಿಯದು (ಜ್ಞಾನೋ. 27:1).*

ಜೂನ್ 22

## ಕಣ್ಣೀರನ್ನು ನೋಡುವನು!

ಬೆಳಿಗ್ಗೆ : ಎಸ್ತೇರ್ 6,7,8
ಸಂಜೆ : ಅ.ಕೃ. 6

ನನ್ನ ಕಣ್ಣೀರು ನಿನ್ನ ಬುದ್ದಲಿಯಲ್ಲಿ ತುಂಬಿದೆ (ಕೀರ್ತ. 56:8).

ದೇವರು ಎಂದಿಗೂ ತನ್ನ ಮಕ್ಕಳ ಕಣ್ಣೀರಿನ ಪ್ರಾರ್ಥನೆಯನ್ನು ತಿರಸ್ಕರಿಸುವದಿಲ್ಲ. ಆತನ ಮಕ್ಕಳ ಕಣ್ಣೀರು ಆತನ ಹೃದಯವನ್ನು ಕರಗಿಸುವದು. ಆತನು ತಾನೇ ತನ್ನ ಬಲವಾದ ಹಸ್ತಗಳಿಂದ ನಿಮ್ಮ ಕಣ್ಣೀರನ್ನು ಒರೆಸುವನು.

ಅರಸನಾದ ದಾವೀದನು ದೇವರನ್ನು ನೋಡಿ "ನನ್ನ ಕಣ್ಣೀರು ನಿನ್ನ ಬುದ್ದಲಿಯಲ್ಲಿ ತುಂಬಿದೆ" ಎಂದು ಹೇಳುತ್ತಾನೆ. ಒಂದು ಬುದ್ದಲಿಯೇ ತುಂಬುವಷ್ಟು ಕಣ್ಣೀರನ್ನು ಸುರಿಸಿದವನೆಂದರೆ ಅವನ ದುಃಖ ಎಷ್ಟು ಅಪಾರವಾಗಿದ್ದಿರಬೇಕು? ಆದರೆ ನಮ್ಮ ದೇವರು ಕಣ್ಣೀರನ್ನು ಆನಂದ ತೈಲವನ್ನಾಗಿ ಮಾರ್ಪಡಿಸುವನು. ನೀವು ಪಟ್ಟ ದುಃಖಕ್ಕೆ ಎರಡರಷ್ಟು ಸಂತೋಷವನ್ನು ಸಮಾಧಾನವನ್ನು ಆದರಣೆಯನ್ನು ಪಡೆದುಕೊಳ್ಳುವಿರಿ. ನೀವು ಸುರಿಸುವ ಕಣ್ಣೀರು ಭೂಮಿಯಲ್ಲಿ ಬೀಳುವದಿಲ್ಲ. ಪರಲೋಕದಲ್ಲಿರುವ ಕರ್ತನ ಬುದ್ದಲಿಯಲ್ಲಿ ಬೀಳುವದು. ನಿಮ್ಮ ಕಣ್ಣೀರಿನ ಒಂದೊಂದು ಹನಿಯೂ ಲೆಕ್ಕಿಸಲ್ಪಡುವದು. ಅಳುವವರ ಸಂಗಡ ಅಳಿರಿ (ರೋಮಾ. 12:15) ಎಂದು ಹೇಳಿದ ದೇವರು ನಿಮ್ಮ ದುಃಖದಲ್ಲೂ ಪಾಲು ತೆಗೆದುಕೊಳ್ಳುವನು. ತನ್ನ ಸ್ನೇಹಿತನಾದ ಲಾಜರನು ಸತ್ತಾಗ ಯೇಸು ಆತ್ಮದಲ್ಲಿ ನೊಂದುಕೊಂಡನು "ಕಣ್ಣೀರು ಸುರಿಸಿದನು" ಆ ಕಣ್ಣೀರು ಲಾಜರನನ್ನು ಜೀವದಿಂದ ಎಬ್ಬಿಸಿತು. ಯೆರೂಸಲೇಮನ್ನು ಕಂಡಾಗ ಕ್ರಿಸ್ತನು ಕಣ್ಣೀರಿಟ್ಟನು (ಲೂಕ19:41,42). ಅಬ್ರಹಾಮನು ತನ್ನ ಹೆಂಡತಿಯಾದ ಹಾಗರಳನ್ನು ಮಗನಾದ ಇಷ್ಮಾಯೇಲನನ್ನು ಮನೆಯಿಂದ ಕಳುಹಿಸಿಬಿಟ್ಟಾಗ ಅವನು ಕೊಟ್ಟದ್ದು ಸ್ವಲ್ಪ ರೊಟ್ಟಿ, ಒಂದು ಬುದ್ದಲಿ ನೀರು ಮಾತ್ರ. ಗಂಡನ ಪ್ರೀತಿ ಅಷ್ಟೇ ನೀರು ಮುಗಿಯಿತು. ಮಗನು ಮರಣದೊಂದಿಗೆ ಹೋರಾಡುತ್ತಿದ್ದನು. ಹಾಗರಳು ಗಟ್ಟಿಯಾಗಿ ಅಳುತ್ತಿದ್ದಳು. ಆ ಕಣ್ಣೀರು ದೇವಸಮ್ಮುಖದಲ್ಲಿನ ಬುದ್ದಲಿಯಲ್ಲಿ ಬಿದ್ದಿತು. ಆ ಕಣ್ಣೀರು ದೇವದೂತನನ್ನು ಕೆಳಕ್ಕೆ ಕರೆದುಕೊಂಡು ಬಂದಿತು. ಅವನು ಹಾಗರಳಿಗೆ ನೀರಿನ ಬುಗ್ಗೆಯನ್ನು ತೋರಿಸಿದನು ಮಾತ್ರವಲ್ಲ, ಹಾಗರಳು ವಾಗ್ದಾನವನ್ನೂ ಪಡೆದುಕೊಂಡಳು (ಆದಿ. 21:16–18).

ದೇವಮಕ್ಕಳೇ, ಕರ್ತನು ಎಂದಿಗೂ ನಿಮ್ಮ ಕಣ್ಣೀರನ್ನು ಕಡೆಗಣಿಸುವದಿಲ್ಲ. ನಿಮ್ಮ ಕಣ್ಣೀರಿನ ಪ್ರಾರ್ಥನೆಗೆ ಕರ್ತನು ನಿಶ್ಚಯವಾಗಿ ಉತ್ತರ ಕೊಡುವನು. ಇಕ್ಕಟ್ಟಿನ ಸಮಯದಲ್ಲಿ ಕರ್ತನನ್ನೇ ಆಶ್ರಯಿಸಿರಿ.

*ನೆನಪಿಗೆ : ನಾನು ನಿನ್ನ ಪ್ರಾರ್ಥನೆಯನ್ನು ಕೇಳಿದ್ದೇನೆ. ನಿನ್ನ ಕಣ್ಣೀರನ್ನು ನೋಡಿದ್ದೇನೆ. ನೀನು ಗುಣಹೊಂದುವಿ (2 ಅರಸು 20:5).*



ಜೂನ್ 23

## ಕಣ್ಣೀರಾ?

ಬೆಳಿಗ್ಗೆ : ಎಸ್ತೇರ್ 9,10
ಸಂಜೆ : ಅ.ಕೃ. 7:1–16

ಕಣ್ಣೀರಿನ ತಗ್ಗನ್ನು ದಾಟುವಾಗ ಅಲ್ಲಿ ಒರತೆಗಳನ್ನು ತೋಡಿ ನೀರಿನ ಸ್ಥಳವಾಗಿ ಮಾಡುತ್ತಾರೆ. (ಕೀರ್ತ. 84:6).

ನೀವು ಕಷ್ಟಗಳನ್ನು ನೋಡಿ ಎದೆಗುಂದಿಹೋಗುವವರಲ್ಲ. ಶೋಧನೆಗಳಲ್ಲಿ ಬಿದ್ದು ಹೋಗುವವರಲ್ಲ. ದಿಕ್ಕು ಕಾಣದವರಾದರೂ ದೆಸೆಗೆಟ್ಟವರಲ್ಲ. ನೀವು ಒರತೆಗಳನ್ನು ತೋಡಿ ನೀರಿನ ಸ್ಥಳವಾಗಿ ಮಾಡಲು ಕರೆಯಲ್ಪಟ್ಟವರು.

ಪ್ರತಿಯೊಬ್ಬರ ಜೀವಿತದಲ್ಲೂ ಕಣ್ಣೀರು ಕಷ್ಟ ಇವುಗಳ ಅನುಭವಗಳು ಬಂದೇ ಬರುವವು. ಆದರೆ ದೇವರ ಮಕ್ಕಳಾದ ನಿಮಗೆ ಕಣ್ಣೀರನ್ನು ಆನಂದ ತೈಲವನ್ನಾಗಿಸಿಕೊಳ್ಳುವದು ಗೊತ್ತಿರಬೇಕು. ಕಣ್ಣೀರಿನ ತಗ್ಗುಗಳನ್ನು ನೀರಿನ ಒರತೆಗಳನ್ನಾಗಿಸಿಕೊಳ್ಳುವದು ತಿಳಿದಿರಬೇಕು. ಹೌದು ನಿಮ್ಮ ದುಃಖ ಸಂತೋಷವಾಗಿ ಮಾರ್ಪಡುವದು. ಯೇಸುಕ್ರಿಸ್ತನು ತಾನೇ ತನ್ನ ಜೀವಿತದಲ್ಲಿ ಮೂರು ಬಾರಿ ಕಣ್ಣೀರು ಸುರಿಸಿದ್ದನ್ನು ಸತ್ಯವೇದದಲ್ಲಿ ಓದುತ್ತೇವೆ. 1. ಒಬ್ಬ ವ್ಯಕ್ತಿಗಾಗಿ ಕಣ್ಣೀರು ಸುರಿಸಿದನು (ಲಾಜರನಿಗಾಗಿ) (ಯೋಹಾ. 11:35). 2. ಒಂದು ಪಟ್ಟಣಕ್ಕಾಗಿ ಕಣ್ಣೀರು ಸುರಿಸಿದನು (ಯೆರೂಸಲೇಮಿಗಾಗಿ) (ಲೂಕ. 19:41). 3. ಇಡೀ ಪ್ರಪಂಚಕ್ಕಾಗಿ ಕಣ್ಣೀರು ಸುರಿಸಿದನು (ಇಬ್ರಿ.5:7). ಕಣ್ಣೀರಿನ ಹಾದಿಯಲ್ಲಿ ನಡೆದ ಆತನು ನಮ್ಮ ಕಣ್ಣೀರಿನ ವೇದನೆಗಳನ್ನು ಅರ್ಥಮಾಡಿಕೊಳ್ಳುವನು. ಆತನು ತಾನೇ ಶೋಧಿಸಲ್ಪಟ್ಟು ಬಾಧೆಗಳನ್ನು ಅನುಭವಿಸಿದ್ದರಿಂದ ಶೋಧಿಸಲ್ಪಡುವವರಿಗೆ ಸಹಾಯ ಮಾಡಲು ಶಕ್ತನಾಗಿದ್ದಾನೆ (ಇಬ್ರಿ. 2:18). ಆತನು ತಾನೇ ತನ್ನ ಬಲವಾದ ಹಸ್ತಗಳಿಂದ ನಿಮ್ಮ ಕಣ್ಣೀರೆಲ್ಲವನ್ನೂ ಒರೆಸುವನು. ಸತ್ಯವೇದದಲ್ಲಿರುವ ಭಕ್ತರ ಕಣ್ಣೀರಿನ ಅನುಭವವನ್ನು ಓದಿನೋಡಿರಿ. ಮಕ್ಕಳಿಲ್ಲದ ಹನ್ನಳು ಕಣ್ಣೀರಿಟ್ಟಳು. ಊಟ ಮಾಡಲೊಲ್ಲದಾದಳು. ಅವಳ ಗರ್ಭ ಮುಚ್ಚಲ್ಪಟ್ಟಿತ್ತು (1 ಸಮು. 1:7). ಆದರೆ ಅವಳು ದೇವ ಸಮ್ಮುಖದಲ್ಲಿ ತನ್ನ ಹೃದಯವನ್ನು ಹೊಯ್ದು ಕಣ್ಣೀರಿಟ್ಟಾಗ ಕರ್ತನು ಆಶೀರ್ವದಿಸಿ ಸಮುವೇಲನನ್ನು ನೀಡಿದನು. ಇನ್ನೂ ಐದು ಮಕ್ಕಳನ್ನು ಹೆರುವ ಭಾಗ್ಯ ನೀಡಿದನು. ಅವಳ ಕಣ್ಣೀರು ಆನಂದಬಾಷ್ಪವಾಗಿ ಮಾರ್ಪಟ್ಟಿತು. ಕಣ್ಣೀರಿನ ತಗ್ಗು ನೀರಿನ ಒರತೆಯಾಯಿತು. ಹಾಗೆಯೇ ಭಕ್ತನಾದ ಯೋಬನು ತನ್ನ ಮಕ್ಕಳನ್ನೂ, ಆಸ್ತಿಯನ್ನೂ, ಆರೋಗ್ಯವನ್ನೂ ಕಳೆದುಕೊಂಡು ಬೂದಿಯಲ್ಲಿ ಕುಳಿತು ಕಣ್ಣೀರು ಸುರಿಸಿದನು. ಕರ್ತನು ಅವನು ಕಳೆದುಕೊಂಡದ್ದೆಲ್ಲದರ ಎರಡು ಪಟ್ಟನ್ನು ಹಿಂದಿರುಗಿಸಿಕೊಟ್ಟನು. ಅವನ ಕಣ್ಣೀರು ಆನಂದಬಾಷ್ಪವಾಗಿ ಮಾರ್ಪಟ್ಟಿತು.

ದೇವಮಕ್ಕಳೇ, ನಿಮ್ಮ ಕಣ್ಣೀರನ್ನು ಕರ್ತನು ಆನಂದ ಕಣ್ಣೀರಾಗಿ ಮಾರ್ಪಡಿಸುವನು. ನಿಮ್ಮ ಅಳಲನ್ನು ನಗುವಾಗಿ ಮಾರ್ಪಡಿಸುವನು.

*ನೆನಪಿಗೆ : ನೀವು ಇನ್ನು ಅಳುವದೇ ಇಲ್ಲ, ನೀವು ಕೂಗಿಕೊಂಡ ಶಬ್ದವನ್ನು ಕೇಳಿ ಆತನು ನಿಮಗೆ ಕೃಪೆ ತೋರಿಸೇ ತೋರಿಸುವನು (ಯೆಶಾ. 30:19).*

ಜೂನ್ 24

## ಕಣ್ಣೀರಿನಿಂದ!

ಬೆಳಿಗ್ಗೆ : ಯೋಬ 1,2
ಸಂಜೆ : ಅ.ಕೃ. 7:17–43

ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು (ಕೀರ್ತ. 126:5).

ಬಿತ್ತುವ ಬೀಜಗಳಲ್ಲಿ ಕಣ್ಣೀರನ್ನು ಬೆರೆಸಿ ಬಿತ್ತುವವನು ಹಾಡುತ್ತಾ ಅದರ ಫಲವನ್ನು ಕೊಯ್ಯುವನು. ನಾವು ಸುವಾರ್ತೆಯ ಬೀಜಗಳನ್ನು ಬಿತ್ತುತ್ತೇವೆ. ಕಾಣಿಕೆಯೆಂಬ ಬೀಜಗಳನ್ನು ಬಿತ್ತುತ್ತೇವೆ. ಬಿತ್ತಲು ಬೀಜವನ್ನು ತೆಗೆದುಕೊಂಡು ಹೋಗುವ ವ್ಯವಸಾಯಗಾರನು ಒಂದು ಬಲವಾದ ನಂಬಿಕೆಯೊಂದಿಗೆ ಹೋಗುತ್ತಾನೆ. ತಾನು ಬಿತ್ತುವ ಬೀಜ ಕೆಲವು ದಿನಗಳಲ್ಲಿ ಮೊಳೆತು ಭೂಮಿಯಲ್ಲಿ ಬೇರುಬಿಟ್ಟು ಗಿಡವಾಗಿ ಮರವಾಗಿ ಬೆಳೆಯುವದು. ಹತ್ತರಷ್ಟು ಮೂವತ್ತರಷ್ಟು ಅರವತ್ತರಷ್ಟು ನೂರರಷ್ಟು ಫಲವನ್ನು ಕೊಯ್ಯುತ್ತೇನೆ ಎಂಬ ನಿರೀಕ್ಷೆಯುಳ್ಳವನಾಗಿರುತ್ತಾನೆ. ಅದರಂತೆ ಸೇವೆಗಾಗಿ ಬಿತ್ತುವಾಗ, ಕೊಡುವಾಗ ಕಣ್ಣೀರಿನಿಂದ ಪ್ರಾರ್ಥನೆಯೊಂದಿಗೆ ಬಿತ್ತಿರಿ.

ದೇವರ ಸೇವೆಗೆಂದು ಎರಡು ಕಾಸುಗಳನ್ನು ಅಂದು ಒಬ್ಬ ವಿಧವೆ ಹಾಕಿದಾಗ, ನಿಶ್ಚಯವಾಗಿಯೇ ಅದನ್ನು ಕಣ್ಣೀರಿನೊಂದಿಗೆ ಬಿತ್ತಿರುತ್ತಾಳೆ. ಬಡತನದ ಸ್ಥಿತಿಯಲ್ಲಿರುವ ತಾನು ಕರ್ತನಿಗೆ ಅಧಿಕವಾಗಿ ಕೊಡುವದಕ್ಕಾಗಲಿಲ್ಲವೇ ಎಂಬ ವೇದನೆಯೊಂದಿಗೆ ಕಾಣಿಕೆಯನ್ನು ಹಾಕಿರಬಹುದು. ಆದರೆ ಅವಳ ಬೀಜ ಮೊಳೆಯಿತು. ಕರ್ತನು ಅವಳನ್ನು ಕುರಿತು ಸತ್ಯವೇದದಲ್ಲಿ ಸದಾಕಾಲಕ್ಕೂ ನೆನಪಿರುವಂತೆ ಬರೆದನು. ತಾಯಿಯ ಕಣ್ಣೀರಿನ ಪ್ರಾರ್ಥನೆಯಿಂದ ಮಕ್ಕಳು ದೇವರಿಂದ ಆಶೀರ್ವದಿಸಲ್ಪಡುವರು; ತಂದೆಯ ಕಣ್ಣೀರಿನ ಸಂಪಾದನೆಯಿಂದ ಮಕ್ಕಳು ಓದಿ ಅಭಿವೃದ್ಧಿಯಾಗುವರು. ಕ್ರಿಸ್ತನ ಕಣ್ಣೀರಿನಿಂದ ಇಹದಲ್ಲಿಯೂ ಪರದಲ್ಲಿಯೂ ಆಶೀರ್ವಾದ ಉಂಟು. ಅಂದು ಲಾಜರನ ಅಗಲಿಕೆಯಲ್ಲಿ ಆತನು ಸುರಿಸಿದ ಕಣ್ಣೀರು ಲಾಜರನನ್ನು ಜೀವದಿಂದ ಎಬ್ಬಿಸಿತು. ಗೆತ್ಸೇಮನೆ ತೋಟದಲ್ಲಿ ಸುರಿಸಿದ ಕಣ್ಣೀರಿನ ಫಲವಾಗಿ ಇಂದು ಲಕ್ಷಾಂತರ ಪ್ರಾರ್ಥನಾ ವೀರರು ಎಬ್ಬಿಸಲ್ಪಟ್ಟಿರುವರು. ಕಣ್ಣೀರಿನ ಹಾದಿಯಲ್ಲಿ ನಡೆದ ನಮ್ಮ ಕರ್ತನು ನಿಮ್ಮ ಕಣ್ಣೀರನ್ನು ಕಂಡು ಮನ ಮರುಗದೇ ಇರುವನೇ? ನಿಶ್ಚಯವಾಗಿ ಮನಮರುಗುವನು.

ದೇವಮಕ್ಕಳೇ, ನಿಮ್ಮ ಕಣ್ಣೀರಿನ ಪ್ರಾರ್ಥನೆಯನ್ನು ಕರ್ತನು ಎಂದಿಗೂ ತಿರಸ್ಕರಿಸುವದಿಲ್ಲ. ನಿಜವಾದ ಪಶ್ಚಾತ್ತಾಪದಿಂದ ಪ್ರಾರ್ಥಿಸುವ ನಿಮ್ಮ ಪ್ರಾರ್ಥನೆಗಳಿಗೆ ನಿಶ್ಚಯವಾಗಿ ಉತ್ತರ ಸಿಕ್ಕುವದು. ತಡಮಾಡಿದರೂ ನಮ್ಮ ದೇವರು ಉತ್ತರ ನೀಡುವ ದೇವರಾಗಿರುವನು.

*ನೆನಪಿಗೆ : ಆತನು ಅವರೊಡನೆ ವಾಸಮಾಡುವನು. ಅವರು ಆತನಿಗೆ ಪ್ರಜೆಗಳಾಗಿರುವರು. ದೇವರು ತಾನೇ ಅವರ ಸಂಗಡ ಇರುವನು. ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು (ಪ್ರಕ.21:3,4).*



ಜೂನ್ 25

## ಕಣ್ಣೀರನ್ನು ನೋಡುವನು!

ಬೆಳಿಗ್ಗೆ : ಯೋಬ 3,4
ಸಂಜೆ : ಅ.ಕೃ. 7:44–60

“ನನ್ನ ಪ್ರಿಯಳೇ, ನೀನು ಎಷ್ಟು ಚೆಲುವೆ! ಆಹಾ, ನೀನು ಎಷ್ಟು ಸುಂದರಿ! ನಿನ್ನ ನೇತ್ರಗಳು ಪಾರಿವಾಳಗಳಂತಿವೆ” (ಪ.ಗೀ. 1:15).

ಕಣ್ಣುಗಳು ಹೃದಯದ ಬಾಗಿಲು. ಒಬ್ಬನ ಕಣ್ಣಿನ ನೋಟದಿಂದಲೇ ಅವನು ಎಂಥವನು ಎಂಬುದನ್ನು ಹೇಳಿಬಿಡಬಹುದು. ಯೇಸುಕ್ರಿಸ್ತನು “ಕಣ್ಣು ದೇಹಕ್ಕೆ ದೀಪವಾಗಿದೆ; ನಿನ್ನ ಕಣ್ಣು ನೆಟ್ಟಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವದು” ಎಂದು ಹೇಳುತ್ತಾನೆ (ಮತ್ತಾ. 6:22). ಕಣ್ಣುಗಳನ್ನು ಶುದ್ಧವಾಗಿ ಇಟ್ಟುಕೊಂಡರೆ ಪ್ರಪಂಚದ ಸಕಲ ಕೆಟ್ಟತನಕ್ಕೆ ದೂರವಿರಬಹುದು.

ದೇವರು ಹೊಗಳುವ ಕಣ್ಣು ಒಂದು ಇರುವದೆಂದರೆ, ಅದು ಪಾರಿವಾಳದ ಕಣ್ಣುಗಳೇ! ಕಾಗೆಯ ಕಣ್ಣು ತಂತ್ರದಿಂದ ಕೂಡಿದ್ದು, ನವಿಲಿನ ಕಣ್ಣು ಹೆಮ್ಮೆಯಿಂದ ಕೂಡಿದ್ದು ಪಾರಿವಾಳದ ಕಣ್ಣುಗಳೋ, ಪರಿಶುದ್ಧವಾದವುಗಳು, ಕಣ್ಣೀರು ತುಂಬಿದವುಗಳು. ಜೊತೆ ಪಕ್ಷಿಯ ಪ್ರೀತಿಗಾಗಿ ಹಾತೊರೆದು ಕಣ್ಣೀರು ಸುರಿಸುವಂಥವುಗಳು. ನಿಮಗೆ ಆತ್ಮಗಳ ಭಾರ ಇರುವುದಾದರೆ ನಿಮ್ಮ ಕಣ್ಣುಗಳು ಪಾರಿವಾಳದ ಕಣ್ಣುಗಳಂತೆ ಕಣ್ಣೀರು ಸುರಿಸುತ್ತಲೇ ಇರುವವು. ಕಣ್ಣೀರಿನ ಆತ್ಮದಿಂದಲೂ, ಗೋಳಾಟದ ಆತ್ಮದಿಂದಲೂ ಪ್ರಾರ್ಥನೆಯ ಆತ್ಮದಿಂದಲೂ ತುಂಬಿರುವಿರಿ. ನಿಮ್ಮ ಕಣ್ಣುಗಳು ಸದಾ ದೇವಸಮ್ಮುಖವನ್ನೇ ಬಯಸಿ ಗೆತ್ಸೇಮನೆ ನಾಯಕನೊಂದಿಗೆ ಸೇರಿ ಗೋಳಾಡುವದನ್ನೇ ಬಯಸುವದು! ನಿಮ್ಮ ಕಣ್ಣುಗಳು ಪ್ರಾರ್ಥನಾ ಕಣ್ಣುಗಳಾ? ಆತ್ಮಗಳಿಗಾಗಿ ಕಣ್ಣೀರು ಸುರಿಸಿದ ಕ್ರಿಸ್ತನ ಕನಿಕರ ನಿಮ್ಮ ಕಣ್ಣುಗಳಲ್ಲಿ ಇರುವದಾ? ಉತ್ತಮ ಸೇವಕರೆಲ್ಲರೂ ಕಣ್ಣೀರು ಸುರಿಸುತ್ತಲೇ ಪ್ರಸಂಗಿಸಿದರು. ಆ ಕಣ್ಣೀರಿನ ಪ್ರಾರ್ಥನೆ ಕಣ್ಣೀರಿಂದ ಕೂಡಿದ ಪ್ರಸಂಗ ಸಾವಿರಾರು ಆತ್ಮಗಳ ಮನ ಪರಿವರ್ತನೆ ಮಾಡಿತು. ದೊಡ್ಡ ಉಜ್ಜೀವನವನ್ನು ತಂದಿತು. ಹೊರದೇಶದಲ್ಲಿ ಕೋಲ್ ನೆಲ್‌ಕ್ಲಾರ್ಕ್ ಎಂಬ ದೇವಸೇವಕರೊಬ್ಬರಿದ್ದರು. ಅವರು ಪ್ರತಿದಿನ ಊರಿನ ಅಂಚಿನಲ್ಲಿದ್ದ ಒಂದು ಸಭಾಂಗಣವನ್ನು ಬಾಡಿಗೆಗೆ ತೆಗೆದುಕೊಂಡು ಕಣ್ಣೀರಿನೊಂದಿಗೆ ಪ್ರಸಂಗಿಸುವರು. ವೇದಿಕೆಗೆ ಬರುವ ಮೊದಲು ಅತ್ತು ಪ್ರಾರ್ಥಿಸುತ್ತಿದ್ದರು. ಅವರ ಪ್ರಸಂಗ ಸಾಮಾನ್ಯದ್ದಾಗಿದ್ದರೂ ಕೊನೆಯಲ್ಲಿ ಕುಡುಕರು, ಕಳ್ಳರು, ಜೂಜುಕೋರರು ಮಾನಸಾಂತರ ಹೊಂದುತ್ತಿದ್ದರು. ದೇವರ ಮಕ್ಕಳು ಕಣ್ಣೀರಿನ ತಗ್ಗುಗಳನ್ನು ನೀರಿನ ಒರತೆಗಳನ್ನಾಗಿಸಿಕೊಳ್ಳುವರು. ಭಕ್ತರಾದ ಯೋಬ, ದಾವೀದ ಇವರ ಅನುಭವವೂ ಸಹ ಇದೇ ಆಗಿತ್ತು.

ದೇವಮಕ್ಕಳೇ, ಕಣ್ಣೀರಿನಿಂದ ಪ್ರಾರ್ಥಿಸಿ, ಆಸಕ್ತಿಯಿಂದ ಸೇವೆಮಾಡಿರಿ.

*ನೆನಪಿಗೆ : ಸಂಜೆಗೆ ದುಃಖವೆಂಬದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು (ಕೀರ್ತ. 30:5).*

ಜೂನ್ 26

## ಕಣ್ಣೀರಿನ ನದಿ!

ಬೆಳಿಗ್ಗೆ : ಯೋಬ 5,6,7
ಸಂಜೆ : ಅ.ಕೃ. 8:1–25

ಅವನ ಕಣ್ಣುಗಳೋ, ತುಂಬಿ ತುಳುಕುವ ತೊರೆಗಳ ಹತ್ತಿರ ತಂಗುತ್ತಲೂ, ಕ್ಷೀರದಲ್ಲಿ ಸ್ನಾನ ಮಾಡುತ್ತಲೂ ಇರುವ ಪಾರಿವಾಳಗಳಂತಿವೆ (ಪ.ಗೀ. 5:12).

ಯೇಸುಕ್ರಿಸ್ತನ ಕಣ್ಣುಗಳು ಎಂಥವುಗಳಾಗಿವೆ? ಪ್ರೀತಿಯಿಂದ ಕೂಡಿದವುಗಳು, ಕನಿಕರ ತುಂಬಿದವುಗಳು, ಅವು ಪಾರಿವಾಳದ ಕಣ್ಣುಗಳಂಥವುಗಳು. ಕ್ರಿಸ್ತನ ಕಣ್ಣುಗಳು ತುಂಬಿ ತುಳುಕುವ ತೊರೆಗಳ ಹತ್ತಿರ ತಂಗುವ ಪಾರಿವಾಳಕ್ಕೆ ಹೋಲಿಸಿರುವ ಕಾರಣವೆಂದರೆ ಆತನು ಕಣ್ಣೀರಿನಿಂದ ಪ್ರಾರ್ಥಿಸುವ ಪ್ರಾರ್ಥನಾವೀರನಾಗಿದ್ದನು.

ತಂದೆಯಾದ ದೇವರು ಕಣ್ಣೀರು ಸುರಿಸಿದ್ದಾಗಿಯೋ, ದೇವದೂತರು ಅತ್ತಿದ್ದಾಗಿಯೋ ಸತ್ಯವೇದದಲ್ಲಿ ಎಲ್ಲೂ ಹೇಳಿಲ್ಲ. ಆದರೆ ತಂದೆಯ ಕನಿಕರದೊಂದಿಗೆ ಭೂಮಿಗೆ ಇಳಿದುಬಂದ ಯೇಸುಕ್ರಿಸ್ತನು, ಅಳುವವರೊಂದಿಗೆ ಅಳಿರಿ (ರೋಮಾ. 12:15) ಎಂಬ ವಾಕ್ಯದಂತೆ. ಅಳುತ್ತಿದ್ದ ಮಾರ್ಥ, ಮರಿಯಳೊಂದಿಗೆ ಸೇರಿ ತಾನೂ ಕಣ್ಣೀರು ಸುರಿಸಿದನು. ಹೌದು, ನಿಮ್ಮ ಎಲ್ಲಾ ವೇದನೆಗಳಲ್ಲೂ ನಿಮ್ಮೊಂದಿಗೆ ವೇದನೆ ಪಡುವ ದೇವರು ನಿಮಗೆ ಇರುವನು (ಯೆಶಾ. 63:9). ಒಂದು ದಿನ ಕ್ರಿಸ್ತನು ಎಣ್ಣೇ ಮರಗಳ ಗುಡ್ಡದಲ್ಲಿ ಪ್ರಾರ್ಥಿಸಿ ಬರುವ ದಾರಿಯಲ್ಲಿ ಯೆರೂಸಲೇಮನ್ನು ನೋಡಿ ಕಣ್ಣೀರುಬಿಟ್ಟು ಅತ್ತು "ನೀನಾದರೂ ಸಮಾಧಾನಕ್ಕೆ ಬೇಕಾದದ್ದನ್ನು ಇದೇ ದಿನದಲ್ಲಿ ತಿಳಿದುಕೊಂಡರೆ ಎಷ್ಟೋ ಒಳ್ಳೇದು. ಆದರೆ ಈಗ ಅದು ನಿನ್ನ ಕಣ್ಣಿಗೆ ಮರೆಯಾಗಿದೆ" ಅಂದನು (ಲೂಕ. 19:41,42). ಗೆತ್ಸೇಮನೆ ತೋಟದಲ್ಲಿ ಆತನ ಕಣ್ಣುಗಳು ಕೊಳವಾಗಿ ಮಾರ್ಪಟ್ಟಿತು. ಆತನ ಬೆವರು ದೊಡ್ಡ ರಕ್ತದ ಹನಿಗಳಂತೆ ಭೂಮಿಯಲ್ಲಿ ಬಿತ್ತು (ಲೂಕ. 22:44). ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ, ಮರಣಕ್ಕೆ ತಪ್ಪಿಸಿ ಕಾಪಾಡಲು ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಮಾಡಿದನು (ಇಬ್ರಿ. 5:7). ಕಣ್ಣೀರು ತುಂಬಿದ ಕಣ್ಣುಗಳುಳ್ಳ ಕರ್ತನು ನಿಮಗೂ ಕೃಪೆಯ ಆತ್ಮವನ್ನೂ, ಗೋಳಾಟದ ಆತ್ಮವನ್ನೂ, ವಿಜ್ಞಾಪನೆಯ ಆತ್ಮವನ್ನೂ ಕೊಡಲು ಬಯಸುವನು (ಜೆಕರ್ಯ 12:10). ಕ್ರಿಸ್ತನೊಂದಿಗೆ ಪವಿತ್ರಾತ್ಮನೂ ನಿಮ್ಮೊಳಗೆ ಬರುವಾಗ, ಕಣ್ಣೀರಿನ ಆತ್ಮವೂ, ಹಂಬಲಿಸುವ ಆತ್ಮವೂ ವಿಜ್ಞಾಪನೆಯ ಆತ್ಮವೂ ಕೂಡಿಬರುವದು. ಪಾರಿವಾಳದಂತೆ ಮೊರೆಯಿಟ್ಟೆನು. ಎಂದು ಪ್ರವಾದಿಯಾದ ಯೆಶಾಯನು ಹೇಳುತ್ತಾನೆ (ಯೆಶಾ. 38:14).

ದೇವಮಕ್ಕಳೇ, ಪವಿತ್ರಾತ್ಮನೊಂದಿಗೆ ಸೇರಿ ಕಣ್ಣೀರಿನಿಂದ ಪ್ರಾರ್ಥಿಸಲು ತೀರ್ಮಾನಿಸಿರಿ. ಆಗ, ಅಧಿಕವಾದ ಸಮಯ ಪ್ರಾರ್ಥಿಸಬಹುದು. ಮನ ಮರುಕದಿಂದ ಪ್ರಾರ್ಥಿಸಬಹುದು.

*ನೆನಪಿಗೆ : ನಾನು ಬಾನಕ್ಕಿಯಂತೆಯೂ, ಬಕದ ಹಾಗೂ ಕೀಚುಗುಟ್ಟಿದೆನು, ಪಾರಿವಾಳದಂತೆ ಮೊರೆಯಿಟ್ಟೆನು (ಯೆಶಾ. 38:14).*



ಜೂನ್ 27

## ಕಣ್ಣೀರನ್ನು ಒರೆಸುವವನು!

ಬೆಳಿಗ್ಗೆ : ಯೋಬ 8,9,10
ಸಂಜೆ : ಅ.ಕೃ. 8:26–40

ಯೆಹೋವನು ಎಲ್ಲರ ಮುಖದಲ್ಲಿನ ಕಣ್ಣೀರನ್ನು ಒರೆಸಿಬಿಡುವನು. ತನ್ನ ಪ್ರಜೆಯ ಅವಮಾನವನ್ನು ಭೂಮಂಡಲದಿಂದಲೇ ತೊಲಗಿಸುವನು. ಯೆಹೋವನೇ ಇದನ್ನು ನುಡಿದಿದ್ದಾನೆ (ಯೆಶಾ. 25:8).

ನಿಮ್ಮ ಕಣ್ಣೀರನ್ನು ನೋಡಿದವರು ಅಲಕ್ಷ್ಯದಿಂದ ನೋಡಿಯೂ ನೋಡದಂತೆ ಹೋಗಿಬಿಟ್ಟರೆ ನಿಮ್ಮ ಆಂತರ್ಯ ಎಷ್ಟೊಂದು ವೇದನೆ ಪಡುವದಲ್ಲವೇ? ಕೆಲವು ತಂದೆ ತಾಯಿಗಳು ತಮ್ಮ ಕುರಿತಾಗಿ ತಮ್ಮ ಮಕ್ಕಳ ವರ್ತನೆಯಿಂದ ಬಹಳವಾಗಿ ಕಣ್ಣೀರು ಸುರಿಸುವದನ್ನು ನೋಡುತ್ತೇವೆ. ಹಾಗೆಯೇ ಕೆಲವು ಪುರುಷರು ತಮ್ಮ ಹೆಂಡತಿಯ ಕಣ್ಣೀರಿನ ಬಗ್ಗೆ ಅಸಡ್ಡೆ ತೋರಿಸುತ್ತಾರೆ. ಆದರೆ ನಮ್ಮ ಪ್ರೀತಿಯ ರಕ್ಷಕನನ್ನು ನೋಡಿರಿ. ಆತನು ನಿಮ್ಮ ಕಣ್ಣೀರನ್ನು ಒರೆಸುವಾತನು (ಯೆಶಾ. 25:8). ನಿಮ್ಮ ಕಣ್ಣೀರನ್ನು ಲೆಕ್ಕದಲ್ಲಿಡುವನು (ಕೀರ್ತ. 56:8). ನಿಮ್ಮ ಕಣ್ಣೀರೊಂದಿಗೆ ತಾನೂ ಕಣ್ಣೀರು ಸುರಿಸುವಾತನು (ಯೋಹಾ. 11:35).

ಒಂದು ದಿನ ಅರಸನಾದ ಹಿಜ್ಕೀಯನು, ದೇವರ ಮುಂದೆ ಕಣ್ಣೀರಿಟ್ಟು ಅತ್ತನು. ಯಾಕೆಂದರೆ ಅವನ ಮರಣದ ಗಳಿಗೆ ನಿಶ್ಚಯವಾಗಿತ್ತು. ಅವನ ಮನೆಯ ಕಾರ್ಯಗಳನ್ನೆಲ್ಲಾ ಸರಿಪಡಿಸುವಂತೆ ಪ್ರವಾದಿಯಾದ ಯೆಶಾಯನು ಹೇಳಿಬಿಟ್ಟಿದ್ದನು. ಆದ್ದರಿಂದ ಅವನು ಗೋಡೆಯ ಕಡೆ ಮುಖ ಮಾಡಿಕೊಂಡು ಬಹಳವಾಗಿ ಅತ್ತನು. ಕೂಡಲೆ ಕರ್ತನು ಯೆಶಾಯನನ್ನು ಪುನಃ ಹಿಜ್ಕೀಯನ ಬಳಿಗೆ ಕಳುಹಿಸಿ, ನಿನ್ನ ಕಣ್ಣೀರನ್ನು ಕಂಡು ನಿನ್ನನ್ನು ಗುಣಪಡಿಸಿದ್ದೇನೆ, ನಿನ್ನ ಆಯುಷ್ಕಾಲಕ್ಕೆ ಇನ್ನೂ ಹದಿನೈದು ವರ್ಷಗಳು ಕೂಡಿಸಿಕೊಟ್ಟಿದ್ದೇನೆ ಎಂದು ಹೇಳಿದನು. ಎಷ್ಟೊಂದು ಅಕ್ಕರೆಯುಳ್ಳ ದೇವರು ಅಲ್ಲವೇ! ಅರಸನಾದ ದಾವೀದನು ಹೇಳುತ್ತಾನೆ, "ನನ್ನ ಕಣ್ಣೀರು ನಿನ್ನ ಬುದ್ದಲಿಯಲ್ಲಿ ತುಂಬಿದೆ. ಅದರ ವಿಷಯ ನಿನ್ನ ಪುಸ್ತಕದಲ್ಲಿ ಬರೆದಿದೆಯಲ್ಲಾ" ಎಂದು (ಕೀರ್ತ. 56:8). ದೇವರ ಮಕ್ಕಳು ಭೂಲೋಕದಲ್ಲಿ ಸುರಿಸುವ ಕಣ್ಣೀರು ಪರಲೋಕದಲ್ಲಿರುವ ದೇವರ ಬುದ್ದಲಿಯಲ್ಲಿ ಬೀಳುತ್ತಿರುವದು. ಆತನು ಅದನ್ನು ಲೆಕ್ಕದಲ್ಲಿಡುವನು. ಮಾತ್ರವಲ್ಲ, ಅದಕ್ಕೆ ತಕ್ಕ ರೀತಿಯಲ್ಲಿ ಉತ್ತರ ಕೊಟ್ಟು ಅವರ ಕಣ್ಣೀರೆಲ್ಲವನ್ನೂ ಒರೆಸುವನು.

ದೇವಮಕ್ಕಳೇ, ನೀವು ಒಂಟಿಯಾಗಿ ಕಣ್ಣೀರು ಸುರಿಸುವಾಗ ಕರ್ತನೂ ನಿಮಗಾಗಿ ಕಣ್ಣೀರು ಸುರಿಸುವನು. ಬರೀ ಅನುತಾಪ ಪಟ್ಟು ಸುಮ್ಮನೆ ಆಗಿಬಿಡುವದಿಲ್ಲ. ಅದನ್ನು ಒರೆಸುವದು ಮಾತ್ರವಲ್ಲ, ಅದನ್ನು ಆನಂದಬಾಷ್ಪವಾಗಿ ಮಾರ್ಪಡಿಸುವನು.

*ನೆನಪಿಗೆ : ಯಜ್ಞದ ಕುರಿಯಾದಾತನು ಅವರಿಗೆ ಕುರುಬನಂತಿದ್ದು ಜೀವಜಲದ ಒರತೆಗಳ ಬಳಿಗೆ ನಡಿಸುತ್ತಾನೆ. ದೇವರು ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು (ಪ್ರಕ. 7:17).*

| ಜೂನ್ 28 | ಕಣ್ಣೀರು ಒಂದು ಜೀವಬುಗ್ಗೆ! | ಬೆಳಿಗ್ಗೆ : ಯೋಬ 11,12,13<br>ಸಂಜೆ : ಅ.ಕೃ. 9:1–19 |
| --- | --- | --- |

## ಕಣ್ಣೀರು ಒಂದು ಜೀವಬುಗ್ಗೆ!

ಅಯ್ಯೋ, ನನ್ನ ಶಿರಸ್ಸು ಜಲಮಯವಾಗಿಯೂ, ನನ್ನ ನೇತ್ರಗಳು ಕಣ್ಣೀರಿನ ಬುಗ್ಗೆಯಾಗಿಯೂ ಇದ್ದರೆ ಎಷ್ಟೋ ಲೇಸು! (ಯೆರೆ. 9:1).

ಅಣ್ವಸ್ತ್ರಗಳಿಗೆ ಇಲ್ಲದೇ ಇರುವ ದೊಡ್ಡ ಬಲವು ಕಣ್ಣೀರಿನ ಪ್ರಾರ್ಥನೆಗೆ ಇರುವದು. ದೇವರೇ ಕಣ್ಣೀರಿನ ಆತ್ಮವನ್ನು ನನಗೆ ನೀಡು ಎಂದು ನೀವು ಪ್ರಾರ್ಥಿಸುವಾಗ, ನಿಶ್ಚಯವಾಗಿ ಕಣ್ಣೀರಿನಿಂದ ಗೋಳಾಡಲು ವಿಜ್ಞಾಪಿಸಲು ಕರ್ತನು ಜಜ್ಜಿದ ಹೃದಯವನ್ನು ನೀಡುವನು.

ಪ್ರವಾದಿಯಾದ ಯೆರೆಮೀಯನು ಕಣ್ಣುಗಳಿಂದ ಒಂದು ಬುಗ್ಗೆಯು ಹೊರಟಿದ್ದರೆ ಎಷ್ಟೋ ಲೇಸು ಎಂದು ನೆನಸಿ ಪರಿತಪಿಸಿದನು. ಸಾಧಾರಣವಾದ ಕಣ್ಣೀರು ಬತ್ತಿಹೋಗುವದು. ಆದರೆ ದೇವರು ಕೊಡುವ ಕಣ್ಣೀರಿನ ಬುಗ್ಗೆ ಬತ್ತಿಹೋಗುವದಿಲ್ಲ. ಅದು ಇತರರಿಗಾಗಿ ಪ್ರಾರ್ಥಿಸುವ ಭಾರವನ್ನು ತರುವದು ಕಣ್ಣೀರು ಅವಮಾನದ ಗುರುತಲ್ಲ. ಅದು ದೇವಬಲದ ಗುರುತು! ಕ್ರಿಸ್ತನ ಉದಾಹರಣೆಯ ಗುರುತು. ಆದ್ದರಿಂದಲೇ ಅದು ನಮ್ಮ ಜಯದ ಗುರುತಾಗಿದೆ. ನೀವು ನಿಮ್ಮ ಜ್ಞಾನದಿಂದ ಪ್ರಾರ್ಥಿಸುವ ಪ್ರಾರ್ಥನೆ ಬೇರೆ ಪವಿತ್ರಾತ್ಮನಿಂದ ಪ್ರೇರಿಸಲ್ಪಟ್ಟು ಪ್ರಾರ್ಥಿಸುವ ಪ್ರಾರ್ಥನೆ ಬೇರೆ. ನೀವು ಕಾಲುನಡಿಗೆಯಲ್ಲೂ ಪ್ರಯಾಣಿಸಬಹುದು, ಕಾರಿನಲ್ಲೂ ಪ್ರಯಾಣಿಸಬಹುದು. ಕಾಲ್ನಡಿಗೆಯಲ್ಲಿ ಹೋಗುವಾಗ ಸ್ವಲ್ಪ ದೂರ ಹೋಗುವಷ್ಟರಲ್ಲಿ ಬಳಲಿಹೋಗುತ್ತೀರಿ. ಆದರೆ ಕಾರಿನಲ್ಲಿ ಪ್ರಯಾಣಿಸುವಾಗ ಕಾರಿನಲ್ಲಿರುವ ಎಂಜಿನ್ ನಿಮ್ಮನ್ನು ಎಳೆದುಕೊಂಡು ಹೋಗುವದು. ಆಯಾಸವಿಲ್ಲದೆ ಸುಲಭವಾಗಿ ಸೇರಬೇಕಾದ ಸ್ಥಳವನ್ನು ತಲುಪುವಿರಿ. ಪ್ರಾರ್ಥನೆಯಲ್ಲೂ, ನಿಮ್ಮ ಬುದ್ಧಿಯಿಂದ ಪ್ರಾರ್ಥಿಸುವಾಗ ಬೇಗ ಬಳಲಿಹೋಗುವಿರಿ. ಹೆಚ್ಚುಹೊತ್ತು ಪ್ರಾರ್ಥಿಸಲಾಗದು. ಆದರೆ ಪವಿತ್ರಾತ್ಮನ ಕೈಯಲ್ಲಿ ಒಪ್ಪಿಸಿಕೊಟ್ಟು ಪ್ರಾರ್ಥಿಸುವಾಗ ಆತ್ಮನಾದಾತನು ನಿಮ್ಮ ಬಲಹೀನತೆಗಳಲ್ಲಿ ಸಹಾಯ ಮಾಡುವನು. "ನೀವು ಏನು ಬೇಡಿಕೊಳ್ಳಬೇಕೋ ನಿಮಗೆ ಗೊತ್ತಿಲ್ಲವಾದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದ ನರಳಾಟದಿಂದ ನಿಮಗೋಸ್ಕರ ಬೇಡಿಕೊಳ್ಳುವನು" (ರೋಮಾ. 8:26). ಆತ್ಮನಾದಾತನು ತೂಕಡಿಸುವದಿಲ್ಲ, ನಿದ್ರಿಸುವದಿಲ್ಲ. ಆತನು ನಿಮಗೆ ಬಿನ್ನಹದ ಆತ್ಮವನ್ನೂ, ಕೃಪೆಯ ಆತ್ಮವನ್ನೂ ನೀಡುವನು.

ದೇವಮಕ್ಕಳೇ, ನೀವು ಸಮಾಧಾನವಿಲ್ಲದವರಾಗಿರುವಿರಾ? ಕಣ್ಣೀರಿನಿಂದ ಪ್ರಾರ್ಥಿಸುವದನ್ನು ಪ್ರಯತ್ನಿಸಿ ನೋಡಿರಿ. ನಿಮ್ಮ ಚಿಂತೆಗಳನ್ನು ಕಷ್ಟಗಳನ್ನು ಕಣ್ಣೀರಿನೊಂದಿಗೆ ದೇವರಿಗೆ ತಿಳಿಯಪಡಿಸಿರಿ.

*ನೆನಪಿಗೆ : ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಪಾಪ ಮಾತ್ರ ಮಾಡಲಿಲ್ಲ (ಇಬ್ರಿ. 4:15).*



| ಜೂನ್ 29 | ಕಣ್ಣೀರಿನ ಬೀಜಗಳು! | ಬೆಳಿಗ್ಗೆ : ಯೋಬ 14,15,16<br>ಸಂಜೆ : ಅ.ಕೃ. 9:20–43 |
| --- | --- | --- |

## ಕಣ್ಣೀರಿನ ಬೀಜಗಳು!

ದೇವದೂತನ ಸಂಗಡ ಹೋರಾಡಿ ಗೆದ್ದನು. ಅಳುತ್ತಾ ಆತನ ಕೃಪೆಯನ್ನು ಬೇಡಿಕೊಂಡನು (ಹೋಶೆಯ 12:4).

ಈ ಮೇಲಿನ ವಾಕ್ಯದಲ್ಲಿ ಮೂಲಪಿತೃವಾದ ಯಾಕೋಬನ ಕುರಿತು ಓದುತ್ತೇವೆ. ಅದು ಯಾಕೋಬನು ಕಣ್ಣೀರಿನೊಂದಿಗೆ ಬಿತ್ತಿದ ಒಂದು ಅನುಭವವಾಗಿದೆ. ಅವನು ದೇವರ ಬಳಿ ಕಣ್ಣೀರಿಟ್ಟನು, ಬೇಡಿದನು. ದೇವರು ಯಾಕೋಬನನ್ನು ಆಶೀರ್ವದಿಸಿದನು. ನಿಮ್ಮ ಪ್ರಾರ್ಥನೆಯನ್ನು ಕಣ್ಣೀರಿನೊಂದಿಗೆ ಬಿತ್ತುವದನ್ನು ಕಲಿತುಕೊಳ್ಳಿರಿ. ಅದರೊಂದಿಗೆ ಉಪವಾಸವನ್ನೂ ಸೇರಿಸಿಕೊಂಡರೆ ನೂರರಷ್ಟು ಫಲವನ್ನು ಕಾಣಬಹುದು.

ಸತ್ಯವೇದದಲ್ಲಿ ಅನೇಕ ರೀತಿಯ ಪ್ರಾರ್ಥನೆಗಳನ್ನು ಕುರಿತು ಬರೆಯಲ್ಪಟ್ಟಿರುವದು. ಕೆಲವು ಪ್ರಾರ್ಥನೆಗಳು ನಂಬಿಕೆಯಿಂದ ಕೂಡಿದ ಪ್ರಾರ್ಥನೆಗಳು. ಅವು ವ್ಯಾಧಿಗ್ರಸ್ಥರನ್ನು, ಅಂಗ ಹೀನರನ್ನು ರಕ್ಷಿಸುವದು. ಕೆಲವು ಪ್ರಾರ್ಥನೆಗಳು ನಿರ್ದಿಷ್ಟವಾದ ಪ್ರಾರ್ಥನೆಗಳು. ಅವು ಮಳೆ ಬರದಂತೆ ಆಕಾಶವನ್ನು ಮುಚ್ಚುವಂಥವುಗಳು. ಕೆಲವು ಪ್ರಾರ್ಥನೆಗಳು ಆಸಕ್ತಿಯಿಂದ ಕೂಡಿದ ಪ್ರಾರ್ಥನೆಗಳು ಅಧಿಕ ಬಲವುಳ್ಳದ್ದಾಗಿರುವದು. ಪಾಪಗಳನ್ನು ಅರಿಕೆ ಮಾಡಿ ಪ್ರಾರ್ಥಿಸುವಾಗ ಪಾಪಕ್ಷಮಾಪಣೆಯೂ ದೇವರ ಕರುಣೆಯೂ ದೊರಕುವದು. ಈ ಎಲ್ಲಾ ಪ್ರಾರ್ಥನೆಗಳಿಗಿಂತಲೂ ಕಣ್ಣೀರಿನೊಂದಿಗೆ ಮಾಡುವ ಪ್ರಾರ್ಥನೆ ಅಧಿಕವಾದ ಶಕ್ತಿಯಿಂದ ಕೂಡಿದ್ದಾಗಿರುವದು. ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು. ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವರು ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವರು (ಕೀರ್ತ. 126:5,6) ಎಂದು ಸತ್ಯವೇದವು ಹೇಳುತ್ತದೆ. ಇಂದು ನೀವು ಕಣ್ಣೀರಿನಿಂದ ಕೂಡಿದವರಾಗಿರಬಹುದು. ಆದರೆ ಈ ಕಣ್ಣೀರು ಒಂದು ದಿನ ಆನಂದಬಾಷ್ಪವಾಗಿ ಮಾರ್ಪಡುವದು. ಯಾಕೋಬನು ರಾತ್ರಿಯೆಲ್ಲಾ ದೇವರ ಸಮ್ಮುಖದಲ್ಲಿ ಅತ್ತು ನೀನು ನನ್ನನ್ನು ಆಶೀರ್ವದಿಸದ ಹೊರತು ನಿನ್ನನ್ನು ಬಿಡುವದಿಲ್ಲವೆಂದು ಬೇಡಿದನು. ಆ ಪ್ರಾರ್ಥನೆ ಅವನ ಜೀವಿತದಲ್ಲಿ ಒಂದು ದೊಡ್ಡ ತಿರುವನ್ನೇ ತಂದಿತು. ಮೋಸಗಾರನೆಂದು ಕರೆಯಲ್ಪಟ್ಟವನು. ಇಸ್ರಾಯೇಲ್ಯನೆಂದು, ಅಂದರೆ ದೇವಪ್ರಭುವೆಂದು ಕರೆಯಲ್ಪಟ್ಟನು. ಇಸ್ರಾಯೇಲ್ಯರ ಮೂಲಪಿತೃಗಳಲ್ಲಿ ಮುಖ್ಯನಾದವನಾದನು.

ದೇವಮಕ್ಕಳೇ, ಕಣ್ಣೀರನ್ನು ಕುರಿತು ಅಧಿಕವಾಗಿ ತಿಳಿದಾತನು, ನಮ್ಮ ದೇವರಾದ ಯೇಸುಕ್ರಿಸ್ತನು ಕಣ್ಣೀರಿನೊಂದಿಗೆ ಬಿತ್ತುವದನ್ನು, ಪ್ರಾರ್ಥಿಸುವದನ್ನು ಆತನು ನಿಮಗೆ ಕಲಿಸಿಕೊಟ್ಟಿರುವನು. ಆದ್ದರಿಂದ ಕಣ್ಣೀರಿನೊಂದಿಗೆ ನಿಮ್ಮ ಬಿನ್ನಹಗಳನ್ನು ಕರ್ತನ ಬಳಿ ಇಡಿರಿ. ನೂರರಷ್ಟು ಆಶೀರ್ವಾದಗಳನ್ನು ಇಹದಲ್ಲಿಯೂ ಪರದಲ್ಲಿಯೂ ಪಡೆಯುವಿರಿ.

*ನೆನಪಿಗೆ : ದೇವರು ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು (ಪ್ರಕ. 7:17).*

ಜೂನ್ 30

## ಕಣ್ಣೀರಿನಲ್ಲಿ ಆದರಣೆ!

ಬೆಳಿಗ್ಗೆ : ಯೋಬ 17,18,19
ಸಂಜೆ : ಅ.ಕೃ. 10:1–23

"ಯಾಕೆ ಅಳುತ್ತೀ? ಯಾರನ್ನು ಹುಡುಕುತ್ತೀ?" (ಯೋಹಾನ 20:15).

ಯಾಕೆ ಅಳುತ್ತೀ? ಎಂಬ ಕರ್ತನ ಧ್ವನಿ ಮಗ್ದಲದ ಮರಿಯಳ ಆಂತರ್ಯವನ್ನು ಸಂತೈಸಿತು. ಪರವಶಗೊಳಿಸಿತು. "ಗುರುವೇ" ಎಂದು ಸಂತಸದಿಂದ ಕರೆದಳು. ಜೀವಂತವಿರುವ ತನ್ನ ರಕ್ಷಕನನ್ನು ಮುಖಾಮುಖಿ ಕಂಡಳು. ಅವಳ ಕಣ್ಣೀರೆಲ್ಲಾ ಮರೆಯಾಯಿತು. ಹೌದು, ನೀವು ಕರ್ತನನ್ನು ಕಣ್ಣೀರಿನೊಂದಿಗೆ ಹುಡುಕುವಿರಾದರೆ ಆತನು ನಿಮ್ಮ ಕಣ್ಣೀರನ್ನು ಆನಂದಬಾಷ್ಪವನ್ನಾಗಿಸುವನು. "ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು. ಇನ್ನು ಮರಣವಿರುವದಿಲ್ಲ; ಇನ್ನು ದುಃಖವಾಗಲಿ, ಗೋಳಾಟವಾಗಲಿ, ಕಷ್ಟವಾಗಲಿ ಇರುವದಿಲ್ಲ. ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕ.21:4) ಎಂದು ಸತ್ಯವೇದ ಹೇಳುತ್ತದೆ.

ಅಪೊ. ಪೇತ್ರನ ಕಣ್ಣೀರು ನಮ್ಮ ಆಂತರ್ಯವನ್ನು ಕಲಕುವದು. ಒಬ್ಬ ಕೆಲಸದವಳು "ನೀನು ಯೇಸುವಿನೊಂದಿಗೆ ಇದ್ದವನು" ಎಂದು ಹೇಳಿದಾಗ, ದಿಢೀರೆಂದು ಮರಣಭಯ ಅವನನ್ನು ಹಿಡಿಯಿತು. ಕ್ರಿಸ್ತನನ್ನು ಅರಿಯೆನೆಂದು ಶಪಿಸುತ್ತಾ, ಆಣೆ ಇಟ್ಟುಕೊಳ್ಳಲು ಪ್ರಾರಂಭಿಸಿದನು. ಆಗ ಯೇಸು ಪೇತ್ರನ ಕಡೆಗೆ ತಿರುಗಿನೋಡಿದನು. ಕೋಳಿ ಕೂಗುವದಕ್ಕೆ ಮುಂಚೆ, ನೀನು ನನ್ನನ್ನು ಅರಿಯೆನೆಂದು ಮೂರು ಬಾರಿ ಅಲ್ಲಗಳೆಯುವಿ ಎಂದು ಹೇಳಿದ್ದನ್ನು ಪೇತ್ರನು ಜ್ಞಾಪಿಸಿಕೊಂಡು ಹೊರಗೆ ಹೋಗಿ ದುಃಖದಿಂದ ಅತ್ತನು (ಮತ್ತಾ. 26:75). ಅತ್ತ ಪೇತ್ರನನ್ನು ದೇವರು ಸಂತೈಸಿದನು. ನಿಮ್ಮಲ್ಲಿನ ಮನಃಸಾಕ್ಷಿ ಬಾಧಿಸುವಾಗ ದೇವರ ಬಳಿ ಕಣ್ಣೀರಿಟ್ಟು ಪ್ರಾರ್ಥಿಸಿರಿ. ಆತನು ನಿಮ್ಮನ್ನು ಕ್ಷಮಿಸಿ ಸಂತೈಸುವನು. ಅವನ ಬಲಹೀನತೆಯನ್ನು ಮನ್ನಿಸಿದನು. ಅವನ ಸೇವೆಯನ್ನು ಪುನಃ ಕಟ್ಟಿ ಎಬ್ಬಿಸಿದನು. ಪ್ರಧಾನ ಅಪೊಸ್ತಲನನ್ನಾಗಿ ಅಭಿವೃದ್ಧಿ ಪಡಿಸಿದನು. ಇಸ್ರಾಯೇಲ್ಯರು ಬ್ಯಾಬಿಲೋನಿಗೆ ಸೆರೆ ಒಯ್ಯಲ್ಪಟ್ಟಾಗ ಎಪ್ಪತ್ತು ವರ್ಷಗಳು ಅವರಿಗೆ ದೇವರ ವಾಕ್ಯ ಸಿಗಲಿಲ್ಲ. ಆಗ ನೆಹೆಮೀಯನ ಮೂಲಕ ಅವರಿಗೆ ತನ್ನ ವಾಕ್ಯ ಸಿಗುವಂತೆ ಮಾಡಿದನು. ಜನರೆಲ್ಲರೂ ಧರ್ಮೋಪದೇಶ ವಾಕ್ಯಗಳನ್ನು ಕೇಳಿದಾಗ, ಅತ್ತದ್ದರಿಂದ ಈ ದಿನವು ನಿಮ್ಮ ದೇವರಾದ ಯೆಹೋವನಿಗೆ ಪರಿಶುದ್ಧ ದಿನವಾಗಿರುವದರಿಂದ ನೀವು ದುಃಖಿಸುತ್ತಾ ಅಳಬೇಡಿರೆಂದು ನೆಹೆಮೀಯನು ಹೇಳಿದನು (ನೆಹೆ. 8:9). ಎಲೀಯನು ಪರಲೋಕಕ್ಕೆ ಎತ್ತಲ್ಪಟ್ಟಾಗ, ಎಲೀಷನು "ನನ್ನ ತಂದೆಯೇ, ನನ್ನ ತಂದೆಯೇ, ಇಸ್ರಾಯೇಲ್ಯರಿಗೆ ರಥರಥಾಶ್ವಗಳಾಗಿದ್ದವನೇ" ಎಂದು ಕೂಗಿ ಹಲುಬಿದಾಗ (2 ಅರ. 2:12) ಕರ್ತನು ಅವನ ಕಣ್ಣೀರನ್ನು ಕಂಡನು. ಎಲೀಯನ ಮೇಲಿದ್ದ ಕಂಬಳಿ ಎಲೀಷನ ಮೇಲೆ ಬಿದ್ದಿತು. ಅವನಲ್ಲಿ ಎರಡರಷ್ಟು ಆತ್ಮನ ವರ ಬಂದು ಸೇರಿತು. ದೇವಮಕ್ಕಳೇ, ಕಣ್ಣೀರಿನಿಂದ ಪ್ರಾರ್ಥಿಸಿ, ಆತ್ಮನ ವರಗಳನ್ನು ಕರ್ತನಿಂದ ಪಡೆದುಕೊಳ್ಳಿರಿ.

*ನೆನಪಿಗೆ : "ನಾನೂ ಯೆರೂಸಲೇಮನ್ನು ದೃಷ್ಟಿಸುತ್ತಾ ಉಲ್ಲಾಸಿಸುವೆನು. ಅದರ ಜನರನ್ನು ರಕ್ಷಿಸುತ್ತಾ ಹರ್ಷಗೊಳ್ಳುವೆನು. ರೋದನ ಶಬ್ದವೂ ಪ್ರಲಾಪಧ್ವನಿಯೂ ಅಲ್ಲಿ ಇನ್ನು ಕೇಳಿಸವು (ಯೆಶಾ. 65:19).*



ಜೂನ್